ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 22

ಜೂನ್ 1, 2003 ಬೆಲೆ ರೂ. 3.00




ಮೇ 21 ದೇಶದ ತುಂಬಾ ಮುಷ್ಕರವೋ ಮುಷ್ಕರ

ಉಕ್ಕಿ ಹರಿದ ಜನ ಪ್ರತಿರೋಧ

ವಿಶ್ವಬ್ಯಾಂಕ್ ಸಮ್ಮೇಳನ ಅಭಿವೃದ್ಧಿ ಅವಸಾನ


ರೇಷನ್ ಕಾರ್ಡ್ ಕಿತ್ತುಕೊಳ್ತಾರೋ....

ವೆನಿಜುಲಾ ಕ್ರಾಂತಿಗೆ ಒಂದು ವರುಷ



ಪ.ಬಂಗಾಳ : ಎಡರಂಗ ಹ್ಯಾಟ್ರಿಕ್ ತೃಣಮೂಲ ಮುಖಭಂಗ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

28



ಕಳೆದ ಸಂಚಿಕೆಯಲ್ಲಿ ಬ್ರಿಟಿಷರ ವ್ಯೂಹಾತ್ಮಕ ತಂತ್ರವಾದ 'ಮೈನಾ ಯೋಜನೆ' ಜಾರಿಗೆ, ಅದರ ವಿವರವನ್ನು ಭಾರತದ ಎಲ್ಲಾ ರಾಜಕೀಯ ಪಕ್ಷಗಳಿಗೆ ತಿಳಿಸಿದ ಸೈನಿಕ ಸಂಘಟನೆ, ಕಮ್ಯುನಿಸ್ಟರನ್ನು ಬಿಟ್ಟು ಉಳಿದ ಪಕ್ಷಗಳಿಂದ ಇದರ ಬಗ್ಗೆ ವ್ಯಕ್ತಗೊಂಡ ನಿರುತ್ಸಾಹ, ಸೇನೆಯಲ್ಲಿನ ಯಾವುದೇ ಚೌಕಾಸಿಯನ್ನು ಬಂಡಾಯವೆಂದು ಪರಿಗಣಿಸಲಾಗುತ್ತಿದ್ದದ್ದು, ಭಾರತೀಯ ಸೈನಿಕರ ವಶದಲ್ಲಿದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡದ್ದು ಈ ಬಗ್ಗೆ ಓದಿರುವಿರಿ. ಮುಂದೆ....

— ಕನ್ನಡಕ್ಕೆ: ವಿಶ್ವ ಕುಂದಾಪುರ —

ಕಮ್ಯುನಿಸ್ಟರಿಂದ ಬ್ರಿಟಿಷರ ಕುತಂತ್ರ ಬಹಿರಂಗ

ಸೇನೆ ತೊರೆದು ಮುಂಬಯಿಗೆ ಹೋಗಲು ನಾನು ತಕ್ಷಣವೇ ನಿರ್ಧರಿಸಿದೆ. ನನ್ನ ನಂಬಿಕಸ್ಥ ಆರ್ಡರ್ಲಿಯನ್ನು ಮಂಡಳಿಯ ಕೇಂದ್ರ ಕಚೇರಿಯಿರುವ ದೆಹಲಿಗೆ ಕಳಿಸಿದೆ. ಆತನೊಂದಿಗೆ ಕೆಳಗಿನ ಸಲಹೆಗಳನ್ನು ರವಾನಿಸಿದೆ.

"ಬ್ರಿಟೀಷ್ ನೌಕಾಪಡೆ ನಮ್ಮ ನೌಕೆಗಳತ್ತ ಗುಂಡು ಹಾರಿಸಿದ ತಕ್ಷಣವೇ ಸಾರ್ವತ್ರಿಕ ಬಂಡಾಯವೇಳಲು ನಮ್ಮ ಸಂಘಟನೆಗಳಿಗೆ ಕರೆ ನೀಡಬೇಕು. ನಾವು ಮಾರ್ಚ್‌ವರೆಗೆ ಕಾಯಲಾಗದು. ನೌಕಾಪಡೆ ಬಂಡಾಯವನ್ನು ಬ್ರಿಟಿಷರು ಹತ್ತಿಕ್ಕಿದರೆ ಹಾಗೂ ಅವರೊಂದಿಗೆ ಕೈಜೋಡಿಸಲು ನಾವು ವಿಳಂಬ ಮಾಡಿದರೆ ಎಲ್ಲವೂ ಮುಗಿದಂತೆಯೇ ಸರಿ"

ಮರುದಿನ, ನಾನು ರಾವಲ್ಪಿಂಡಿಯಿಂದ ಮುಂಬಯಿಗೆ ಹೋಗಲು ರೈಲು ಹತ್ತುವ ವೇಳೆ ವಲ್ಲಭಬಾಯಿ ಪಟೇಲ್ ಮಧ್ಯಸ್ಥಿಕೆ ವಹಿಸುತ್ತಿರುವ ಸುದ್ದಿ ಬಂತು. ಮುಷ್ಕರವನ್ನು ವಾಪಸು ಪಡೆಯುವಂತೆ ಪಟೇಲ್ ಮತ್ತು ಓಟಿನ್‌ಲೆಕ್ ಜಂಟಿ ಹೇಳಿಕೆ ಹೊರಡಿಸಿದ್ದರು.

ಬ್ರಿಟಿಷರು ದೇಶ ಬಿಟ್ಟು ಹೋಗುತ್ತಾರೆ ಎಂಬುದು ಖಚಿತವೆಂಬ ಭಾವನೆ ನಮ್ಮ ಸೇನಾ ಪಡೆಗಳಲ್ಲಿ ಮೂಡುವಂತೆ ಮಾಡುವುದು ಪಟೇಲ್‌ರ ಗುರಿಯಿದ್ದಂತಿತ್ತು.

ಅರುಣಾ ಮತ್ತು ಜೈ ಪ್ರಕಾಶರನ್ನು ಅವರ 'ಬಾಪೂ' ಖಂಡಿಸಿದರು. ಅವರಿಬ್ಬರೂ ಮುಂಬಯಿ ತೊರೆದು ರಹಸ್ಯ ಜಾಗಕ್ಕೆ ತೆರಳಿದರು. ನೌಕಾಪಡೆ ಒಂದು ಟ್ರೇಡ್‌ಯೂನಿಯನ್ ಅಲ್ಲ, ಹಾಗೂ ಅವರ ಮುಷ್ಕರ ಕಾನೂನು ದೃಷ್ಟಿಯಿಂದ 'ಮುಷ್ಕರ ಅಲ್ಲ' ಅದು ಬಂಡಾಯ. ಇದರಿಂದ ಬ್ರಿಟಿಷರು ಗಾಬರಿಗೊಂಡರು. ಕ್ರಾಂತಿಕಾರಿ ಪದಪುಂಜಗಳನ್ನು ಬಳಸುವುದರಿಂದ ಮಾತ್ರವೇ ಯಾರೂ ಕ್ರಾಂತಿಕಾರಿ ಆಗಲಾರದು. ಪೆಟ್ಟಿಬೂರ್ಶ್ವಾ ಕ್ರಾಂತಿಕಾರಿಗಳು ಯಾವತ್ತು ಕ್ರಾಂತಿಗಳ ನೇತೃತ್ವವನ್ನು ವಹಿಸಿಲ್ಲ. ಈ ಹೇಳಿಕೆಯ ಸಿಂಧುತ್ವವನ್ನು ಇತಿಹಾಸ ಮತ್ತೊಮ್ಮೆ ಸಾಬೀತುಪಡಿಸಿತು.

ನಾನು ಸೇನೆ ತೊರೆಯುವಿಕೆ ಹಾಗೂ ನನ್ನ ಪ್ರವಾಸವನ್ನು ರದ್ದುಪಡಿಸಿದೆ ಮಂಡಳಿಯಲ್ಲಿನ ಎರಡನೇ ಪ್ರಮುಖ ನಾಯಕರಿಗೆ ತಂತಿ ಸಂದೇಶ ಕಳಿಸಿದೆ "ಪ್ರವಾಸ ರದ್ದಾಗಿದೆ. ಎಲ್ಲಾ ಸ್ವಾಗತ ವ್ಯವಸ್ಥೆಗಳನ್ನು ರದ್ದು ಮಾಡಿ"

ವಲಭಾ ಬಾಯಿ ಪಟೇಲ್ ಮಧ್ಯಪ್ರವೇಶಿಸಿದರು, ಭಾರತೀಯ ಜನತೆಯ ಪರವಾಗಿ ಅಲ್ಲ. ಆದರೆ ಮುಂದಿನ ದಿನಗಳಲ್ಲಿ ಭಾರತೀಯ ಏಕತೆಯನ್ನು ಛಿದ್ರಗೊಳಿಸಿದ ಕ್ರಿಮಿನಲ್ ಸಾಮ್ರಾಜ್ಯಶಾಹಿ ಪಡೆಗಳ ಪರವಾಗಿ

ಅತ್ತುಬಿಟ್ಟೆ.

ನಾನು ಹತಾಶನಾಗಿ ರೂಮಿಗೆ ಮರಳಿದೆ. ಗಾಂಧೀಜಿ ಮತ್ತು ಪಟೇಲ್ ಬ್ರಿಟಿಷರ ರಕ್ಷಣೆಗೆ ಟೊಂಕ ಕಟ್ಟಿದ್ದರು. ಇತಿಹಾಸ ಕ್ರೂರ ತಿರುವನ್ನು ಪಡೆದುಕೊಳ್ಳುತ್ತಿತ್ತು. ನಾನು ಸಿಟ್ಟಿನಿಂದ ಅತ್ತು ಬಿಟ್ಟೆ.

ಒಂದಂಶವಂತೂ ಯಾವುದೇ ಅನುಮಾನಕ್ಕೆಡೆಯಿಲ್ಲದಂತೆ ಸಾಬೀತಾಯಿತು. ಭಾರತೀಯ ಪಡೆಗಳು ನೌಕಾಪಡೆಯ ಸೈನಿಕರತ್ತ ಗುಂಡು ಹಾರಿಸಲು ನಿರಾಕರಿಸಿದ್ದವು. ಅವರು ಬ್ರಿಟಿಷರ ವಿರುದ್ಧ ಬಂಡಾಯ ಹೂಡಲು ಆಜ್ಞೆಗಳಿಗೆ ಕಾತರದಿಂದ ಕಾಯುತ್ತಿದ್ದರು.

ಅಬ್ಬಾ! ಪಟೇಲ್ ಮಧ್ಯಪ್ರವೇಶಿಸಿದರು, ಭಾರತೀಯ ಜನತೆಯ ಪರವಾಗಿ ಅಲ್ಲ. ಆದರೆ ಮುಂದಿನ ದಿನಗಳಲ್ಲಿ ಭಾರತೀಯ ಏಕತೆಯನ್ನು ಛಿದ್ರಗೊಳಿಸಿದ ಕ್ರಿಮಿನಲ್ ಸಾಮ್ರಾಜ್ಯಶಾಹಿ ಪಡೆಗಳ ಪರವಾಗಿ ಅವರು ಮಧ್ಯಪ್ರವೇಶ ಮಾಡಿದರು.

ಭಾರತದ ಸಶಸ್ತ್ರ ಪಡೆಗಳ ಬಂಡಾಯಕ್ಕೆ ಕಾಂಗ್ರೆಸ್‌ನ ಯಾವುದೇ ಬೆಂಬಲ ಸಿಗುವುದಿಲ್ಲ ಎಂಬುದು ಮಂಡಳಿಯಲ್ಲಿದ್ದ ನಮ್ಮೆಲ್ಲರಿಗೆ ಮನವರಿಕೆಯಾಯಿತು. ಬದಲಾಗಿ ಬಂಡಾಯವನ್ನು ಕಾಂಗ್ರೆಸ್ ಪ್ರಬಲವಾಗಿ ವಿರೋಧಿಸಲಿದೆ ಎನ್ನುವುದು ತಿಳಿಯಿತು. ಇನ್ನೊಂದೆಡೆ, ರಾಷ್ಟ್ರೀಯ ಆಂದೋಲನಕ್ಕೆ ಸ್ವತಂತ್ರ ಅಭಿವೃದ್ಧಿ ಪಥವನ್ನು ರೂಪಿಸುವಷ್ಟು ಶಕ್ತಿ ಸಮಾಜವಾದಿಗಳಿಗೆ ಇರಲಿಲ್ಲ. ಭಾರತೀಯ ಜನಸಮುದಾಯವನ್ನು ಹಾಗೂ ವಿಶೇಷವಾಗಿ ಸೈನಿಕರನ್ನು ಬಂಡೇಳುವಂತೆ ಮಾಡುವುದು ಕಮ್ಯುನಿಸ್ಟರಿಗೆ ಸಾಧ್ಯವಾಗದು 'ರಿನ್' ಬಂಡಾಯ ಈ ಪಾಠಗಳನ್ನು ಕಲಿಸಿದೆ.

ಮಂಡಳಿಯ ಒಳಗೂ ಹೊರಗೂ ದೀರ್ಘ ಚರ್ಚೆ ನಡೆಯಿತು. ಬ್ರಿಟಿಷರು ದೇಶಬಿಟ್ಟು ಹೋಗಲು ಸಿದ್ಧರಿದ್ದಾರೆ ಎಂಬ ಪಟೇಲರ ಆಶ್ವಾಸನೆ ಸೇನೆಯೊಳಗಿನ ಅನೇಕ ಕ್ರಾಂತಿಕಾರಿಗಳನ್ನು ನಿಶ್ಶಸ್ತ್ರಗೊಳಿಸಿತು.

"ಬ್ರಿಟಿಷ್ ಆಶ್ವಾಸನೆಗಳಲ್ಲಿ ವಿಶ್ವಾಸ ಇಡುವುದು ತಪ್ಪು. ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಸಂಧಾನ ನಡೆಸಲಿ. ನಾವು ಕಾಯೋಣ ಹಾಗೂ ಒಂದು ವೇಳೆ ಬ್ರಿಟಿಷರು ಮತ್ತೆಬರಲು ಹವಣಿಸಿದರೆ ನಾವು ಹೋರಾಡೋಣ. ನಮಗೆ ಮಾಡಲು ಇನ್ನೇನೂ ಉಳಿದಿಲ್ಲ" ನೌಕಾಪಡೆ ಬಂಡಾಯ ತಣ್ಣಗಾದ ಮೇಲೆ ಮಂಡಳಿ ಕೈಗೊಂಡ ನಿಲುವಿನ ಸರಾಂಶವಿದು.

ಬ್ರಿಟಿಷರು ತಮ್ಮ ವಿಚ್ಛಿದ್ರಕಾರಿ ಚಟುವಟಿಕೆಗಳನ್ನು ಮುಂದುವರಿಸಿದರು. ಕ್ಯಾಬಿನೆಟ್ ನಿಯೋಗ ಆಗಮಿಸಿತು. ಹಿಂದೂ ಮುಸ್ಲಿಮರ ಭಿನ್ನಾಭಿಪ್ರಾಯಗಳು ಇನ್ನೂ ಹೆಚ್ಚಾಗಿ ಬೀದಿಗೆ ಬಂದವು. ರಾಷ್ಟ್ರೀಯ ವಿಮೋಚನೆ ಹೋರಾಟದ ಸಕ್ರಿಯ ಶಕ್ತಿಗಳು ಕೋಮುವಾದಿ ಧ್ರುವೀಕರಣಕ್ಕಾಗಿ ಎದುರು ನೋಡತೊಡಗಿದರು. ಕೋಮುವಾದಿ ಸೇನೆಗಳ ರಚನೆಯಾಗತೊಡಗಿತು ಹಾಗೂ ಅವುಗಳಿಗೆ ಸಮ್ರಾಜ್ಯಶಾಹಿಗಳು ಶಸ್ತ್ರಾಸ್ತ್ರ ನೀಡತೊಡಗಿದರು. ಮುಸ್ಲಿಂ ಗಾರ್ಡ್‌ಗಳು ಮತ್ತು ಆರ್.ಎಸ್.ಎಸ್. ಚಡ್ಡಿಗಳು ಠಳಾಯಿಸತೊಡಗಿದವು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಮೇ 26, 2003
ಅಖಿಲಭಾರತ ಜನವಾದಿ ಮಹಿಳಾ ಸಂಘಟನೆ ವಿಶೇಷ ಉಪನ್ಯಾಸ
'ಮಹಿಳಾ ಮೀಸಲಾತಿ - ನೈತಿಕತೆ ಇಲ್ಲದ ರಾಜಕೀಯ' ಇತ್ಯಾದಿ
ಸ್ಥಳ:ಮಿಥಿಕ್ ಸೊಸೈಟಿ, ಸಂಜೆ 4 ಗಂಟೆಗೆ.

ಮೇ. 26, 2003
ವಿ.ಆರ್.ಎಲ್. ಪ್ರಧಾನ ಕಛೇರಿ ಮುಂದೆ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಪ್ರತಿಭಟನೆ.

ಮೇ 27, 2003.
ನೈಋತ್ಯ ರೈಲ್ವೆ ಪ್ರಧಾನ ಕಛೇರಿಯ ಮುಂದೆ ಹಾಲ್ಟ್ ಏಜೆಂಟ್ಸ್ ಧರಣಿ ಸತ್ಯಾಗ್ರಹ.

ಮೇ 27, 2003.
13,500 ನೌಕರರ ಪ್ರಶ್ನೆ ಕುರಿತು ದುಂಡು ಮೇಜಿನ ಸಭೆ.
ಸೆಂಟ್ ಜೋಸೆಫ್ ಸಂಜೆ ಕಾಲೇಜಿನ ಸಭಾಂಗಣ ಸಂಜೆ 4.30ಕ್ಕೆ.

ಮೇ. 27,2003
ಕೋಲಾರ ಜಿಲ್ಲಾ ಶಾಶ್ವತ ನೀರಾವರಿ ಹೋರಾಟ ಸಮಿತಿ ವತಿಯಿಂದ
ವಿಧಾನಸೌಧಕ್ಕೆ ಕಾಲ್ನಡಿಗೆ ಜಾಥಾ ತಾಲ್ಲೂಕು ಕೇಂದ್ರಗಳಿಂದ ಪ್ರಾರಂಭ.
ಮೇ. 30
ಬೆಂಗಳೂರಿನಲ್ಲಿ ಬಹಿರಂಗ ಸಭೆ, ಬೆಳಿಗ್ಗೆ 10 ಕ್ಕೆ ಬಸವೇಶ್ವರ ವೃತ್ತ, ಬೆಂಗಳೂರು

ಜೂನ್ 2, 2003
ಗ್ರಾಮ ಪಂಚಾಯತ್ ನೌಕರರ ಅನಿರ್ದಿಷ್ಟ ಸಾಮೂಹಿಕ ಧರಣಿ, ಬೇಡಿಕೆಗಳಿಗೆ ಒತ್ತಾಯಿಸಿ ಬೆಂಗಳೂರು ಚಲೋ.

ಜೂನ್ 2, 2003
ಬಿ.ಎಸ್.ಎನ್.ಎಲ್. ಎಂಪ್ಲಾಯೀಸ್ ಯೂನಿಯನ್, 2ನೇ ಅಖಿಲ ಭಾರತ ಸಮ್ಮೇಳನ, ಲಕ್ನೋ - ಉತ್ತರ ಪ್ರದೇಶ.

ಜೂನ್ 2-9, 2003
ರೇಷನ್ ಕಾರ್ಡ್ ಕಡಿತದ ವಿರುದ್ಧ ಎಲ್ಲರಿಗೂ ಕಾರ್ಡ್ ಸಿಗುವಂತೆ ಆಗ್ರಹಿಸಿ, ರಾಜ್ಯವ್ಯಾಪಿ ಚಳುವಳಿ
ಕೂಲಿಕಾರ ರೈತ ಮತ್ತು ಮಹಿಳಾ ಸಂಘಟನೆಗಳಿಂದ

ಜೂನ್ 12, 2003.
ಧಾರ್ಮಿಕ ಮೂಲ ಭೂತವಾದ ಮತ್ತು ಕೋಮುವಾದಿ ವಿರೋಧಿ ಚಳುವಳಿಯ ಭಾಗವಾಗಿ ರಾಜ್ಯಮಟ್ಟದ ವಿಚಾರ ಸಂಕಿರಣ.
ಪುರಸಭಾ ಭವನ, ಗದಗ, ಸಮಯ 3 ಗಂಟೆಗೆ.

ಪ್ರಶ್ನೋತ್ತರ

ಪ್ರಶ್ನೆ: ಕೋಲಾರ ಜಿಲ್ಲೆಗೆ ಶಾಶ್ವತ ನೀರಾವರಿಗಾಗಿ ಹೋರಾಟ ನಡೆಸುತ್ತಿರುವುದು ಒಳ್ಳೆಯದೆ. ಆದರೆ ಐಕ್ಯರಂಗದಲ್ಲಿ ದೊರೆತ ಮಾಹಿತಿಯಂತೆ ನೇತ್ರಾವತಿ ನೀರನ್ನು, ಪಶ್ಚಿಮ ಘಟ್ಟಗಳಿಂದ ಗಾರ್ಲೆಂಡ್ ಕ್ಯಾನೆಲ್ ಮಾಡಿ ಪಡೆಯುವ ಪ್ರಸ್ತಾಪವಿದೆ. ಇದರ ಸಾಧ್ಯಾಸಾದ್ಯತೆ ಹೇಗೆ ಮತ್ತು ಹೀಗಾದಲ್ಲಿ ಆಗುವ ಪರಿಸರ ಆರ್ಥಿಕ ಪರಿಣಾಮಗಳನ್ನು ಅಧ್ಯಯನ ಮಾಡಲಾಗಿದೆಯೇ? ಈಗ ಎದ್ದಿರುವ ವಿವಾದದ ಬಗ್ಗೆ ನಿಮ್ಮ ಅಬಿಪ್ರಾಯವೇನು?

— ಶ್ರೀನಿವಾಸ್‌ಕೆ.ಬಿ., ಶಿವಮೊಗ್ಗ

ಕೋಲಾರದಂತಹ ಜಿಲ್ಲೆಗಳು ಅನುಭವಿಸುತ್ತಿರುವ ನೀರಿನ ಬವಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿಫಲತೆಯಲ್ಲದೆ ಬೇರೆ ಕಾರಣವಿಲ್ಲ. ಸ್ವಾತಂತ್ರ್ಯ ಸಿಕ್ಕು 5 ದಶಕಗಳಾದರೂ ಒಟ್ಟು ಕೃಷಿಯೋಗ್ಯ ಭೂಮಿಯಲ್ಲಿ ಕೇವಲ ಶೇಕಡ 35 ರಷ್ಟು ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯವನ್ನು ದೊರಕಿಸಲಾಗಿದೆ. ಕರ್ನಾಕದಲ್ಲಿ ಅದೂ ತೀರಾ ಕಡಿಮೆ ನೂರಾರು ನೀರಾವರಿ ಯೋಜನೆಗಳು ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ. ಇವುಗಳಲ್ಲಿ ಕೆಲವು 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಆರಂಭವಾಗಿದ್ದರೂ, ಸರ್ಕಾರ ನೀರಾವರಿಗಾಗಿ ಹಣ ಹೂಡಿಕೆಯನ್ನು ಕಡಿತ ಮಾಡುತ್ತಾ ಬಂದುದರಿಂದ, ಇದುವರೆಗೂ ಅವು ಪೂರ್ಣಗೊಂಡಿಲ್ಲ. ಇಂದು ನೀರಿಗಾಗಿ ಹಾಹಾಕಾರ ವ್ಯಾಪಕವಾಗುತ್ತಿದ್ದಂತೆ ಕೇಂದ್ರ ಸರ್ಕಾರ ಗಂಗಾ ಕಾವೇರಿ ನದಿಗಳ ಜೋಡಣೆಯನ್ನು ಪ್ರಸ್ತಾಪಿಸಿ ತನ್ನ ವೈಫಲ್ಯವನ್ನು ಮರೆಮಾಚಲು ಯತ್ನಿಸುತ್ತಿದೆ. ಬರಗಾಲ ಸತತ ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ನೀರಿನ ಅಭಾವವನ್ನು ಎದುರಿಸಲು ಸರ್ಕಾರ ಪ್ರಥಮ ಆದ್ಯತೆ ನೀಡಬೇಕಾಗಿದೆ. ಆದರೆ ಕೋಟ್ಯಾಂತರ ರೂಪಾಯಿಗಳು ಬೇಕಾಗುವ ಮತ್ತು ಯೋಜನೆಯನ್ನು ಪೂರ್ಣಗೊಳಿಸಲು ಬಹುಕಾಲ ಬೇಕಾಗುವ ನದಿಗಳ ಜೋಡಣೆಯ ಪ್ರಶ್ನೆ ಜನರ ಗಮನವನ್ನು ಬೇರೆಡೆ ಸೆಳೆಯಲು ಮಾತ್ರ ಸಹಾಯವಾಗುವುದು. ನೀರಾವರಿ, ಪರಿಸರ ಮೊದಲಾದ ಸಂಭಂದಪಟ್ಟ ಎಲ್ಲಾ ಕ್ಷೇತ್ರಗಳ ತಜ್ಞರ ಸಮಿತಿಯೊಂದನ್ನು ಸರ್ಕಾರ ರಚಿಸಿ ನದಿಗಳ ಜೋಡಣೆಯ ಸಾಧಕಬಾಧಕಗಳ ಬಗ್ಗೆ ಒಂದು ವೈಜ್ಞಾನಿಕ ಅಧ್ಯಯನ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು. ಇದು ಪಶ್ಚಿಮ ಘಟ್ಟಗಳ ನದಿಗಳ ನೀರನ್ನು ಬಳಸುವ ಪ್ರಸ್ತಾವಕ್ಕೂ ಅನ್ವಯಿಸುತ್ತದೆ. ಅಂತಹದಿನ್ನೂ ಆಗಬೇಕು. ಇಂತಹ ಪ್ರಶ್ನೆಗಳು ಬಂದಾಗ ವಿವಿಧ ಜಿಲ್ಲೆಗಳ/ ರಾಜ್ಯಗಳ ಜನತೆಯ ನಡುವೆ ಸಂಘರ್ಷ ಉಂಟಾಗುವ ಅಪಾಯವಿರುವುದರಿಂದ ಎಚ್ಚರಿಕೆ ವಹಿಸುವುದು ಅಗತ್ಯವಿದೆ. ■

ಭ್ರಷ್ಟರ ರಕ್ಷಣೆ - ಕೃಷ್ಣ ಚಿತಾವಣೆ

ಬೆಂಗಳೂರು ನಗರದ ಹೊರವಲಯದ ಏಳು ನಗರ ಸಭೆ ಮತ್ತು ಒಂದು ಪುರಸಭೆಯಲ್ಲಿ ನಡೆಸಲಾದ ಭ್ರಷ್ಟಾಚಾರದ ಪ್ರಕರಣದಲ್ಲಿ ಅಮಾನತ್ತುಗೊಂಡಿದ್ದ 9 ಜನ ಕೆ.ಎ.ಎಸ್. ಅಧಿಕಾರಿಗಳನ್ನು ಪುನಃ ಕೆಲಸಕ್ಕೆ ನೇಮಿಸುವ ಮೂಲಕ ಎಸ್.ಎಂ. ಕೃಷ್ಣರ ಸರ್ಕಾರ ತಾನೊಂದು ಎಂತಹ ಅನೀತಿಯು ಹಾಗೂ ಭ್ರಷ್ಟತೆಯ ಪರಮಾವಧಿ ತಲುಪಿದೆ ಎಂದು ತೋರಿಸಿದೆ.

ಹಲವಾರು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡು ಖುದ್ದಾಗಿ ಪರಿಶೀಲಿಸಿ ಧಾಳಿ ನಡೆಸಿದ್ದ ಲೋಕಾಯುಕ್ತ ನ್ಯಾ. ವೆಂಕಟಾಚಲಯ್ಯರವರು ನೂರಾರು ಕೋಟಿ ರೂ.ಗಳ ಭ್ರಷ್ಟಾಚಾರದ ಹಗರಣವನ್ನು ಪತ್ತೆ ಮಾಡಿದ್ದರು. ಸರ್ಕಾರ ಅವರನ್ನು ಅಮಾನತುಗೊಳಿತ್ತು. ಆದರೆ ಈ ಪ್ರಕರಣದ ತನಿಖೆ ಕಾರ್ಯ ಇನ್ನೂ ಅರ್ಧದಲ್ಲಿರುವಾಗಲೇ ಲೋಕಾಯುಕ್ತರನ್ನೂ ಕೇಳದೇ ಏಕಾಏಕಿ ಸರ್ಕಾರ ಅವರನ್ನು ಸೇವೆಗೆ ಮರು ನೇಮಕ ಮಾಡಿಕೊಂಡಿದೆ. ಅದೂ ಕಳೆದ ವಿಧಾನ ಸಭೆಯ ಅದಿವೇಶನದಲ್ಲಿ ತನ್ನದು ಪಾರದರ್ಶಕ ಹಾಗೂ ಭ್ರಷ್ಟಾಚಾರ ವಿರೋಧಿ ಸರ್ಕಾರವೆಂದು ಬೊಗಳೆ ಕೊಚ್ಚಿಕೊಂಡಿದ್ದ ಮುಖ್ಯಮಂತ್ರಿ ಕೃಷ್ಣ, ಈಗ ಭ್ರಷ್ಟರ ರಕ್ಷಣೆಗೆ ಧಾವಿಸಿದ್ದಾರೆ. ಮತ್ತು ತಮ್ಮದು ಎರಡೆಳೆ ನಾಲಿಗೆಯೆಂದು ಸಾಬೀತು ಮಾಡಿ ಡೊಂಗಿ ನಟನೆಂದು ದ್ವಿಪಾತ್ರ ಅಭಿನಯ ತೋರಿದ್ದಾರೆ.

ಈ ಪ್ರಕರಣದಲ್ಲಿರುವ ಮುನ್ಸಿಪಾಲಿಟಿಗಳಲ್ಲಿ ಕಾಂಗ್ರೆಸ್, ಬಿಜೆಪಿ ಅಧಿಕಾರದಲ್ಲಿದ್ದು ನಡೆದ

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಭ್ರಷ್ಟಾಚಾರಗಳಾಗಿವೆ. ವಿಶ್ವಬ್ಯಾಂಕ್ ಒಳಗೊಂಡು ತಂದ ಸಾಲದ ಹಣದ ಈ ಭ್ರಷ್ಟಾಚಾರದಲ್ಲಿ ಸಚಿವ ಕೃಷ್ಣಪ್ಪ ಒಳಗೊಂಡು, ಹಣಕಾಸು ಖಾತೆ ಇರಿಸಿಕೊಂಡಿರುವ ಮುಖ್ಯಮಂತ್ರಿ ಕೃಷ್ಣರವರ ಪಾತ್ರವೂ ನಿಚ್ಚಳವಾಗಿ ಗುರುತಿಸಲಾಗಿತ್ತು. ಈ ಭ್ರಷ್ಟ ಅಧಿಕಾರಿಗಳ ಸಸ್ಪೆಂಡ್ ರದ್ದುಪಡಿಸಿ ಸೇವೆಗೆ ಕರೆದುಕೊಂಡಿರುವುದು ಕೃಷ್ಣರ ಪಾತ್ರ ದೃಢಗೊಳಿಸುತ್ತದೆ. ಈ ಮೂಲಕ ಲೋಕಾಯುಕ್ತರ ತನಿಖೆ, ಪಾತ್ರವನ್ನು ಗೌಣಗೊಳಿಸಿ, ಅರ್ಥಹೀನ ಗೊಳಿಸಿದ್ದಾರೆ. ವಿಶ್ವಬ್ಯಾಂಕ್ ಅಧಿಕಾರಿಗಳು ಬೆಂಗಳೂರಿಗೆ ಬಂದಾಗ ತಮ್ಮ ಸುಧಾರಣೆಗೆ ಹೇಗೆ ಎಷ್ಟು ಬದ್ಧರು ಎಂದು ನಿಜಮುಖ ತೋರಿಸಲು ಇರಬೇಕು.

ಆದ್ದರಿಂದ ಕೃಷ್ಣರ ಸರ್ಕಾರ ತನ್ನ ಆದೇಶವನ್ನು ವಾಪಾಸು ತೆಗೆದುಕೊಳ್ಳಬೇಕು. ಹಾಗೂ ನಿಷ್ಠುರ ತನಿಖೆಗೆ ಅವಕಾಶ ಮಾಡಿಕೊಡಬೇಕು. ಮಾಹಿತಿ ಹಕ್ಕಿನ ಬಗ್ಗೆ ದೊಡ್ಡ ಗಂಟಲಲ್ಲಿ ಹೇಳುವ ಸರ್ಕಾರ ಎಲ್ಲಾ ಮಾಹಿತಿ ಗಳನ್ನು ಸಾರ್ವಜನಿಕರ ಎದುರು ತೆರೆದಿಡಬೇಕು.

ಭ್ರಷ್ಟಾಚಾರ ತಡೆಯದಿದ್ದರೆ ಸಾಲ ಕೊಡಬೇಡಿ ಎಂದು ಲೋಕಾಯುಕ್ತರು ವಿಶ್ವಬ್ಯಾಂಕ್‌ಗೆ ಮೊರೆ ಹೋದದ್ದು ಎಂತಹ ಹತಾಶ ಸ್ಥಿತಿ ತೋರಿಸುತ್ತದೆ! ಕೊಲ್ಲುವವನೇ ಕಾಯುವವನೇನಾ?

ಭಜರಂಗ ದಳದಿಂದ ತ್ರಿಶೂಲ ಹಂಚಿಕೆಯ ಮರುಮಾತು

ಭಜರಂಗದಳ ಮತ್ತೆ ಕರ್ನಾಟಕದಲ್ಲಿ ಬಹಿರಂಗವಾಗಿ ಬಾಲಬಿಚ್ಚುತ್ತಿದೆ. ಈಚೆಗೆ ವಿಜಾಪುರದಲ್ಲಿ ಅದರ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ರಾಜ್ಯದಲ್ಲಿ 20 ಸಾವಿರ ತ್ರಿಶೂಲ ಹಂಚುವುದಾಗಿ ಘೋಷಿಸಿದ್ದಾನೆ. ಈ ಹಿಂದೆಯೇ 2 ಲಕ್ಷ ಹಂಚುವುದಾಗಿ ಹೇಳಿದ್ದು. ಅದು ಹೇಳುವ ಹೊತ್ತಿಗೆ ಹಲವೆಡೆ ಹಂಚಿಯೂ ಆಗಿತ್ತು. ಈಗ ಬಿಜಾಪುರದಲ್ಲಿ ಇಂತಹ ಘೋಷಣೆ ಬಜರಂಗದಳ ಮಾಡಿದೆ ಹಾಗೂ ಕೋಮು ದ್ವೇಷ ಹೆಚ್ಚಿಸುವ ಕೃತ್ಯ ಎಡಬಿಡದೇ ಮಾಡುತ್ತಾ ಗ್ರಾಮ - ನಗರಗಳಲ್ಲಿ ಘಟಕಗಳು ರಚನೆ ಆಗುತ್ತಿದೆ.

ಸಂಘ ಪರಿವಾರ ತನ್ನ ಸಿದ್ದತೆ ನಡೆಸಿಯೇ ಇದೆ. ಕಾಂಗ್ರೆಸ್ ಸರ್ಕಾರ ದೃಢವಾದ ಕಾನೂನಾತ್ಮಕ ಹಾಗೂ ರಾಜಕೀಯ ಕ್ರಮಗಳನ್ನು ಕೈಗೊಳ್ಳಬೇಕು.



ರೈಲ್ವೆ ಹಳಿಗಳ ಮೇಲೇಕೆ ಈ ಸಂಸದ?

ಈ ಆಸಾಮಿ ಇತ್ತೀಚೆಗೆ ಪೇಪರ್‌ಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಹೆಚ್ಚಾಗುತ್ತಿದೆ. ಸ್ವತಃ ಇಂಗ್ಲಿಷ್- ಕನ್ನಡ ಪತ್ರಿಕೆಯ ಮಾಲೀಕನಾದರೂ ಈ ಹಿಂದೆ ಅಜ್ಞಾತವಾಸದಲ್ಲಿದ್ದಂತೆ, ಪೇಪರ್-ಬಸ್-ಲಾರಿ ಉಸ್ತುವಾರಿ ನೋಡುತ್ತಾ ಕಣ್ಮರೆಯಾಗಿರುತ್ತಿದ್ದ. ಈಗೀಗ ರೈಲ್ವೇ ಹಳಿಗಳ ಮೇಲೆ ಕಾಣಿಸಿಕೊಳ್ಳುವುದು ಹೆಚ್ಚಾಗಿದೆ. ಮಾಡುವ ಗಿಮಿಕ್‌ಗಳು ಎಳೆಯ ಮಕ್ಕಳಿಗೂ ಅರ್ಥವಾಗುತ್ತವೆ.

ಒಬ್ಬ ಸಂಸದನಾಗಿ, ವಿ.ಆರ್.ಎಲ್ ಮಾಲೀಕ ವಿಜಯ ಸಂಕೇಶ್ವರ ನೈರುತ್ಯ ರೈಲ್ವೆ ವಲಯದ ಪ್ರಶ್ನೆ ಹಿಡಿದು ಅವರಿವರ ಜೊತೆ ಯಾಕೆ ಕೂಗಾಡಬೇಕು? ಅದೂ ತಮ್ಮದೇ ಬಿಜೆಪಿ ಸರ್ಕಾರವಿರುವಾಗ .ಇವರ ಮಾತನ್ನು ಯಾರೂ ಕೇಳುತ್ತಿಲ್ಲವೆಂದೇ? ಅಥವಾ ಸೋವಿ ಜನಪ್ರಿಯತೆಯೇ?

ಈ ಸಂಸದರು ಕಛೇರಿಗಾಗಿ ಬೇಕಾದರೆ ಹೋರಾಡಲಿ. ಅದರೆ ಹುಬ್ಬಳ್ಳಿ- ಧಾರವಾಡ ಪ್ರದೇಶದ ಜನರ ನಿತ್ಯ ಸಮಸ್ಯೆ, ಬರದ ಬವಣೆ, ಕುಡಿವ ನೀರಿನ ತೀವ್ರ ಕೊರತೆ, ಕಾರ್ಖಾನೆಗಳ ಮುಚ್ಚುವಿಕೆ ಮುಂತಾದ ಜ್ವಲಂತ ಸಮಸ್ಯೆಗಳತ್ತ ಯಾಕೆ ಗಮನ ಕೊಡುವುದಿಲ್ಲ. ಬದಲಾಗಿ ವಿ.ಆರ್.ಎಲ್ ಸಂಸ್ಥೆಯ ಕಾರ್ಯಕರ್ತರು ನ್ಯಾಯಯುತ ಬೇಡಿಕೆಗಳನ್ನು ಕೇಳಿದರೆ ದೌರ್ಜನ್ಯ ಹರಿಯಬಿಡಲು ಸಂಸತ್ ಸದಸ್ಯತ್ವದ ಬಲ ಉಪಯೋಗಿಸುವುದೇಕೆ? ಶಾಂತಿ-ಸೌಹಾರ್ದತೆಗೆ ಶ್ರಮಿಸಲು ಗದುಗಿನ ತೋಂಟದಾರ್ಯ ಸ್ವಾಮಿಗಳ ಮೇಲೆ ಧಾಳಿ ನಡೆಸುವುದೇಕೆ? ಇಂತಹ ಸೋಗಲಾಡಿ ಮಾಲೀಕರ ದಬ್ಬಾಳಿಕೆ ವಿರೋಧಿಸಿ ಈ ಮೇ ಕೊನೆಯಲ್ಲಿ ಕಾರ್ಮಿಕರು ಹುಬ್ಬಳ್ಳಿಯ ವಿ.ಆರ್.ಎಲ್ ಕಛೇರಿಯೆದುರು ಪ್ರತಿಭಟನೆ ನಡೆಸಲಿದ್ದಾರೆ.

ವಿಶ್ವಬ್ಯಾಂಕ್ ಸಮ್ಮೇಳನ - ಅಭಿವೃದ್ಧಿಯ ಅವಸಾನ

ನಿಗದಿತ ವಿದ್ಯುತ್ ಸುಧರ್ಧಾರಣೆಗಳನ್ನು ನಿದಿಷ್ಟ ಕಾಲಾವಧಿಯಲ್ಲಿ ಜಾರಿಗೊಳಿಸದಿದ್ದರೆ, ನಿಧಾನಗತಿಯಲ್ಲಿ ಸಾಗಿದರೆ ಸಾಲದ ಕಂತುಗಳನ್ನು ಕೊಡುವುದಿಲ್ಲ ವೆಂದು ಕರ್ನಾಟಕ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದ ವಿಶ್ವಬ್ಯಾಂಕ್ ಈ ವಾರದಲ್ಲಿ ವಿಧಾನ ಸೌಧದ ಅಂಗಳದಲ್ಲೇ ವಾರ್ಷಿಕ ಸಭೆ ನಡೆಸಿ ಸರ್ಕಾರವನ್ನು ಹೊಗಳಿದ್ದೆ.

ಅಭಿವೃದ್ಧಿ ಆರ್ಥಿಕತೆಯ ಅವಲೋಕನದ ಹೆಸರಿನಲ್ಲಿ ವಾರ್ಷಿಕ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲಾಯಿತು. ಇದು ಅಮೇರಿಕಾದ ವಾಷಿಂಗ್ಟನ್ ನಂತರ ಹೊರಗಡೆ ನಡೆದ ಪ್ರಥಮ ಸಬೆಯಾದ್ದದ್ದೇ ಒಂದು ವಿಶೇಷವಂತೆ. ಹೀಗೆ ವಿಶ್ವದ ಎಲ್ಲರ (ಬಂಡವಾಳಗಾರರ ಎಂದು ಓದಬೇಕು) ಮನದೊಳಗೆ ಕರ್ನಾಟಕ ಕ್ಲಿಕ್ ಆಗಿದೆಯಂತೆ! ಸ್ವತಃ ವಿಶ್ವಬ್ಯಾಂಕ್‌ನ ಹಿರಿಯ ಉಪಾಧ್ಯಕ್ಷ ನಿಕೋಲಾಸ್ ಸ್ಟರ್ನ್ ಸಭೆಯಲ್ಲಿ ಭಾಗವಹಿಸಿ ಅಭಿವೃದ್ಧಿ ಕೆಲಸಗಳ ಉಸ್ತುವಾರಿ ನೋಡಿಕೊಂಡಿದ್ದಾರೆ. ಕೃಷ್ಣರ ಸರ್ಕಾರದ ಹೆಜ್ಜೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿ, 'ಸುಧಾರಣೆಗಳ ನಾಯಕ' ಎಂದು ಹೇಳಿದ್ದು ಸಿ.ಎಂ. ಅವರನ್ನು ರೋಮಾಂಚನಗೊಳಿಸಿದೆ! ಈ ಉಬ್ಬುವಿಕೆಯಲ್ಲಿ ಹಲವು ಸತ್ಯಗಳನ್ನು ಉಗುಳಿ ಜಾಗತೀಕರಣ ಉದಾರೀಕರಣ ವಿರುದ್ಧದ ಪ್ರತಿನಿಧಿತ್ವವನ್ನು ಟೀಕಿಸಿ, ವಿಶ್ವಬ್ಯಾಂಕೇ ಸತ್ಯ ಎಂದು ಪ್ರತಿಪಾದಿಸಿದ್ದಾರೆ.

ಹಾಗೇ ನೋಡಿದರೆ ಈ ಸಬೆ ಕರ್ನಾಟಕದ ನಾಯಕತ್ವವನ್ನು ದೃಡೀಕರಿಸಿದೆಯೇ ಇಲ್ಲವೊ ಬೇರೆ ವಿಚಾರ ಹಾಗೂ ಇದು ಎಂತಹ ನಾಯಕತ್ವ, ಯಾರಿಗೆ ನಾಯಕತ್ವ? ಜನ ದಮನದ ಪ್ರಭುತ್ವದ ಕಾರ್ಯವೈಖರಿಗೆ ಸಿಕ್ಕ ಶಹಬ್ಬಾಶ್ ಗಿರಿಯೂ ಹೌದು! ಅದಿರಲಿ ಆದರೆ ಮುಖ್ಯವಾಗಿ ವಿಶ್ವಬ್ಯಾಂಕ್ ಎಂಬ ವಿದೇಶಿ ಹಣಕಾಸು ಸಂಸ್ಥೆಯೇ ಸರ್ಕಾರದ ಎಲ್ಲಾ ನೀತಿ ನಿರೂಪಣೆ, ಕಾರ್ಯವಿಧಾನ ಸಾಗುವ ಮಾರ್ಗವನ್ನು ನಿರ್ಧರಿಸುತ್ತದೆ. ಅದನ್ನು ಬಿಟ್ಟರೆ ಗತಿಯೇ ಇಲ್ಲ. ಎಂದು ಹೇಳಿ ಬಿಟ್ಟದ್ದೇ ಆದರೆ ತಕ್ಕ ಶಾಸ್ತಿಯೂ ಆದೀತು ಎಂಬ ಸ್ಪಷ್ಟ ಸಂದೇಶ ರವಾನಿಸಿದೆ. ವಿಶ್ವಬ್ಯಾಂಕ್‌ನ ಶರತ್ತುಗಳನ್ನು ಹೆಚ್ಚುಹೆಚ್ಚಾಗಿ, ತ್ವರಿತವಾಗಿ ಜಾರಿಗೊಳಿಸಲೇಬೇಕೆಂಬ ನಿರ್ದೇಶನ ಇದಾಗಿದೆ.

ಹೀಗಾಗಿ ವಿದ್ಯುತ್ ಕ್ಷೇತ್ರದಲ್ಲಿ ರೈತರನ್ನು ಪೀಡಿಸುವ, ದಬಾಯಿಸುವ ಕೆಲಸಗಳು ತೀವ್ರಗೊಂಡಿವೆ. ಪೋಲೀಸ್ ಪಡೆಗಳನ್ನು ಬಳಸಿ ಪಂಪ್‌ಸೆಟ್‌ನ ವಿದ್ಯುತ್‌ನ ಕನೆಕ್ಷನ್ ಕಿತ್ತುಕೊಳ್ಳುತ್ತಿದ್ದಾರೆ. ಬೆಂಗಳೂರಿನ ದೇವನಹಳ್ಳಿ, ಹೊಸಕೋಟೆ, ವರ್ತೂರು, ತುಮಕೂರು, ಬೀದರ್ ಮುಂತಾದೆಡೆ ದಾಳಿ ನಡೆದಿವೆ. ಮಳೆ ಇಲ್ಲದೇ, ಬೆಳೆ ಇಲ್ಲದೇ ನೀರಿಲ್ಲದೇ ಸಾಲದ ಹೊರೆಯಿಂದ ಕಂಗಾಲಾದ ರೈತರ ಮೇಲೆ 'ಗ್ರಾಮೀಣ ಮುಖಿ' ಬಜೆಟ್‌ನ ಮುಖ್ಯಮಂತ್ರಿಗಳ ಕರುಣೆಯಿದು. ಇಂತಹ ಅಭಿವೃದ್ಧಿಯ ವೇಗವನ್ನೇ ಬೆಂಗಳೂರಿನ ಸಮಾವೇಶ ಚರ್ಚಿಸಿರುವುದು!

ಇಲ್ಲಿ ಪ್ರಸ್ತಾಪಿತ ವಿಷಯಗಳ ಪಟ್ಟಿ ನೋಡಿದರೆ ವಿಶ್ವಬ್ಯಾಂಕ್‌ನ ಕರಾಳ ಹಸ್ತ ಎಷ್ಟು ವ್ಯಾಪಕ ಎಂದು ಅರ್ಥವಾಗುತ್ತದೆ. ಇದರಲ್ಲಿ ಭಾಗವಹಿಸಿದ್ದ ಭಾರತೀಯ ರಿಸರ್ವ್ ಬ್ಯಾಂಕಿನ ಉಪ ಗವರ್ನರ್ ರಾಕೇಶ್ ಮೋಹನ್ ದೂರಸಂಪರ್ಕ ಇಲಾಖೆ ಈಚೆಗೆ ತರ್ಕವಿಲ್ಲದೇ ಹೆಚ್ಚಿಸಿದ ದರಗಳನ್ನು ಜನರ ಹಾಗೂ ಸಂಸತ್ತಿನಲ್ಲಿಯ ಪ್ರತಿರೋಧ ದಿಂದಾಗಿ ನೆಪ ಮಾತ್ರಕ್ಕೆ ಇಳಿಸಿದ್ದನ್ನೇ ಬೇಕಾಬಿಟ್ಟಿಯಾಗಿ ಟೀಕಿಸಿದ್ದಾರೆ. ಹೀಗಾದಲ್ಲಿ ಇಲಾಖೆ



ದಿವಾಳಿಯಾಗುತ್ತದೆಂದು ಹೇಳಿದ್ದಾರೆ. ಅಂದರೆ ಒಬ್ಬ ಭಾರತೀಯ ಅಧಿಕಾರಿ ತನ್ನ ದೇಶದ ಜನ ಹಿತ ಕಾಯುವುದಕ್ಕಿಂತ ವಿಶ್ವಬ್ಯಾಂಕಿನ ಸಾಕು ನಾಯಿಯಾಗಿ ಮಾತನಾಡುತ್ತಿದ್ದಾನೆ. ಎಷ್ಟು ಬೇಗವೋ ಅಷ್ಟು ಬೇಗ ಖಾಸಗಿಯವರಿಗೆ ಮಾರಿ ಕೈತೊಳೆದುಕೊಳ್ಳಬೇಕು ಎನ್ನುತ್ತಿದ್ದಾನೆ. ಈ ವಿಶ್ವಬ್ಯಾಂಕ್ ಇಂತಹವರನ್ನು ಸಮಾಲೋಚಕರೆಂದು ಲಕ್ಷಾಂತರ ರೂಪಾಯಿಗಳನ್ನು ಪ್ರತಿ ತಿಂಗಳೂ 'ಗಿಂಬಳ'ವಾಗಿ ಕೊಟ್ಟು ಸಾಕಿಕೊಳ್ಳುತ್ತಾರೆ. ಟೆಲಿಕಾಂ ದರಗಳು ಹೆಚ್ಚುತ್ತಲೇ ಇರಲಿ, ರೈಲ್ವೆ ಬೆಲೆಯೋ ಏರಲಿ, ಬಂದರು ಮೂಲಕ ಸೌಕರ್ಯಗಳಾಗಿರಲಿ ಎಲ್ಲವೂ ವಿಶ್ವಬ್ಯಾಂಕ್ ನಿರ್ದೇಶನ. ಇದನ್ನೇ ಉಪಾಧ್ಯಕ್ಷ ಸ್ಟರ್ನ್ ಪ್ರಶಂಸಿರುವಂತೆ ಮಾಹಿತಿ ಹಕ್ಕು ಕಾಯ್ದೆ, ಭೂ ದಾಖಲಾತಿ ಗಣಕೀಕರಣ, ಸುಧಾರಣಾ ಆಸಕ್ತಿ, ಖಾಸಗಿ ಭಾಗವಹಿಸುವಿಕೆಯ 'ಬೆಂಗಳೂರು ಮುನ್ನಡೆ' ಇವುಗಳು ವಿಶ್ವಬ್ಯಾಂಕಿನ ನಿರ್ದೇಶನಗಳೇ ಆಗಿವೆ. ಮಾಹಿತಿ, ಭೂ ದಾಖಲೆಗಳ ಹೈಟೆಕ್ ಆಡಳಿತದ ಕ್ರಾಂತಿಕಾರಕ ಹೆಜ್ಜೆಗಳು ಎಂದು ಬಣ್ಣಿಸಿಕೊಂಡ ನಿಜ ಸಂಗತಿಗಳು ಬಯಲಾಗುತ್ತಿವೆ. ಖಾಸಗಿ ಕಂಪನಿಗಳ ಸೇವೆಗೆ ಇವರು ಎಷ್ಟು ಉತ್ಸುಕರು ಎಂಬುದೂ ಸಹ.

ಈ ಸಮಾವೇಶದಲ್ಲಿ ಪಾಲ್ಗೊಂಡ ಒಬ್ಬ ಪ್ರತಿನಿಧಿ ಮಾತ್ರ ಜಾಗತೀಕರಣ-ಉದಾರೀಕರಣದ ಬಗ್ಗೆ ಸ್ವಲ್ಪ ವಿಮರ್ಶೆ ನಡೆಸಿದ್ದು ಬಿಟ್ಟರೆ ಎಲ್ಲರೂ ಸಾಲದ ಸಾಹುಕಾರರ ತಾಳಕ್ಕೆ ಮೇಳ ಹಾಕಿದ್ದೇ ಹೆಚ್ಚು.

ನಿಜವಾಗಿಯೂ ಇಲ್ಲೆಲ್ಲಾ ಏನು ನಡೆಯಿತು? ಮಾಹಿತಿ ಹಕ್ಕು - ಪಾರದರ್ಶಕತೆ ಬಗ್ಗೆ ಭಾರಿ ಮಾತನಾಡುವ ಸರ್ಕಾರ ಆದ ಕಲಾಪ-ಒಪ್ಪಂದದ ಶರತ್ತುಗಳನ್ನು ಬಹಿರಂಗ ಪಡಿಸಬೇಕು. ಇದು ಸಾರ್ವಭೌಮ ಜನರ ಹಕ್ಕು. ಸ್ಟರ್ನ್ ನೆನಪಿಸಿಟ್ಟುಕೊಳ್ಳಬೇಕು, ವಿಶ್ವಬ್ಯಾಂಕಿನ ಅಂದಾದುಂದಿ ಗೂಳಿ ನುಗ್ಗುವಿಕೆಗೆ ಪ್ರತಿರೋಧ ಇದೆ ಎಂಬುದು. ಅದನ್ನು ಮೇ 21 ರ ಮುಷ್ಕರ ಆತನ ಕಣ್ಣೆದುರೇ ತೋರಿಸಿದೆ. ■

ತ್ವರೆ ಮಾಡಿ !

ಫೋನು ವಾಪಸು ಮಾಡಿದವರಿಗೆ .... ಉಚಿತ!

ಫೋನು ಬೆಲೆ ದುಬಾರಿಯಾದದ್ದರ ಬಗ್ಗೆ ವಿಚಾರಣೆ ಮಾಡಲು ಸಚಿವಾಲಯಕ್ಕೆ ಫೋನು ಮಾಡಿದ್ದಾರೆ. ಸಂಭಾಷಣೆಯ ಲಿಖಿತ ದಾಖಲೆಯನ್ನು ಗೃಹಖಾತೆಯ ಫೋನು ಕದ್ದಾಲಿಸುವ ವಿಭಾಗದಿಂದ ಪಡೆದು ಕಳಿಸಿದ್ದಾರೆ ಓದುಗರೊಬ್ಬರು. ಫೋನು ದುಬಾರಿಯಾಯ್ತೆಂದು ವಾಪಸು ಮಾಡ್ತೇನೆ ಅಂತ ದಬಾಯಿಸಿದರೆ, ಏನೋ ಉಚಿತ ಕೊಡಲಾಗುವುದು ಎಂದು ಭರವಸೆ ಕೊಡಲಾಯ್ತಂತೆ. ಏನು ಉಚಿತ? ಓದಿ ನೋಡಿ!


"ಹಲೋ! ಫೋನು ಖಾತೆನಾ? ಮಿನಿಸ್ಟರ್ ಇದ್ದಾರಾ?"

"ಹೌದು, ಆದರೆ ಮಿನಿಸ್ಟರ್ ಇಲ್ಲಾ, ಏನು ಬೇಕು ಹೇಳಿ?"

"ಅಲ್ಲಾ ಫೋನು ಈ ರೀತಿ ದುಬಾರಿ ಮಾಡಿ ಹಾಕಿದ್ದಾರಲ್ಲ. ಅದರ ಬಗ್ಗೆ ವಿಚಾರಣೆ ಮಾಡುವಾ ಅಂತ. ಮಿನಿಸ್ಟರ್ ಯಾವಾಗ ಸಿಕ್ತಾರೆ?"

"ಈ ರೀತಿ ಫೋನು ಬರ್‍ತಾನೆ ಇದೆ. ಅದಕ್ಕೆ ನಾವು ನೂರು ಜನ ಕುಂತಿದ್ದೀವಿ. ಏನು ಕೇಳ್ಬೇಕು ಕೇಳಿ"

"ಅಲ್ಲಾರಿ! ತಿಂಗಳ ಬಾಡಿಗೆ ಒಂದೂವರೆ ಪಟ್ಟು ದುಬಾರಿ. ಪ್ರತಿ ಕರೆಗೆ ಒಂದೂವರೆ ಪಟ್ಟು ದುಬಾರಿ. ಉಚಿತ ಕರೆಗಳು ಅರ್ಧದಷ್ಟು ಕಡಿತ. ಮೊಬೈಲ್ ಫೋನಿಗೆ ಕರೆ ಆರು ಪಟ್ಟು ದುಬಾರಿ. ಕಾಯಿನ್ ಬೂತ್‌ನಿಂದ ಮೊಬೈಲ್ ಫೋನು ಮಾಡುವ ಹಾಂಗಿಲ್ಲ. ಏನಿದೆಲ್ಲಾ? ಯಾಕೆ ಮಾಡ್ತಾ ಇದ್ದೀರಾ?"



"ಏನು ಮಾಡ್ತುವುದು ಹೇಳಿ. ಅನಿವಾರ್ಯವಾಗಿ ಮಾಡಬೇಕಾಗಿದೆ. ಇಲ್ಲದಿದ್ದರೆ ಮೊಬೈಲ್ ಕಂಪನಿಗಳಿಗೆ ಕಷ್ಟ. ಬಹಳ ಸಮಯದಿಂದ ಗಲಾಟೆ ಮಾಡ್ತಿದ್ದಾರೆ"

"ಅವರಿಗೆ ಏನು ಕಷ್ಟ?"

"ಮೊಬೈಲ್ ಕಂಪನಿಗಳಿಗೆ ಸಾಕಷ್ಟು ವಹಿವಾಟು ಇಲ್ಲ. ಲಾಭ ಇಲ್ಲ. ಬೇರೆಯವರು ಮಾಡುವ ಕರೆಗೂ ತೆರಬೇಕು. ಅವರು ಮಾಡುವ ಕರೆಗೂ ಕೊಡಬೇಕು. ಬೇರೆಯವರು ಮಾಡುವ ಕರೆಗೆ ನಾವು ಯಾಕೆ ತೆರಬೇಕು ಅಂತಾರೆ ಮೊಬೈಲ್ ಗ್ರಾಹಕರು. ಆದ್ದರಿಂದ ಮೊಬೈಲ್ ಕಂಪನಿಗಳಿಗೆ ಗ್ರಾಹಕರು ಜಾಸ್ತಿಯಾಗ್ತಾ ಇಲ್ಲ. ಲಾಭನೂ ಬರ್‍ತಾ ಇಲ್ಲಾ. ಕಷ್ಟದಲ್ಲಿದ್ದಾರೆ"

"ನಾವು ಮಾಡುವ ಕರೆಗೆ ನಾವು ತೆರ್‍ತಾ ಇದ್ದೀವಿ. ಮೊಬೈಲ್‌ಗೋ ವಿಲ್‌ಗೋ ಕರೆ ಮಾಡಿದ್ರೆ ಜಾಸ್ತಿ ಯಾಕೆ ತೆರಬೇಕು? ಇದು ಯಾವ ನ್ಯಾಯ? ಮೊಬೈಲ್ ಇಟ್ಟಿರುವವರೆ ಸ್ಥಿತಿವಂತರು. ಅವರಿಗೆ ಅನುಕೂಲ ಮಾಡ್ಲಿಕ್ಕೆ ನಾವು ಬಡವರು ಹೆಚ್ಚಿಗೆ ಕೊಡಬೇಕಾ? ಅವರಿಗೆ ಮೊಬೈಲ್ ತಗೋಳ್ಳಿಕ್ಕೆ ನಾವು ಹೇಳಿದ್ವಾ?"

"ಅದು ಹಾಗಲ್ಲ, ಬಿಎಸ್ಸೆನ್ನೆಲ್‌ನಿಂದ ಮೊಬೈಲ್ ಕಂಪನಿಗೆ ಹೋಗುವ ಕರೆಗಳಿಗೆ ಬಿಎಸ್ಸೆನ್ನೆಲ್ ತೆರಬೇಕು ಅಂತ ಅವರು ಒತ್ತಾಯ ಮಾಡ್ತಾ ಇದ್ದಾರೆ"

"ಸ್ಥಿತಿವಂತರು ಬಡವರಿಗೆ ಸಹಾಯ ಮಾಡುವುದು ನನಗೆ ಅರ್ಥವಾಗುತ್ತದೆ. ಆದರೆ ಬಡವರು ಸ್ಥಿತಿವಂತರಿಗೆ ಸಹಾಯ ಮಾಡುವುದು ನನಗೆ ಜೀರ್ಣವಾಗುತ್ತಿಲ್ಲ. ನಿಮ್ಮ ವಾದವೇ ಸರಿಅಂತ ಇಟ್ಟುಕೊಳ್ಳೋಣ. ನಮ್ಮ ಬಾಡಿಗೆ, ಪ್ರತಿ ಕರೆಗೆ ಯಾಕೆ ಹೆಚ್ಚು ಮಾಡಬೇಕು? ಉಚಿತ ಕರೆ ಯಾಕೆ ಕಡಿತ ಮಾಡಬೇಕು?"

"ಎಲ್ಲಾ ದುಬಾರಿ ಆಗಿಲ್ಲ. ಎಸ್‌ಟಿಡಿ ಕರೆಯನ್ನು ನಾವು ಕಡಿಮೆ ಮಾಡ್ತಾ ಬಂದಿದ್ದೀವಿ. ಈ ಬಾರಿನೂ ರಾಜ್ಯದ ಒಳಗಿನ ಕರೆಗೂ, ರಾಜ್ಯದ ಹೊರಗಿನ ಕರೆಗೂ ಕಡಿಮೆ ಮಾಡಿದ್ದೀವಿ. ಅಲ್ಲದೆ ಹೆಚ್ಚು ಕರೆ ಮಾಡಿದಷ್ಟು ಪ್ರತಿ ಕರೆಗೆ ಬೆಲೆ ಕಡಿಮೆ ಆಗ್ತದೆ"

"ಇದೂ ಬಡವರು ಸ್ಥಿತಿವಂತರಿಗೆ ಸಬ್ಸಿಡಿ ಕೊಡುವ ಥರ ಅಲ್ವೇ? ತಿಂಗಳಿಗೆ ಸಾವಿರ ಕರೆ ಮಾಡುವುದು, ದೂರದ ಕರೆ ಮಾಡುವವರೆಲ್ಲಾ ಸ್ಥಿತಿವಂತರೇ. ನಾವು ಲೋಕಲ್, ಅದು ತಿಂಗಳಿಗೆ ನೂರು, ನೂರೈವತ್ತು ಕರೆ ಮಾಡುವವರು. ನಾವೇ ದೊಡ್ಡ ಸಂಖ್ಯೆಯಲ್ಲಿ ಬಿಎಸ್ಸೆನ್ನೆಲ್ ಗ್ರಾಹಕರು"

"ನೋಡಿ! ಖಾಸಗಿಯವರು ಟಾಟಾ, ಅಂಬಾನಿ, ಭಾರತಿ ಇವರೆಲ್ಲಾ ಸ್ಥಿರ ದೂರವಾಣಿ ಸೇವೆ ಶುರು ಮಾಡಿದ್ದಾರೆ. ಇವರು ಆ ರೀತಿ ಬೆಲೆ ಗಳನ್ನಿಡ್ತಾ ಇದ್ದಾರೆ. ಎಸ್‌ಟಿಡಿ ಕರೆಗೆ ಬೆಲೆ ಇಳಿಸಿದ್ದಾರೆ. ಹೆಚ್ಚು ಕರೆ ಮಾಡುವವರಿಗೆ ಬೆಲೆ ಕಡಿಮೆ. ನಾವೂ ಅವರ ಜತೆ ಪೈಪೋಟಿ ಮಾಡ್ಬೇಕಲ್ಲಾ"

"ಹಾಗಾದರೆ ಖಾಸಗಿಯವರಿಗೆ ಮೊಬೈಲ್, ಸ್ಥಿರ ದೂರವಾಣಿಗೆ ಪರ್ಮಿಟ್ ಕೊಟ್ಟಿದ್ದರಿಂದ ಇದೆಲ್ಲಾ ದುಬಾರಿಯಾದದ್ದಾ? ಖಾಸಗಿಯವರಿಗೆ ಕೊಡುವುದೇ ಬೇಕಾಗಿರಲಿಲ್ಲ"

"ಹಾಗಲ್ಲ. ಫೋನು ಸೇವೆ ವ್ಯಾಪಕವಾಗುವುದು ಬೆಳವಣಿಗೆಗೂ, ಉತ್ತಮ ಸಂಪರ್ಕಕ್ಕೂ, ದೇಶದ ಸಮಗ್ರತೆಗೂ ಅಗತ್ಯ. ಆದರೆ ಅಷ್ಟು ವ್ಯಾಪಕವಾಗಿ ಮಾಡಲು ಸರ್ಕಾರದ ಬಳಿ ಹಣ ಇಲ್ಲ. ಆದ್ದರಿಂದ ಖಾಸಗಿಯವರಿಗೆ ಕೊಡಬೇಕಾಯ್ತು"

"ಮೊಬೈಲ್ ಖಾಸಗಿಯವರಿಗೆ ಕೊಟ್ರಿರಿ. ಅವರು ನಿಗದಿ ಮಾಡಿದ ಲೈಸೆನ್ಸ್ ಫೀ ಕೊಟ್ಟಿಲ್ಲ. ಅದನ್ನು ಮನ್ನಾ ಮಾಡಿದ್ದೀರಿ. ದುಬಾರಿಬೆಲೆ ಇಟ್ಟಿದ್ದರು ಆದ್ದರಿಂದ ಮೊಬೈಲ್ ಸೇವೆ ಯಾರು ತಗೋಳ್ತಾ ಇರಲಿಲ್ಲ. ಬಹಳ ದಿನ ಬಿಎಸ್ಸೆನ್ನೆಲ್ ಮೊಬೈಲ್ ಸೇವೆ ಕೊಡುವುದು ಅಂತ ಮಾಡಿದ್ದೀರಿ. ಬಿಎಸ್ಸೆನ್ನೆಲ್ ಮೊಬೈಲ್ ಸೇವೆ ಆರಂಭ ಮಾಡ್ತಾರೆ ಅಂದಕೂಡ್ಲೆ ಖಾಸಗಿಯರೂ ಮೊಬೈಲ್ ಬೆಲೆ ಕಡಿಮೆ ಮಾಡ್ಲಿಕ್ಕೆ ಆರಂಭ ಮಾಡಿದ್ರು. ನೀವು ಖಾಸಗಿ ಮೊಬೈಲ್ ಕಂಪನಿ ಅನುಕೂಲಕ್ಕೆ ಎಲ್ಲಾ ನೀತಿ ರೂಪಿಸ್ತೀರಿ ಅಂತ ಅಪಾದನೆ ಇದೆಯಲ್ಲ?"

"ಇಲ್ಲಾಪ್ಪಾ! ನಾವು ಎಲ್ಲಾರ ಹಿತಕ್ಕಾಗಿ ನೀತಿ ರೂಪಿಸ್ತೇವೆ"

"ಎಲ್ಲಾ ಅಂದರೆ ಯಾರು?"

"ಟಾಟಾ, ಅಂಬಾನಿ, ಭಾರತಿ, ಬಿಪಿಎಲ್, ಹಚ್...."

"ಈ ಎಲ್ಲಾರಲ್ಲಿ ಬಿಎಸ್ಸೆನ್ನೆಲ್ ಮತ್ತು ಸಾಮಾನ್ಯ ಗ್ರಾಹಕರು ಇಲ್ಲಾ ಅಂತಾ ಕಾಣ್ತದೆ"

"ನೀವೂ ಸೇರಿದ್ದೀರಾ ಆದರಲ್ಲಿ. ಗ್ರಾಹಕರು ಜಾಸ್ತಿ ಆಗದೆ ಅದೂ ಎಲ್ಲಾ ಹೊಸ ಪ್ರದೇಶಗಳಲ್ಲಿ, ಹೊಸ ವರ್ಗಗಳಲ್ಲಿ ಗ್ರಾಹಕರು ಜಾಸ್ತಿ ಆಗಬೇಕು ಎನ್ನುವುದು ನಮ್ಮ ನೀತಿ"

"ಆದರೆ ಈ ಖಾಸಗಿ ಕಂಪನಿಗಳು ನಿಯಮದ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಸೇವೆ ಒದಗಿಸಿಲ್ಲ. ಮತ್ತು ನಗರ ಪ್ರದೇಶಗಳಲ್ಲೂ ಹೊಸ ಗ್ರಾಹಕರನ್ನು ಪಡೆದಿಲ್ಲ, ಬಿಎಸ್ಸೆನ್ನೆಲ್ ಸ್ಥಿತಿವಂತ ಗ್ರಾಹಕರನ್ನು ದೋಚುವ ಹುನ್ನಾರದಲ್ಲಿದ್ದಾರೆ ಅಷ್ಟೆ! ನೀವೂ ಈ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಲಿಕ್ಕೆ ಅವರ ಜತೆ ಶಾಮೀಲಾಗಿದ್ದೀರಂತಲ್ಲ"

"ಇಲ್ಲಾಪ್ಪಾ! ನಮ್ಮ ಈಗಿನ ಮಂತ್ರಿಗಳು ಬಹಳ ಕಡಕ್. ಹಿಂದಿನ ಮಂತ್ರಿಗಳಿಗೂ ಅಂಬಾನಿಗೂ ಸ್ವಲ್ಪ ನಿಕಟವಿತ್ತು ಅಂತ ಸುದ್ದಿ ಇತ್ತು. ಅದಕ್ಕೆ ಬದಲಾಯಿಸಿದರಲ್ಲಾ. ಈಗಿನ ಮಂತ್ರಿಗಳು ಎಲ್ಲರನ್ನೂ ಒಂದೇ ರೀತಿ ಕಾಣ್ತಾರೆ"

"ಅಂದರೆ ಎಲ್ಲಾ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡ್ತಾರೆ. ಒಂದು ಕಡೆ ಮೊಬೈಲ್ ಕಂಪನಿಗಳಿಗೆ ಸಹಾಯ ಮಾಡ್ತಾರೆ. ಇನ್ನೊಂದು ಕಡೆ ಟಾಟಾ-ಅಂಬಾನಿ-ಭಾರತಿಯವರ ಸ್ಥಿರ ದೂರವಾಣಿ ಹೆಚ್ಚು ಲಾಭಕರವಾಗುವ, ಬಿಎಸ್ಸೆನ್ನೆಲ್ ಮೂಲ ಕರೆಗಳನ್ನು ದುಬಾರಿ ಮಾಡಿದ್ದಾರೆ ಅಂತ ನಮಗೆಲ್ಲಾ ಅನ್ನಿಸ್ತಿದೆ. ಹಿಂದೆ ಪೋಸ್ಟಲ್ ಬೆಲೆ ತೀರಾ ದುಬಾರಿ ಮಾಡಿ, ಖಾಸಗಿಯವರ ಕುರಿಯರ್ ಅಗ್ಗ ಎನ್ನುವ ಸ್ಥಿತಿ ಮಾಡಿದರಲ್ಲ ಹಾಗೆ. ಬಿಎಸ್ಸೆನ್ನೆಲ್ ದುಬಾರಿಮಾಡಿ, ಕರೆಗಳು ಕಡಿಮೆ ಆಗಿ, ಗ್ರಾಹಕರು ಬಿಟ್ಟು ಹೋಗಿ ಕಂಪನಿ ನಷ್ಟಕ್ಕೆ ಬಂದು ಖಾಸಗಿಯವರಿಗೆ ಕೊಡಲಿಕ್ಕೆ ಅನುಕೂಲ ಆಗ್ತದೆ ಅಂತ ಮಿನಿಸ್ಟರ್ ಹುನ್ನಾರ"

"ಪಾಪ! ಮಿನಿಸ್ಟರನ್ನು ದೂರಿ ಪ್ರಯೋಜನವಿಲ್ಲ. ಅವರು ಸಂಪರ್ಕ ಖಾತೆಗೂ ಮಿನಿಸ್ಟರ್. ಖಾಸಗೀಕರಣ ಖಾತೆಗೂ ಮಿನಿಸ್ಟರ್. ಎರಡೂ ಹಕ್ಕಿನ್ನ ಒಂದೇ ಕಲ್ಲಲ್ಲಿ ಹೊಡೆಯುವಾ ಅಂತ ಈ ನೀತಿ ರೂಪಿಸಿರಬಹುದು. ನಮಗೆ ಗೊತ್ತಿಲ್ಲ"

"ಇದೆಲ್ಲಾ ಸರಿ ಇಲ್ಲ. ನನಗಂತೂ ಈ ದುಬಾರಿ ಬೆಲೆ ತೆರಲಿಕ್ಕೆ ಸಾಧ್ಯವಿಲ್ಲ. ನನ್ನ ಫೋನ್ ವಾಪಸು ಮಾಡ್ತಾ ಇದ್ದೇನೆ"

"ಓ! ನೀವೂ ಫೋನು ವಾಪಸು ಮಾಡ್ತಾ ಇದ್ದೀರಾ? ಒಳ್ಳೆದು! ಕಳೆದ ಕೆಲವು ದಿನಗಳಲ್ಲಿ ಬಹಳ ಜನ ಫೋನ್ ವಾಪಸು ಮಾಡ್ತಾ ಇದ್ದಾರೆ. ಅಂತಹವರಿಗೆ ಒಂದು ಹೊಸ ಸ್ಕೀಮು ಮಾಡಿದ್ದೇವೆ"

"ಏನದು ಸ್ಕೀಮು?"

"ಫೋನು ವಾಪಸು ಮಾಡಿದವರಿಗೆ ತೊಗಾಡಿಯಾ ಅವರ ವಿಹೆಚ್‌ಪಿ ಒಂದು ಉಚಿತ ತ್ರಿಶೂಲ ಕೊಡ್ತಾರೆ. ಪಾಪ ಇಷ್ಟು ವರ್ಷಗಳಿಂದ ಫೋನು ಇಟ್ಟುಕೊಂಡಿದ್ದೀರಲ್ಲಾ! ಅದರ ನೆನಪಿಗೆ. ಫೋನ್ ಮೇಲೆ ಕೋಪಾನ್ನ ಬೇರೆ ಯಾರ ಮೇಲಾದ್ರೂ ತೀರಿಸಿಕೊಳ್ಳಲಿ ಅಂತ. ಕೊನೆಯ ಬಿಲ್ ಪಾವತಿ ಮಾಡಿದ ರಶೀದಿ ಕೊಟ್ಟರೆ ತ್ರಿಶೂಲ ಕೊಡ್ತಾರೆ. ಅದಕ್ಕೆ ವಿಶೇಷ ಉಚಿತ ಫೋನ್ ವ್ಯವಸ್ಥೆ ಮಾಡಿದ್ದೇವೆ. ಕೊನೆಯ ಉಚಿತ ಫೋನ್ ಮಾಡಿದರೆ ಅವರು ಮನೆಗೆ ಬಂದು ತ್ರಿಶೂಲ ಕೊಡ್ತಾರೆ. ಈ ಸ್ಕೀಮ್‌ಗೆ ವಿಹೆಚ್‌ಪಿಯ ಉಚಿತ ಫೋನ್ ಸಂಖ್ಯೆ ಬರೆದುಕೊಳ್ಳಿ 1-600-420-420"

"ಆಂ!!"

"ತ್ವರೆ ಮಾಡಿ! 'ಫೋನ್ ವಾಪಸು - ತ್ರಿಶೂಲ ಉಚಿತ' ಸ್ಕೀಮಿನ ಲಾಭ ಪಡೆಯಲು ಮರೆಯದಿರಿ"

'ಖಾಸಗೀಕರಣ ಬೇಡವೇ ಬೇಡ'
ಬಸ್ರೂರಿನಲ್ಲಿ ವಿದ್ಯುತ್ ಬಳಕೆದಾರರಿಂದ ರಸ್ತೆ ತಡೆ ಕಾರ್ಯಕ್ರಮ

ಮೇ 5 ರಂದು ಕುಂದಾಪುರ ತಾಲೂಕು ರೈತ ಸಂಘ ಹಾಗೂ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳ ನೇತೃತ್ವದಲ್ಲಿ ಬಸ್ರೂರಿನ ಬಸ್ ನಿಲ್ದಾಣದ ಬಳಿ ರಸ್ತೆ ತಡೆ ಚಳುವಳಿ ನಡೆಯಿತು.

ವಿದ್ಯುತ್ ದರ ಏರಿಕೆಯ ವಿರುದ್ಧ ವಿದ್ಯುತ್ ಖಾಸಗೀಕರಣದ ವಿರುದ್ಧ ಹಾಗೂ ಮೀಟರ್ ಅಳವಡಿಕೆ ವಿರೋಧಿಸಿ ವಿದ್ಯುತ್ ಬಳಕೆದಾರರು ರಸ್ತೆ ತಡೆ ಚಳುವಳಿ ನಡೆಸಿದರು. ಚಳುವಳಿಯ ನೇತೃತ್ವವನ್ನು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಯು.ದಾಸ.ಭಂಡಾರಿ, ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಗೋಪಾಲ ಶೆಟ್ಟಿಗಾರ, ವಿದ್ಯುತ್ ಬಳಕೆದಾರರ ಹೋರಾಟ ಸಮಿತಿ ಅಧ್ಯಕ್ಷ ಮಹಾಬಲ ಶೆಟ್ಟಿ, ಕಾರ್ಯದರ್ಶಿ ರಾಜೀವ ಪುತ್ರನ್, ಸಿ.ಎಮ್.ಬಿ. ನಾಯರ್ ಮತ್ತು ವೆಂಕಟೇಶ ಮುಂತಾದವರು ಭಾಗವಹಿಸಿದ್ದರು.

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳನ್ನು ರಚಿಸುವುದರ ಮೂಲಕ ಇನ್ನೂ ವ್ಯಾಪಕವಾಗಿ ಹೋರಾಟ ನಡೆಸುವುದಾಗಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಯು.ದಾಸ.ಭಂಡಾರಿಯವರು ಘೋಷಿಸಿದ್ದಾರೆ.

ಬಿ.ಗೋಪಾಲ ಸೆಟ್ಟಿಗಾರ

ಅಂಕಿ ಸಂಖ್ಯೆ

ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು 31-3-2003ರಲ್ಲಿ ಗಳಿಸಿದ ಲಾಭ

ಕೋಟಿ ರೂಗಳಲ್ಲಿ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	3001	ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	351
*ಕೆನರಾಬ್ಯಾಂಕ್	711	ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್	401
ಬ್ಯಾಂಕ್ ಆಫ್ ಬರೋಡಾ	681	*ಸಿಂಡಿಕೇಟ್ ಬ್ಯಾಂಕ್	266
ಪಂಜಾಬ್ ನ್ಯಾಶನಲ್ ಬ್ಯಾಂಕ್	781	ಇಂಡಿಯನ್ ಓವರ್‌ಸೀಸ್ ಬ್ಯಾಂಕ್	341
*ಕಾರ್ಪೊರೇಶನ್ ಬ್ಯಾಂಕ್	414	*ವಿಜಯಾ ಬ್ಯಾಂಕ್	196.5
ಬ್ಯಾಂಕ್ ಆಫ್ ಇಂಡಿಯಾ	659		
ಆಂಧ್ರ ಬ್ಯಾಂಕ್	331		

*ಮೂಲತಃ ಕರ್ನಾಟಕ ರಾಜ್ಯದವು

ಇಷ್ಟೊಂದು ಲಾಭತರುವ ಬ್ಯಾಂಕುಗಳನ್ನು ಖಾಸಗಿಯವರಿಗೆ ನೀಡಬೇಕೆ? ಬಿಜೆಪಿ ಸರ್ಕಾರದ ಈ ವರ್ಷದ ಬಜೆಟ್ಟಿನ ಪ್ರಕಾರ ವಿದೇಶಿ ಕಂಪನಿಗಳು ಸಹ ಬ್ಯಾಂಕುಗಳ ಶೇರುಗಳನ್ನು ಕೊಳ್ಳಬಹುದಾಗಿದೆ. ಅಂದರೆ ಲಾಭದಾಯಕ ಬ್ಯಾಂಕುಗಳು ನಮ್ಮ ದೇಶದ ಖಾಸಗಿಯವರಿಗೆ ಮಾತ್ರವಲ್ಲ ಬಹುರಾಷ್ಟ್ರೀಯ ಕಂಪನಿಗಳ ಕೈಗೆ ಹೋಗುವ ಸಂಭವವೂ ಇದೆ

ಕೋಮುವಾದಿ ಶಕ್ತಿಗಳ ಗುರಿ - ಕೇರಳ

ಕೇರಳದಲ್ಲಿ ಆರ್‌ಎಸ್‌ಎಸ್ ಮತ್ತು ಮುಸ್ಲಿಂ ಲೀಗ್ ಕೋಮು ಗಲಭೆಯೆಬ್ಬಿಸುತ್ತಿವೆ.ಚಟುವಟಿಕೆಗಳನ್ನು ಭೀಕರವಾಗಿ ವಿಸ್ತರಿಸುತ್ತಿವೆ. ಇದಕ್ಕೆ ಕಾಂಗ್ರೆಸ್ ಮುಖ್ಯಮಂತ್ರಿ ಆಂಟೋನಿ ನೀರೆರೆದು ಪೋಷಿಸುತ್ತಿದ್ದಾರೆ. ಈ ಸವಾಲುಗಳೇನು?

ಆಂಟೋನಿ ಸರ್ಕಾರವು ಕೇರಳದಲ್ಲಿ ತನ್ನ ಎರಡು ವರ್ಷಗಳನ್ನು ಪೂರೈಸುತ್ತಿದೆ. ತನ್ನ ಎರಡು ವರ್ಷಗಳ ಆಡಳಿತವನ್ನು ಸರ್ಕಾರ ಪೂರೈಸಿದ ಸಮಯದಲ್ಲೆ ಇಡೀ ರಾಜ್ಯ ಭಯಾನಕ ಕೋಮುಗಲಭೆಯನ್ನು ಕಂಡಿದೆ. ದೋಣಿಯಲ್ಲಿ ಬಂದ ದಾಳಿಕೋರರ ತಂಡ ಕೋಯಿಕೋಡ್ ಜಿಲ್ಲೆಯ ಮರದ್ ಕಡಲ ತೀರದಲ್ಲಿ 9 ಜನರನ್ನು ಬರ್ಬರವಾಗಿ ಹತ್ಯೆಗೈದಿದ್ದಾರೆ. ಕೋಮುಗಲಭೆಗಳು ಮರದ್‌ನಲ್ಲಿ ಪ್ರಾರಂಭವಾದದ್ದು 2002ರ ಜನವರಿಯಿಂದ. ಆಗ ನಡೆದ 5 ಜನರ ಬರ್ಬರ ಕೊಲೆ ಹಾಗೂ 90 ಮನೆಗಳ ನಾಶದಿಂದ ಇದು ಆರಂಭವಾಗಿತ್ತು. ಮೀನುಹಿಡಿದು ಜೀವನ ಸಾಗಿಸುವ ಜನರು ವಾಸವಾಗಿರುವ ಒಂದು ಸಣ್ಣ ಹಳ್ಳಿ 'ಮೆರದ್'. ಕೊಲ್ಲಲ್ಪಟ್ಟವರಲ್ಲಿ ಬಹುತೇಕರು ಆರ್‌ಎಸ್‌ಎಸ್ ನಡೆಸುವ ಸ್ಥಳೀಯ ಜನಾಂಗದ ಸಂಘಟನೆಯ ಜನ. ದಾಳಿ ನಡೆಸಿದವರು ಮುಸ್ಲಿಂ ಮೂಲಭೂತವಾದಿ ಸಂಘಟನೆಯಾದ ರಾಷ್ಟ್ರೀಯ ಅಭಿವೃದ್ಧಿ ರಂಗ (ಎನ್‌ಡಿಎಫ್.)ಗೆ ಸೇರಿದವರೆಂದು ಸಂದೇಹಪಡಲಾಗಿದೆ. ಹಿಂದಿನ ವರ್ಷ ನಡೆದ ಗಲಭೆಗೆ ಪ್ರತೀಕಾರವಾಗಿ ಈ ದಾಳಿಯನ್ನು ನಡೆಸಲಾಗಿದೆ ಎನ್ನಲಾಗಿದೆ.

ಕೋಮುವಾದಿ ಸಂಘಟನೆಗಳ ಚಟುವಟಿಕೆಗಳು ವಿವಿಧ ಸಮುದಾಯಗಳ ನಡುವೆ ಭೀತಿ ಹುಟ್ಟಿಸಿ



ಆಂಟೋನಿಗೆ ಆರ್‌ಎಸ್‌ಎಸ್-ಮುಸ್ಲಿಂ ಲೀಗ್ ಇಬ್ಬರೂ ಗೆಳೆಯರು.

ಕಂದರ ನಿರ್ಮಿಸುವ ಅವರ ನಿರಂತರ ಯತ್ನದ ಕುರಿತು ಬಹಳಷ್ಟು ಪ್ರಶ್ನೆಗಳನ್ನು ಈ ಪೂರ್ವ ಯೋಜಿತ ಹಿಂಸೆಯು ಎತ್ತಿದೆ. ಕೇರಳ ಸಮಾಜವನ್ನು ಕೋಮುವಾದೀಕರಿಸುವ ಈ ಪ್ರಕ್ರಿಯೆಯಲ್ಲಿ ಯು.ಡಿ.ಎಫ್. ಸರ್ಕಾರದ ಪಾತ್ರ ಹಾಗೂ ಅದರ ಮುಖ್ಯಮಂತ್ರಿ, ಎ.ಕೆ. ಆಂಟನಿಯವರು ತೆಗೆದುಕೊಳ್ಳುತ್ತಿರುವ ನಿಲುವುಗಳು ಸಹ ಬೆಳಕಿಗೆ ಬಂದಿವೆ.

ಅಪಾಯಕಾರಿ ಪ್ರಮಾಣ

ಕೇರಳದಲ್ಲಿ ಎಡನೇತೃತ್ವದ ಮೈತ್ರಿಕೂಟವನ್ನು ಹಿಮ್ಮೆಟ್ಟಿಸಲು ಕಾಂಗ್ರೆಸ್ ಪಕ್ಷವು ಕೋಮುವಾದಿ ಹಾಗೂ ಜಾತಿ ಆಧಾರಿತ ಸಂಘಟನೆಗಳೊಂದಿಗೆ ನಿರಂತರವಾಗಿ ಕೈಜೋಡಿಸುತ್ತಾ ಬಂದಿದೆ. ದಶಕಗಳಿಂದ ನಡೆದು ಬಂದಿರುವ ಈ ಪ್ರಕ್ರಿಯೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಆಗುತ್ತಿರುವ ಬದಲಾವಣೆಗಳ ಹಿನ್ನೆಯಲ್ಲಿ ಪರಿಸ್ಥಿತಿಯು ಆಘಾತಕಾರಿ ಪ್ರಮಾಣವನ್ನು ತಲುಪಿದೆ. ಅಖಿಲ ಭಾರತ ಮಟ್ಟದಲ್ಲಿ ತಲೆ ಎತ್ತಿರುವ ಹಿಂದುತ್ವ ಶಕ್ತಿಗಳು ರಾಜ್ಯದಲ್ಲಿ ಆರ್‌ಎಸ್‌ಎಸ್‌ನ ಪ್ರಭಾವ ಹಾಗೂ ಸಂಪರ್ಕವನ್ನು ವೃದ್ಧಿಸಲು ನಿರಂತರ ಯತ್ನ ನಡೆಸಿದೆ. ದೇವಸ್ಥಾನಗಳು ಹಾಗೂ ಧಾರ್ಮಿಕ ಹಬ್ಬಗಳನ್ನು ಬಳಸಿ ತಮ್ಮ ಸಿದ್ಧಾಂತವನ್ನು ವ್ಯಾಪಕಗೊಳಿಸಿ ಸಾಮಾಜಿಕ ಸಂಸ್ಥೆಗಳೊಳಗೆ ನುಸುಳುವ ತಮ್ಮ ಯತ್ನಗಳನ್ನು ಹೆಚ್ಚಿಸಿದೆ. ಇದಕ್ಕೆ ಸಮಾನಾಂತರವಾಗಿ ಅಲ್ಪಸಂಖ್ಯಾತ ಮೂಲ ಭೂತವಾದವು ಸಹ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಮುಂದಾಗಿದೆ.

ಕೇರಳದ ಸಾಮಾಜಿಕ ಸಂರಚನೆಯೇ ವಿಭಿನ್ನವಾದದ್ದಾಗಿದೆ. ಶೇ.22ರಷ್ಟು ಮುಸ್ಲಿಂ ಜನಸಂಖ್ಯೆ ಹಾಗೂ ಶೇ.21ರಷ್ಟು ಕ್ರಿಶ್ಚಿಯನ್ ಜನ ಸಂಖ್ಯೆಯನ್ನು ಹೊಂದಿರುವುದೆ ವಿಭಿನ್ನತೆಯಾಗಿದೆ. ಬಲಿಷ್ಠವಾದ ಕಮ್ಯುನಿಸ್ಟ್ ಮತ್ತು ಎಡ ಚಳುವಳಿ ಹಾಗೂ ರಾಜಕೀಯದಿಂದಾಗಿ ಎಡ ಹಾಗೂ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟಗಳ ನಡುವ ಅಲ್ಲಿನ ರಾಜಕೀಯ ಧೃಡೀಕರಣಗೊಂಡಿದ್ದ ಕಾರಣ ತೀವ್ರವಾದ ಕೋಮುವಾದಿ ಶಕ್ತಿಗಳು ಹೆಚ್ಚು ಪ್ರಾಬಲ್ಯ ಪಡೆಯಲು ಈ ಹಿಂದೆ ಸಾಧ್ಯವಾಗಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇದು ಬದಲಾಗುತ್ತಿದೆ.


ಪ್ರಕಾಶ್ ಕಾರಟ್

ಕಾಂಗ್ರೆಸ್ ಉತ್ತೇಜನ

ಜಾತಿ ಹಾಗೂ ಕೋಮುವಾದಿ ಗುಂಪುಗಾರಿಕೆಗೆ ಕಾಂಗ್ರೆಸ್ ನೀಡಿದ ಉತ್ತೇಜನದಿಂದಾಗಿ ಇಂದು ಕೋಮುವಾದಿ ಶಕ್ತಿಗಳಲ್ಲಿ ತೀವ್ರತೆ ಉಂಟಾಗಿದೆ. ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗವನ್ನು 2001ರಲ್ಲಿ ಅಧಿಕಾರದಿಂದ ಕೆಳಗಿಳಿಸುವ ಏಕಮಾತ್ರ ಉದ್ದೇಶದೊಂದಿಗೆ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗವು (ಯುಡಿಎಫ್) ಕೋಮುವಾದಿ ನಿಲುಮೆ ಆಧಾರಿತವಾಗಿ ಸಂಘಟಿತವಾಗಿರುವ ಪಕ್ಷಗಳನ್ನು ಸಹ ಒಳಗೊಂಡಿತು. ಆರ್‌ಎಸ್‌ಎಸ್ ಹಾಗೂ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ (ಪಿ.ಡಿ.ಪಿ) ಎರಡು ಸಹ ಯುಡಿಎಫ್‌ನ್ನು ಬೆಂಬಲಿಸಿದವು. ಪಿ.ಡಿ.ಪಿ. ಬಹಿರಂಗವಾಗಿ ಬೆಂಬಲಿಸಿದರೆ ಆರ್ ಎಸ್‌ಎಸ್ ಪರೋಕ್ಷವಾಗಿ ಬೆಂಬಲಿಸಿತು. ತಾವು ಅಧಿಕಾರಕ್ಕೆ ಬಂದಲ್ಲಿ ರಾಷ್ಟ್ರೀಯ ಸುರಕ್ಷತಾ ಕಾಯ್ದೆಯಡಿ (ಎನ್‌ಎಸ್‌ಎ) ಸೆರೆಮನೆಯಲ್ಲಿದ್ದ ಪಿಡಿಪಿ ಮುಖಂಡ ಮದನಿಯನ್ನು ಬಿಡುಗಡೆ ಮಾಡುವುದಾಗಿ ಯು.ಡಿ.ಎಫ್. ಆಶ್ವಾಸನೆ ನೀಡಿತು. ಈ ನಿಟ್ಟಿನಲ್ಲಿ ಪ್ರಸ್ತುತ ಯು.ಡಿ.ಎಫ್. ಸರ್ಕಾರದ ಆಳ್ವಿಕೆ ಅದರ ದೃಷ್ಟಿಕೋನದಿಂದಾಗಿ ಜಾತಿವಾದಿ ಹಾಗೂ ಕೋಮುವಾದಿ ರಾಜಕೀಯದ ಬೆಳವಣಿಗೆಗೆ ಸೂಕ್ತ ವಾತಾವರಣ ನಿರ್ಮಾಣವಾಗಿದೆ.

ಆಂಟೋನಿ ಹಸ್ತಲಾಘವ!

ತಮ್ಮ ಪಕ್ಷದ ಬಂಡುಕೋರರಿಂದ ಭಯಭೀತರಾಗಿರುವ ಎ.ಕೆ. ಆಂಟೋನಿ ಅವರು ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವ ಸಲುವಾಗಿ ಕೋಮುವಾದಿ ಹಾಗೂ ಜಾತಿವಾದಿ ಲಾಭಗಳನ್ನು ಮನವೊಲಿಸುತ್ತಾ ಪ್ರೋತ್ಸಾಹಿಸುತ್ತಿದ್ದಾರೆ. ಆರ್.ಎಸ್.ಎಸ್., ಬಿಜೆಪಿ ಅಥವಾ ಮುಸ್ಲಿಂ ಭೂತವಾದಿಗಳಿಗಿಂತ ಹೆಚ್ಚಿನ ಅಪಾಯ ಮಾರ್ಕ್ಸ್‌ವಾದಿಗಳಿಂದಿದೆ ಎಂದು ಆಂಟೋನಿ ಪದೆಪದೆ ಹೇಳುತ್ತಿದ್ದಾರೆ. ಕಳೆದೆರಡು ವರ್ಷಗಳಲ್ಲಿ ಆರ್.ಎಸ್.ಎಸ್. ಗೂಂಡಾಗಳು ಮಾರ್ಕ್ಸಿಸ್ಟರ ಮೇಲೆ ನಿರಂತರ ದಾಳಿ ನಡೆಸಿದ್ದರೂ ಸಹ ಅವರ ಕೊಲೆಪಾತಕ ರಾಜಕೀಯವನ್ನು ಖಂಡಿಸುವುದು ಅಗತ್ಯವೆಂದು ಆಂಟೋನಿ ಭಾವಿಸಲಿಲ್ಲ, ಬದಲಾಗಿ ಮಾರ್ಕ್ಸಿಸ್ಟರು ಹಾಗೂ ಆರ್.ಎಸ್.ಎಸ್. ಅವಳಿ ಶತ್ರುಗಳೆಂದು ನಿರಂತರವಾಗಿ ಹೇಳುತ್ತಾ ಬಂದಿದ್ದಾರೆ. ಯುಡಿಎಫ್‌ನ ಈ ದೃಷ್ಟಿಕೋನ ದಿಂದಾಗಿ ಕಳೆದವರ್ಷದ ಜನವರಿಯಲ್ಲಿ ಭುಗಿಲೆದ್ದ ಮರದ್‌ನಲ್ಲಿನ ಕೋಮು ದಳ್ಳುರಿಯನ್ನು ಖಂಡಿಸಲಿಲ್ಲ ಮಾತ್ರವಲ್ಲ ಕೊಲೆಪಾತಕರನ್ನು ಹಿಡಿಯಲು ಯಾವುದೇ ಯತ್ನ ನಡೆಸಲಿಲ್ಲ. ಮಾತ್ರವಲ್ಲದೆ ಗಲಭೆಯ ಸಂತ್ರಸ್ತರಿಗೆ ಪರಿಹಾರವನ್ನು ಸಹ ಕೋಮುವಾದಿ ಸಂಘಟನೆಗಳ ಮೂಲಕವೇ ನೀಡಿದ್ದಾರೆ.



ಕೋಮು ಅಪಾಯವನ್ನು ಅಂದಾಜಿಸದ ಸರ್ಕಾರ

ಹಿಂದಿನ ಎಲ್.ಡಿ.ಎಫ್. ಸರ್ಕಾರ ತೀವ್ರಗೊಳ್ಳುತ್ತಿರುವ ಎಲ್‌ಡಿಎಫ್. ಚಟುವಟಿಕೆಗಳನ್ನು ಹಾಗೂ ಅದರ ಅಪಾಯವನ್ನು ಬಯಲು ಮಾಡಿತ್ತು. ನಾಯನಾರ್ ಸರ್ಕಾರವು ಶಸ್ತ್ರಾಸ್ತ್ರ ತರಬೇತಿ ಒದಗಿಸುತ್ತಿದ್ದ ಆದರ ಕಾರ್ಯಕರ್ತರನ್ನು ಬಂಧಿಸಿತ್ತು. ಮಾತ್ರವಲ್ಲದೆ ಶಸ್ತ್ರಾಸ್ತ್ರಗಳನ್ನು ಸಹ ಪತ್ತೆ ಹಚ್ಚಿತ್ತು. ಆದರೆ ಪ್ರಸ್ತುತ ಯುಡಿಎಫ್ ಸರ್ಕಾರದಲ್ಲಿನ ಮುಸ್ಲಿಂ ಲೀಗ್ (ಐಯುಎಂಎಲ್) ಭಯೋತ್ಪಾದಕ ಸಂಘಟನೆಯ ವಿರುದ್ಧ ಧೃಡ ನಿಲುವು ಉಳ್ಳದಿರುವ ಕಾರಣ ಹಿಂದಿನ ಸರ್ಕಾರ ವಹಿಸಿದ್ದ ಎಚ್ಚರಿಕೆ ಹಾಗೂ ಕ್ರಮ ಎಲ್ಲ ನಿಂತಂತಾಗಿದೆ.

ವಿಶ್ವ ಹಿಂದು ಪರಿಷತ್ ತ್ರಿಶೂಲ ದೀಕ್ಷ ಕಾರ್ಯಕ್ರಮವನ್ನು ಕೇರಳದಲ್ಲಿ ಘೋಷಿಸಿದಾಗ ಅದನ್ನು ನಿಷೇಧಿಸಲು ಆಂಟೋನಿ ನಿರಾಕರಿಸಿದರು. ರಾಜಸ್ಥಾನದಲ್ಲಿನ ಕಾಂಗ್ರೆಸ್ ಸರ್ಕಾರ ಅದನ್ನು ನಿಷೇಧಿಸಿ ತೊಗಾಡಿಯರನ್ನು ಬಂಧಿಸಿದ್ದಾರಲ್ಲಿ ಎಂದು ತೋರಿದಾಗ ಕೇರಳದಲ್ಲಿನ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿದೆ ಎಂದು ವಾದಿಸಿದೆ. ಸಾಮಾಜಿಕ ಶಾಂತಿಯನ್ನು ಕಾಪಾಡಲು ವಿವಿಧ ಸಮುದಾಯಗಳ ಚಟುವಟಿಕೆಗಳನ್ನು ಸಹಿಸಿಕೊಳ್ಳಬೇಕಿದೆ ಎಂದು ಮುಂದುವರೆದು ವಾದಿಸಿದ ಅವರು ಪಶ್ಚಿಮ ಬಂಗಾಳ ತ್ರಿಶೂಲ ದೀಕ್ಷೆಯನ್ನು ನಿಷೇಧಿಸಿಲ್ಲ ಎಂದರು. ಆದರೆ ವಿಶ್ವ ಹಿಂದು ಪರಿಷತ್ ತ್ರಿಶೂಲ ದೀಕ್ಷೆ ಕಾರ್ಯಕ್ರಮ ಅಥವಾ ದಿನಾಂಕವನ್ನು ಪಶ್ಚಿಮ ಬಂಗಾಳಕ್ಕೆ ಸಂಬಂಧ ಪಟ್ಟಂತೆ ಇನ್ನೂ ಘೋಷಿಸಿಲ್ಲ ಎಂಬುದನ್ನು ಅರಿಯದೆ ಮೊಂಡುವಾದವನ್ನು ಮಂಡಿಸಿದ್ದಾರೆ. ಅಂತಹ ಕಾರ್ಯಕ್ರಮವನ್ನು ವಿಹೆಚ್‌ಪಿ ಪಶ್ಚಿಮ ಬಂಗಾಳದಲ್ಲಿ ಘೋಷಿಸಿದಲ್ಲಿ ಅದನ್ನು ನಿಷೇಧಿಸಲು ಅಲ್ಲಿನ ಎಡರಂಗ ಸರ್ಕಾರ ಹಿಂದೇಟಾಕದು. ಆಂಟೋನಿ ಅವರ ಕೃಪೆಯನ್ನು ಸತ್ಕರಿಸುವಂತೆ ಆಂಟೋನಿ ಅವರು ಐಐಸಿಸಿ ಅಧ್ಯಕ್ಷರಾಗಲು ಅರ್ಹ ವ್ಯಕ್ತಿಯೆಂದು ವಿಹೆಚ್‌ಪಿಯ ಪ್ರವೀಣ ತೊಗಾಡಿಯಾ ಘೋಷಿಸಿದ್ದಾರೆ.

ಶಿಕ್ಷಣ ವ್ಯವಸ್ಥೆಯನ್ನು ಕೋಮುವಾದೀಕರಿಸುವ ಬಿಜೆಪಿ ಸರ್ಕಾರದ ಯೋಜನೆಯಿಂದ ಯಾವುದೇ ಅಪಾಯವಿಲ್ಲ ಎಂಬಂತೆ ಆಂಟೋನಿ ಈ ಹಿಂದೆ ಮಾತನಾಡಿದ್ದಾರೆ. ಕೇಸರೀಕರಣ ಎಂಬ ಬಣ್ಣಕ್ಕೆ ಧಾರ್ಮಿಕ ಪ್ರತೀಕತೆ ಇರುವ ಕಾರಣ ಶಿಕ್ಷಣದ ಕೋಮುವಾದೀಕರಣವನ್ನು ಹೆಸರಿಸಲಾಗದ ಕೇಸರೀಕರಣ ಎಂಬ ಪದ ಬಳಕೆಯನ್ನು ವಿರೋಧಿಸಿದರು. ವಾಸ್ತವಾಂಶ ಇರುವುದು ಶಿಕ್ಷಣ ವ್ಯವಸ್ಥೆಯಲ್ಲಿ ಕೋಮುವಾದಿ ಸಿದ್ಧಾಂತವನ್ನು ತುರುಕುವ ಯತ್ನ ಕೇಸರೀಕರಣದ ಪದ ಬಳಕೆಯಲ್ಲಿಲ್ಲ ಎಂಬುದನ್ನು ಅರಿತಿದ್ದರೂ ಸಹ ಆಂಟೋನಿ ಈ ರೀತಿ ವಾದಿಸಿದ್ದಾರೆ.

ನೆಲೆಯೂರಲು ಆರ್.ಎಸ್.ಎಸ್. ಪರಿವಾರ ನಡೆಸುವ ಯತ್ನ

ಶ್ರೀ ನಾರಾಯಣ ಗುರು ಅವರ ಸಾಮಾಜಿಕ ಸುಧಾರಣಾ ಚಳುವಳಿಯ ಮೂಲಕ ಆರಂಭಗೊಂಡ ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ (ಎಸ್‌ಎನ್‌ಡಿಪಿ)ಯ ನಾಯಕತ್ವವನ್ನು ಪಡೆಯಲು ಆ ಮೂಲಕ ಸಾಮಾಜಿಕ ನೆಲೆಯನ್ನು ಪಡೆದುಕೊಳ್ಳಲು ಆರ್‌ಎಸ್‌ಎಸ್, ಬಿಜೆಪಿ ಯತ್ನಿಸಿದೆ. ಎಸ್‌ಎನ್‌ಡಿಪಿಯ ಪ್ರಧಾನ ಕಾರ್ಯದರ್ಶಿ ಯಾದ ವೆಲ್ಲಪಲ್ಲಿ ನಟೇಶನ್ ತನ್ನ ಸ್ವಾರ್ಥ ಸಾಧನೆಗಾಗಿ ಬಿಜೆಪಿಯೊಂದಿಗೆ ಒಂದು ಒಪ್ಪಂದಕ್ಕೆ ಬಂದಂತೆ ಕಾಣುತ್ತಿದೆ. ಕಳೆದೊಂದು ತಿಂಗಳಲ್ಲಿ ಮುರಳಿ ಮನೋಹರ್ ಜೋಷಿ ಹಾಗೂ ಎಲ್.ಕೆ.ಅಡ್ವಾಣಿ ಇಬ್ಬರು ಎಸ್‌ಎನ್‌ಡಿಪಿಯ ವೇದಿಕೆಯನ್ನು ಅಲಂಕರಿಸಿದ್ದಾರೆ. 'ಕೇರಳ ಕುಮುದಿ' ದಿನ ಪತ್ರಿಕೆಯ ಸಂಸ್ಥಾಪಕ ಸಂಪಾದಕರ ಪ್ರತಿಮೆಯನ್ನು ತಿರುವನಂತಪುರದಲ್ಲಿ ಅನಾವರಣ ಗೊಳಿಸುತ್ತಾ ಎಸ್‌ಎನ್‌ಡಿಪಿಯ ಕೇಸರೀಕರಣವನ್ನು ಎಲ್.ಕೆ. ಅಡ್ವಾನಿಯವರು ಆಶಿಸಿದ್ದಾರೆ. ಅಂತಹ ಆಶಯವನ್ನು ವ್ಯಕ್ತಪಡಿಸು ವಾಗ ಆಂಟೋನಿ ಅವರು ಅಡ್ವಾನಿಯೊಂದಿಗೆ ವೇದಿಕೆಯನ್ನು ಹಂಚಿಕೊಂಡಿದ್ದರು. ಆದರೂ ಸಹ ಆಂಟೋನಿಯವರಿಗೆ ಅಥವಾ ಯು.ಡಿ.ಎಫ್.ಗೆ ಇದರಿಂದ ಯಾವುದೆ ಅಪಾಯವಿಲ್ಲವೆಂಬಂತೆ ಮೌನ ವಹಿಸಿದ್ದಾರೆ. ಬದಲಾಗಿ ಜಾತಿವಾದಿ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈ ರೀತಿಯಾದಲ್ಲಿ ಎಡವ ಜಾತಿ ಸಮುದಾಯವು ಸಿಪಿಐ(ಎಂ) ನಿಂದ ದೂರ ಸರಿದಂತಾಗುತ್ತದೆಂದು ಭಾವಿಸತೊಡಗಿದ್ದಾರೆ. ಆಂಟೋನಿಯವರ ಪ್ರಕಾರ ಯಾವುದೆ ಜಾತಿಯ ದುಡಿಯುವ ಜನರ ನಡುವೆ ಮಾರ್ಕ್ಸ್‌ವಾದಿಗಳ ಪ್ರಾಬಲ್ಯವಿರುವ ಬದಲು ಅಂತಹ ಸಾಮಾಜಿಕ ಗುಂಪು ಕೋಮುವಾದೀಕರಣ ಗೊಂಡರೆ ಹೆಚ್ಚು ಅಪಾಯವಿಲ್ಲವೆಂಬಂತೆ ತೋರುತ್ತದೆ.

ಮರದ್‌ನಲ್ಲಿನ ಕೊಲೆಗಳು, ವಿಹೆಚ್‌ಪಿ ತ್ರಿಶೂಲ ದೀಕ್ಷೆ ಹಾಗೂ ಎಸ್‌ಎನ್‌ಡಿಪಿ ವೇದಿಕೆಗಳಲ್ಲಿ ಬಿಜೆಪಿಯ ಭಾಗವಹಿಸುವಿಕೆ ಎಲ್ಲ ಅಂತರ್‌ಸಂಬಂಧಿತವಾದ ವಿಷಯಗಳಾಗಿವೆ. ಹಿಂದು ಹಾಗೂ ಮುಸ್ಲಿಂ ತೀವ್ರವಾದಿ ಸಂಘಟನೆಗಳು ಕೇರಳ ಸಮಾಜದ ವಿವಿಧ ವಿಭಾಗಗಳನ್ನು ಕೋಮುವಾದೀಕರಿಸುವ ಯತ್ನದ ಭಾಗವಾಗಿ ಈ ಘಟನೆಗಳು ನಡೆದಿದೆ. ಒಂದೆಡೆ ಸಂಘಪರಿವಾರ ಮತ್ತೊಂದೆಡೆ ಅಲ್ಪ ಸಂಖ್ಯಾತ ತೀವ್ರವಾದಿ ಗುಂಪುಗಳ ಗುರಿ ಇಂದು ಕೇರಳವಾಗಿದೆ. ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಇದಕ್ಕೆ ನೀರೆರೆಯುತ್ತಿದೆ. ಕೇರಳ ಸಮಾಜದ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಸಂರಚನೆಯನ್ನು ಇದು ಹಾಳುಗೆಡವಲಿರುವ ಕಾರಣ ಈ ಪ್ರಕ್ರಿಯೆ ಅತ್ಯಂತ ಅಪಾಯಕಾರಿಯಾಗಿದೆ. ಸೈದ್ಧಾಂತಿಕ ಹಾಗೂ ರಾಜಕೀಯ ನೆಲೆಯಲ್ಲಿ ಇದರ ವಿರುದ್ಧ ಹೋರಾಟ ನಡೆಸುವುದು ಅತಿ ಮುಖ್ಯ ಹಾಗೂ ಅತಿ ಅವಶ್ಯಕವಾಗಿದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಸಮಾಜದ ವಿವಿಧ ವಿಭಾಗಗಳನ್ನು ಒಳಹೊಕ್ಕುವ ಅವರ ಯತ್ನವನ್ನು ನಮ್ಮ ಮಧ್ಯೆ ಪ್ರವೇಶದಿಂದ ತಡೆಗಟ್ಟಬೇಕಿದೆ. ಇದಕ್ಕೆ ಪ್ರಜಾಸತ್ತಾತ್ಮಕ ಮತ್ತು ಧರ್ಮ ನಿರಪೇಕ್ಷ ಮೌಲ್ಯಗಳನ್ನು ಪ್ರೋತ್ಸಾಹಿಸುವ ಹಾಗೂ ಪರ್ಯಾಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಬರಲಿರುವ ದಿನಗಳಲ್ಲಿ ಪ್ರತಿಗಾಮಿ ಕೋಮುವಾದಿ ಶಕ್ತಿಗಳ ಸವಾಲುಗಳನ್ನು ಹಿಮ್ಮೆಟ್ಟಿಸಲು ಹಾಗೂ ಅದಕ್ಕೆ ನೀರೆರೆಯುತ್ತಿರುವ ಸಿನಿಕ ಆಂಟೋನಿ ಮತ್ತು ಯು.ಡಿ.ಎಫ್. ನಾಯಕತ್ವವನ್ನು ಸೋಲಿಸಲು ಸಿಪಿಐ(ಎಂ) ಮತ್ತು ಇತರೆ ಎಲ್ಲ ಎಡ ಶಕ್ತಿಗಳು ಅಗತ್ಯ ಸಂಪನ್ಮೂಲಗಳನ್ನು ಅಣಿನೆರೆಸಿ ಕ್ರೋಢಿಕರಿಸಬೇಕಿದೆ. ●

ಮೇ 21ರ ಮುಷ್ಕರ ಅಭೂ

ಕಾರ್ಮಿಕ ವಿರೋಧಿ, ಜನದ್ರೋಹಿ ನೀತಿಗಳ

ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ 1991ರಿಂದ ಜನತೆಯ ಮೇಲೆ ಆರಂಭಿಸಲಾದ ಆಕ್ರಮಣವನ್ನು ಕುರಿತು ಅಂದಿನಿಂದಲೇ ಎಚ್ಚರಿಸುತ್ತಾ ಬಂದಿರುವ ಭಾರತದ ಎಚ್ಚೆತ್ತ ಕಾರ್ಮಿಕ ವರ್ಗ ಈಗ ಮತ್ತೊಮ್ಮೆ ಜನತೆಯ ಗಮನಸೆಳೆದಿದೆ. ಸ್ವದೇಶಿ ಮಂತ್ರವನ್ನೇ ಜಪಿಸುತ್ತಾ ಅಧಿಕಾರದ ಗದ್ದುಗೆಯನ್ನೇರಿದ ವಾಜಪೇಯಿ ಸರ್ಕಾರದ ವಿದೇಶಿ ಒಲವು ನಿಲುವುಗಳ ವಿರುದ್ಧ ದೇಶದ ಸಂಘಟಿತ ಕಾರ್ಮಿಕ ವರ್ಗ ಮೇ 21ರಂದು ಸಾರಿದ ಸಮರಕ್ಕೆ ದೇಶಾದ್ಯಂತ ದುಡಿಯುವ ಜನತೆಯ ಅಪೂರ್ವ ಬೆಂಬಲ ವ್ಯಕ್ತವಾಗಿದೆ. ಎನ್.ಡಿ.ಎ. ಸರ್ಕಾರದ ದಿವಾಳಿಕೋರ ಖಾಸಗೀಕರಣ ಉದಾರೀಕರಣ ನೀತಿಗಳ ವಿರುದ್ಧ ವ್ಯಕ್ತವಾದ ಸಾರ್ವತ್ರಿಕ ಜನಾಭಿಮತದ ದಾಖಲೆ ಇದಾಗಿದೆ. ಮೇ 21ರ ಸಾರ್ವತ್ರಿಕ ಮುಷ್ಕರದಲ್ಲಿ ಎತ್ತಲಾದ ಬೇಡಿಕೆಗಳು ಕೇವಲ ಕಾರ್ಮಿಕ ವರ್ಗದ ಬೇಡಿಕೆಗಳಾಗಿರಲಿಲ್ಲ. ದೇಶದ ಸ್ವಾತಂತ್ರ್ಯ, ಸ್ವಾವಲಂಭನೆ, ಸಾರ್ವಭೌಮತೆಗೆ ಎನ್.ಡಿ.ಎ. ಎಂಬ ಸಮಯಸಾಧಕ ಮೈತ್ರಿಕೂಟ ಎಂತಹ ಆಪತ್ತನ್ನು ತಂದೊಡ್ಡಿದೆ ಎಂಬುದು ಈ ಬೇಡಿಕೆಗಳಲ್ಲಿ ವ್ಯಕ್ತವಾಗಿತ್ತು. ಸಾರ್ವಜನಿಕ ರಂಗದ ಆಸ್ತಿಯ ಲೂಟಿ ತಡೆಗಟ್ಟುವ ಕರ್ತವ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಈ ಮುಷ್ಕರ ಜನತೆಯ ಮುಂದೆ ಇಟ್ಟಿತು. ದೇಶದ ಆರ್ಥಿಕತೆಯ ಎರಡು ಕಣ್ಣುಗಳಂತಿರುವ ನಮ್ಮ ಕೃಷಿ ಮತ್ತು ಕೈಗಾರಿಕೆಯನ್ನು ರಕ್ಷಿಸಲು ಭಾರತ ಸರ್ಕಾರಕ್ಕೆ ನಿಜವಾದ ಕಾಳಜಿ ಇದ್ದರೆ ಅದು ಆಮದುಗಳ ಮೇಲೆ ಪ್ರಮಾಣಾತ್ಮಕ ನಿರ್ಭಂಧಗಳನ್ನು ಹೇರಲು ಮುಂದಾಗಬೇಕೆಂದು ಈ ಮುಷ್ಕರ ಒತ್ತಾಯಿಸಿತು. ವರ್ಷಕ್ಕೆ ಒಂದು ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ವಾಜಪೇಯಿ ಅವರ ಸುಳ್ಳು ಭರವಸೆಗಳನ್ನು ಈ ಮುಷ್ಕರ ಬಯಲಿಗೆಳೆದಿದೆ. ಕಾರ್ಮಿಕ ವರ್ಗ ಅಪಾರ ತ್ಯಾಗ ಬಲಿದಾನಗಳ ಮೂಲ ಪಡೆದಿದ್ದ ಕಾನೂನು ಸೌಲಭ್ಯಗಳನ್ನು ಕಿತ್ತುಕೊಳ್ಳಲು ಹೊರಟಿರುವ ಕೇಂದ್ರ ಸರ್ಕಾರವು ಹೇಗೆ ಲಾಭಕೋರ ಬಂಡವಾಳ ಶಾಹಿಗಳ ಕೈಗೊಂಬೆಯಾಗಿ ಎಂಬುದನ್ನು ಈ ಮುಷ್ಕರ ಸ್ಪಷ್ಟಪಡಿಸಿದೆ.

ಮುಷ್ಕರದಲ್ಲಿ ರಾಜಕೀಯ ಸೇರಿದೆ ಎಂದು ಬಿ.ಎಂ.ಎಸ್. ಐ.ಎನ್.ಟಿ.ಯು.ಸಿ. ಮುಖಂಡರು ಹೇಳಿಕೊಂಡು ಮುಷ್ಕರದಿಂದ ಹೊರಗುಳಿಯಲು ನಿರ್ಧರಿಸಿದರೂ ಅವರ ಸಹಸ್ರಾರು ಅನುಯಾಯಿಗಳು ಮುಷ್ಕರದಲ್ಲಿ ಪಾಲ್ಗೊಳ್ಳದಂತೆ ತಡೆಯಲು ಅವರಿಗೆ ಸಾಧ್ಯವಾಗಲಿಲ್ಲ. ತಮ್ಮ ಕಾನೂನು ಬದ್ಧ ಹಕ್ಕುಗಳನ್ನು ಕಿತ್ತುಕೊಂಡು ಮಾಲೀಕರಿಗೆ ಕಾರ್ಮಿಕರೊಂದಿಗೆ ತಮ್ಮ ಮನಸ್ಸಿಚ್ಛೆಯಂತೆ ನಡೆದುಕೊಳ್ಳಲು ಅವಕಾಶ ಮಾಡಿಕೊಡಲು ಹೊರಟಿರುವ ಸರ್ಕಾರದ ನೀತಿಗಳನ್ನು ವಿರೋಧಿಸುವುದು ರಾಜಕೀಯ ಎನ್ನುವುದಾದರೆ ಅಂತಹ ರಾಜಕೀಯಕ್ಕೆ ನಾವು ಬದ್ಧರಿದ್ದೇವೆ. ಎಂದು ದೇಶದ 7 ಕೋಟಿ ಕಾರ್ಮಿಕರು, ನೌಕರರು ಒಕ್ಕೊರಲಿನಿಂದ ಗರ್ಜಿಸಿದ್ದು ವಾಜಪೇಯಿ ಸರ್ಕಾರಕ್ಕೆ ಅಂತಿಮ ಎಚ್ಚರಿಕೆ! ಎನ್.ಡಿ.ಎ. ದುಷ್ಟಕೂಟ ಪಾಲುದಾರ ಪಕ್ಷಗಳಿಗೆ ಒಂದು ಅಗ್ನಿಪರೀಕ್ಷೆ! ಭಾರತದ ಸಮಸ್ತ ದುಡಿಯುವ ವರ್ಗ ನೀಡಿರುವ ಎಚ್ಚರಿಕೆಯಿಂದ ಸರ್ಕಾರ ಎಚ್ಚರಗೊಳ್ಳ ನಿರಾಕರಿಸಿದರೆ ಅದರ ಮರಣ ಗಂಟೆಯನ್ನು ಬಾರಿಸುವುದೇ ಜನತೆಯ ಮುಂದೆ ಉಳಿಯುವ ಮಾರ್ಗ.


2003 ಮೇ 21 ರ ರಾಷ್ಟ್ರ ವ್ಯಾಪಿ ಮುಷ್ಕರಕ್ಕೆ ಭಾರತದ ಸ್ವಾತಂತ್ರ್ಯಾ ನಂತರದ ಇತಿಹಾಸದಲ್ಲಿ ಅಭೂತಪೂರ್ವ ಬೆಂಬಲ ದೊರೆತಿದೆ. 1991ರ ನಂತರ ನಡೆದ 8ನೇ ಸಾರ್ವತ್ರಿಕ ಮುಷ್ಕರ ಇದಾಗಿದೆ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ನವ ದೆಹಲಿಯಲ್ಲಿ ನಡೆದ "ಕಾರ್ಮಿಕರ ರಾಷ್ಟ್ರೀಯ ಅಸೆಂಬ್ಲಿ" ದೇಶದ ಕಾರ್ಮಿಕರ, ರೈತರ, ಕೃಷಿ ಕಾರ್ಮಿಕರಿಗೆ, ಯುವಜನತೆ, ವಿದ್ಯಾರ್ಥಿಗಳು ಹಾಗೂ ಮಹಿಳೆಯರನ್ನು ಭಾದಿಸುತ್ತಿರುವ ಸರಕಾರದ ನೀತಿಗಳನ್ನು ಬದಲಾಯಿಸಬೇಕೆಂಬ ದೃಡವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಈ ನೀತಿಗಳು ವಿಶ್ವಬ್ಯಾಂಕ್, ಐಎಂಎಫ್ ವಿಶ್ವ ವಾಣಿಜ್ಯ ಸಂಘಟನೆಗಳ ನಿರ್ದೇಶನದ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ಜಾರಿಗೊಳಿಸುತ್ತಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಬಹುರಾಷ್ಟ್ರೀಯ ಬಂಡವಾಳಗಾರರ ಸಂಪತ್ತನ್ನು ಮತ್ತಷ್ಟು ಹೆಚ್ಚು ಮಾಡಲು ಮತ್ತು ಕಾರ್ಮಿಕರು, ರೈತರು ಮತ್ತಿತರ ಎಲ್ಲ ಜನ ವಿಭಾಗಗಳನ್ನು ಸಂಕಷ್ಟಕ್ಕೆ ಗುರಿಪಡಿಸಿ, ದಿವಾಳಿಗೊಳಿಸುವ ನೀತಿಗಳ ವಿರುದ್ಧ ಪ್ರಭಲ ಹೋರಾಟ ಕಟ್ಟಬೆಳೆಸಲು ಅದಕ್ಕೆ ಪೂರ್ವಭಾವಿಯಾಗಿ ಸಮರೋಪಾದಿಯಲ್ಲಿ ಪ್ರಚಾರಾಂದೋಲನ ನಡೆಸಲು ನಿರ್ಣಯಿಸಿತು. ಅಲ್ಲದೆ ಕೇಂದ್ರ ರಾಜ್ಯ ಸರಕಾರಗಳ ಆಕ್ರಮಣಕಾರಿ ನೀತಿಗಳನ್ನು ವಾಪಸ್ಸು ಪಡೆಯಲು ಹಂತಹಂತವಾಗಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಸರಕಾರಗಳಿಗೆ ಎಚ್ಚರಿಕೆ ನೀಡಲು ನೇರ ಕಾರ್ಯಾಚರಣೆ ಮೂಲಕ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ಮೇ 21 ರಂದು ನಡೆಸಲು ಕರೆ ನೀಡಲಾಗಿತ್ತು.

'ಕಾರ್ಮಿಕರ ರಾಷ್ಟ್ರೀಯ ಅಸೆಂಬ್ಲಿ' ಸಮಾವೇಶಗೊಂಡಾಗ ಸಿಐಟಿಯು, ಎ.ಐ.ಟಿ.ಯು.ಸಿ., ಹೆಚ್‌ಎಂಎಸ್, ಟಿಯುಸಿಸಿ, ಯುಟಿಯುಸಿ (ಎಲ್.ಎಸ್.) ಕೇಂದ್ರ ಸರಕಾರಿ ನೌಕರರು, ರಾಜ್ಯ ಸರಕಾರಿ ನೌಕರರು, ವಿಮಾ, ಬ್ಯಾಂಕ್ ಮತ್ತಿತರ ಸಾರ್ವಜನಿಕ ಕ್ಷೇತ್ರದ ಸಂಘಟನೆಗಳು ಅಷ್ಟೇ ಅಲ್ಲದೆ ಬಿ.ಎಂ.ಎಸ್. ಹಾಗೂ ಐ.ಎನ್.ಟಿ.ಯು.ಸಿ. ಕೂಡ ಭಾಗವಹಿಸಿದ್ದವು. ಬೇಡಿಕೆಗಳನ್ನು ರೂಪಿಸುವ ಪ್ರಕ್ರಿಯೆಯಲ್ಲೂ ತೊಡಗಿಸಿಕೊಂಡಿದ್ದೂ ಮೊದಲ ಎರಡು ಹಂತದ ಕಾರ್ಯಕ್ರಮಗಳಲ್ಲಿ ಜಂಟಿ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಆದರೆ ನಂತರದಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ, ಆರ್.ಎಸ್.ಎಸ್.ಗಳ ಒತ್ತಡದಲ್ಲಿ ವಿಶಾಲ ಐಕ್ಯ ಚಳುವಳಿಯಿಂದ ಹಿಂಜರಿದು ಈ ಬೇಡಿಕೆಗಳ ಬಗ್ಗೆ, ಮೇ 21ರ ಮುಷ್ಕರದ ಬಗ್ಗೆ ವಿರೋಧವಿಲ್ಲ ಎಂದು ಬಿಎಂಎಸ್ ನಾಯಕತ್ವ ಹೇಳುತ್ತಿರುವುದು "ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ" ಎಂಬಂತಿದೆ.

ಬಂದ್ ಆಗಿ ಪರಿವರ್ತನೆ

ಮೇ 21 ರಂದು ನಡೆದ ಸಾರ್ವತ್ರಿಕ ಮುಷ್ಕರವು ಎಂಟು ರಾಜ್ಯಗಳಲ್ಲಿ ಸಂಪೂರ್ಣ ಬಂದ್ ಸ್ವರೂಪವಾಗಿ ನಡೆದು ಜನ ಬೆಂಬಲ ಪಡೆದಿದೆ. ಪಶ್ಚಿಮ ಬಂಗಾಳ, ಕೇರಳ, ಆಂಧ್ರಪ್ರದೇಶ, ಬಿಹಾರ್, ಜಾರ್ಖಂಡ್, ಗೋವ, ತಮಿಳುನಾಡು, ಪಾಂಡಿಚೇರಿಗಳಲ್ಲಿ ಸಂಪೂರ್ಣ ಬಂದ್ ಮೂಲಕ ಸರಕಾರಕ್ಕೆ ಎಚ್ಚರಿಕೆ ಗಂಟೆ ಬಾರಿಸಲಾಗಿದೆ. ಲಭ್ಯ ಮಾಹಿತಿಗಳ ಪ್ರಕಾರ 16 ಸ್ಥಳಗಳಲ್ಲಿ 3000ಕ್ಕೂ ಹೆಚ್ಚಿನ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ. ಒರಿಸ್ಸಾದ ನಾಲ್ಕೊದಲ್ಲಿ ಎಲ್ಲಾ ಕಾರ್ಮಿಕ ಸಂಘಗಳು ಮುಷ್ಕರದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ವಿಮಾರಂಗದಲ್ಲಿ 2000 ಶಾಖೆಗಳು ಬಂದ್ ಆಗಿದ್ದೂ 2 ಲಕ್ಷ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ರಿಜರ್ವ್‌ಬ್ಯಾಂಕ್‌ನ ಕೊಲ್ಕತ್ತಾ ಚೆನ್ನೈ, ಲಕ್ನೋ, ನವದೆಹಲಿ, ಕಾನ್ಪುರ, ಹೈದರಾಬಾದ್, ಜೈಪುರ, ಬೆಂಗಳೂರು, ಭುವನೇಶ್ವರ, ಗೌಹತಿ, ಪಟ್ನಾ, ತಿರುವಂತಪುರ, ಕೊಚ್ಚಿನ್, ನಾಗಪುರ, ಚಂಡೀಘಡ್, ಜಮ್ಮು ಮತ್ತು ಭೂಪಾಲ ನಗರಗಳಲ್ಲಿ ಎಲ್ಲಾ ಬ್ಯಾಂಕ್ ಶಾಖೆಗಳ ನೌಕರರು ಮುಷ್ಕರದಲ್ಲಿ ಸಂಪೂರ್ಣ ಭಾಗವಹಿಸಿದ್ದಾರೆ.



ಬಿಎಸ್‌ಎನ್‌ಎಲ್ ನೌಕರರು ಕೇರಳ, ಪಶ್ಚಿಮ ಬಂಗಾಳ, ಅಸ್ಸಾಂ, ಈಶಾನ್ಯ ರಾಜ್ಯಗಳು, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಸಂಪೂರ್ಣ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಇತರ ರಾಜ್ಯಗಳಲ್ಲಿ ಗಣನೀಯ ಪ್ರಮಾಣದಲ್ಲಿ ಭಾಗವಹಿಸಿದ್ದಾರೆ.

ದೇಶದಲ್ಲಿ ರಾಜ್ಯ ಸರಕಾರಗಳ 50 ಲಕ್ಷ ನೌಕರರು ವ್ಯಾಪಕವಾಗಿ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಮುಷ್ಕರಕ್ಕೆ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ ನಾಯಕತ್ವ ವಹಿಸಿತ್ತು. ಹರ್ಯಾಣದಲ್ಲಿ 500 ನೌಕರರ ಬಂಧನಕ್ಕೆ ಒಳಗಾಗಿಯೂ ಹೋರಾಟ ನಡೆಸಿದ್ದಾರೆ.

ಈ ಮುಷ್ಕರದ ಪ್ರಕ್ರಿಯೆಯಲ್ಲಿ ತೈಲ ಕ್ಷೇತ್ರದಲ್ಲಿರುವ ವಿವಿಧ ಅಫಿಲಿಯೇಷನ್ ಹೊಂದಿರುವ ಎಲ್ಲಾ ಸಂಘಗಳು ಒಂದು ವೇದಿಕೆಯಲ್ಲಿ ಅಣಿ ನೆರೆದು ಮುಷ್ಕರದಲ್ಲಿ ಭಾಗವಹಿಸಿರುವುದು ಬಿಪಿಸಿಎಲ್, ಹೆಚ್.ಪಿ.ಸಿ.ಎಲ್. ಖಾಸಗೀಕರಣವನ್ನು ಉಗ್ರವಾಗಿ ಪ್ರತಿಭಟನೆ ಮಾಡಿರುವುದು ಗಮನಾರ್ಹವಾಗಿದೆ.

ಬ್ಯಾಂಕ್ ಕ್ಷೇತ್ರದ 15 ಲಕ್ಷ ನೌಕರರು ಮುಷ್ಕರ ನಡೆಸಿ ಐಕ್ಯತೆಯನ್ನು ಮೆರೆದಿದ್ದಾರೆ. ಅಧಿಕಾರಿಗಳ ಸಂಘಗಳು ಬ್ಯಾಂಕಿಂಗ್ ರಂಗದಲ್ಲಿ ಒಂದೇ ವೇದಿಕೆಗೆ ಬಂದು ಐಕ್ಯ ಸಮಿತಿಯನ್ನು ಮಾಡಿಕೊಂಡು ಮುಷ್ಕರದಲ್ಲಿ ಒಮ್ಮತದಿಂದ ಭಾಗವಹಿಸಿದ್ದಾರೆ.

ದೇಶಪ್ರೇಮಿ ಹೋರಾಟ

ವಿವೇಚನಾರಹಿತ ಖಾಸಗೀಕರಣ, ಕೇವಲ ನೌಕರರ ಉದ್ಯೋಗದ ಪ್ರಶ್ನೆಯಲ್ಲ ಬದಲಾಗಿ ಇಡೀ ದೇಶದ ಆರ್ಥಿಕ ಸ್ವಾವಲಂಬನೆ ಹಾಗೂ ದೇಶದ ಜನತೆಯ ತೆರಿಗೆ ಹಣದಿಂದ 5 ದಶಕದಿಂದ ಹೂಡಿದ ಸಂಪತ್ತಿನ ಉಳಿವಿನ ಪ್ರಶ್ನೆ ಹಾಗೂ ಜನ ಸಾಮಾನ್ಯರ ಮೇಲೆ ಎಲ್ಲಾ ಸೇವೆಗಳನ್ನೂ ಹೊರೆಯಾಗದಂತೆ ತಡೆಯುವ ಪ್ರಶ್ನೆ ದೇಶವನ್ನು ನವವಸಾಹತಾಗಿಸುವುದನ್ನು ತಡೆಯುವ ದೇಶಪ್ರೇಮಿ ಹೋರಾಟದ ಪ್ರಶ್ನೆಯಾಗಿದೆ.



ಪರದೇಶಗಳಿಂದ ಆಮದು ಆಗು ಸರಕುಗಳನ್ನು ದೇಶದೊಳಗೆ ಪ್ರವೇಶ ಮಾಡು ಬಗ್ಗೆ ಇರುವ ಎಲ್ಲಾ ನಿರ್ಭಂಧಗಳನ್ನು ತೆಗೆಯ ಸರಕಾರ ತೀರ್ಮಾನಿಸಿದೆ. ಲಾಭ ಯಾರಿ ಬಹುರಾಷ್ಟ್ರೀಯ ಬಂಡವಾಳಗಾರರ ಲಾ ಗಂಟು ಹೆಚ್ಚಿಸಲಿಕ್ಕಾಗಿ ಅಲ್ಲದೇ ಬೇರೆನೂ ಇದರಿಂದ ದೇಶದ ರೈತರ ಬೆಳೆಗೆ ಬೆಲೆ ಆತ್ಮಹತ್ಯೆಗೆ ಶರಣಾಗುತ್ತಿರುವುದು ದಿನನಿ ಸಂಗತಿ ಹಾಗೂ ದೇಶೀಯ ಕೈಗಾರಿಕೆಗಳು ಬಿ ಸಿಲುಕಿವೆ. ಲಕ್ಷಾಂತರ ಕಾರ್ಮಿಕರು ಬಿ ತಳ್ಳಲ್ಪಟ್ಟು ಬಿಕಾರಿಗಳಾಗಿದ್ದರೆ. ಈಗಾ ಉದ್ಯೋಗ ದೊರೆಯದೇ ದೊಡ್ಡ ನಿರುದ್ ಸೈನ್ಯ ಮತ್ತಷ್ಟು ತೀವ್ರಗತಿಯಲ್ಲಿ ಬೆಳೆಯುತ್ತಿ

ಈ ಹಂತದಲ್ಲಿ ಕಾರ್ಮಿಕರು ಹಕ್ಕುಗಳ ಹೋರಾಟ ಮಾಡುವುದನ್ನೇ ಮೊಟಕುಗೊಳಿ ಕಾರ್ಮಿಕ ಕಾನೂನುಗಳಿಗೆ ಮಾಲೀಕರ ತಿದ್ದುಪಡಿಗಳನ್ನು ಆಕ್ರಮಣಕಾರಿ ದಾಟಿ ತರಲಾಗುತ್ತಿದೆ. ಭವಿಷ್ಯನಿಧಿ ಬಡ್ಡಿ ದರ ಶೇ ರಿಂದ ಈಗಲೇ ಶೇ. 9.5ಕ್ಕೆ ಇಳಿಸಲಾಗಿದೆ. ಶೇ. 8 ಕ್ಕೆ ಇಳಿಸುವ ದಾಳಿ ಸಜ್ಜಾಗಿದೆ. ಶೇ ರ ಬಡ್ಡಿದರ ಪುನಃ ಸ್ಥಾಪಿಸಬೇಕೆಂದು ಕಾಮಿ ಘಂಟಾಘೋಷವಾಗಿ ಕೇಳುತ್ತಿದ್ದಾರೆ.

ಇಂತಹ ಪ್ರಮುಖ ಬೇಡಿಕೆಗ ರೂಪಿಸುವಾಗ ಪ್ರಕ್ರಿಯೆಯ ಭಾಗವ ಬಿ.ಎಂ.ಎಸ್., ಐಎನ್.ಟಿ.ಯು.ಸಿ. ಕಾರ್ಮಿಕರು ಕೇಂದ್ರ ನಾಯಕತ್ವದ ಕಾಮಿ ಕೈಕೊಡುವ ಧೋರಣೆಯನ್ನು ತಿರ

...ರ್ಣ ಯಶಸ್ಸು

...ತ್ರಿಗೆ ಸರಕಾರಗಳಿಗೆ ಎಚ್ಚರಿಕೆ



...ರುಕಡೆ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ...ವೇದಿಕೆಗಳ ಜೊತೆಯಲ್ಲಿ ತಮ್ಮದೇ ...ಸ್ಯೆಗಳನ್ನು ಮುಂದಿಟ್ಟುಕೊಂಡು ರೈತ ...ಗಳು, ವಿದ್ಯಾರ್ಥಿ ಯುವಜನ ಸಂಘಗಳು, ...ಾ ಸಂಘಟನೆಗಳು, ಕಾರ್ಮಿಕರೊಂದಿಗೆ ...ೈ ಭುಜಕೊಟ್ಟು ರಸ್ತೆ ತಡೆ, ರೈಲು ತಡೆ, ...ರ್ಶನಗಳನ್ನು ನಡಸಲಾಗಿದೆ.

...ರ್ನಾಟಕದಲ್ಲೂ ಅತ್ಯಂತ ಐಕ್ಯತೆಯಿಂದ ಸಾರ್ವತ್ರಿಕ ಮುಷ್ಕರದಲ್ಲಿ ಕಾರ್ಮಿಕರು, ರೈತರು, ಇತರ ಜನ ವಿಭಾಗಗಳು ಭಾಗವಹಿಸಿ ಯಶಸ್ವಿಗೊಳಿದ್ದಾರೆ. ಬಿಇಎಲ್, ಬಿಹೆಚ್ಇಎಲ್., ಬಿಎಸ್ಎನ್ಎಲ್, ಐಟಿಸಿ, ಸೇರಿದಂತೆ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಮುಷ್ಕರದಲ್ಲಿ ದುಮುಕಿದ್ದಾರೆ. ಬೆಂಗಳೂರು ನಗರದಲ್ಲಿ 70 ಸಾವಿರಕ್ಕೂ ಅಧಿಕ ಆಟೋ ರಿಕ್ಷಾಗಳು ಬೀದಿಗೆ ಇಳಿಯಲೇ ಇಲ್ಲವೆಂಬುದು ಬೆಂಗಳೂರಷ್ಟೆ ಅಲ್ಲ ದೇಶದ ಗಮನವನ್ನೆ ಸೆಳೆದಿದೆ. ಆಟೋ ಚಾಲಕರ ಐತಿಹಾಸಿಕ ಐಕ್ಯತೆ ಮತ್ತು ಹೋರಾಟದ ದೃಢತೆ ಪ್ರಶಂಸಾರ್ಹವಾಗಿದೆ. ಆಟೋ ಚಾಲಕರನ್ನು ಚಳುವಳಿಯಲ್ಲಿ ತೊಡಗಿಸುವಲ್ಲಿ ಸಮರ್ಥ ರೀತಿಯಲ್ಲಿ ಸಂಘಟಿಸಿದ ಕೀರ್ತಿ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ (ಎ.ಆರ್.ಡಿ.ಯು)ಗೆ ಸೇರುತ್ತದೆ.

- ಪ್ರಸನ್ನ ಕುಮಾರ್ ಎಸ್

...ರ್ನಾಟಕದಲ್ಲಿ ಮುಷ್ಕರ ಸಂಪೂರ್ಣ, ಅನೇಕ ಕಡೆ ಬಂದ್

...ಬೆಂಗಳೂರು ನಗರದ ಕೇಂದ್ರ ಪ್ರದೇಶವಾದ ...ೂರು ಬ್ಯಾಂಕ್ ಸರ್ಕಲ್‌ನಿಂದ ಬಸವೇಶ್ವರ ...ಲ್‌ವರೆಗೆ ಸುಮಾರು 3000 ಕಾರ್ಮಿಕರು ...ಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ...ವೇಶ್ವರ ಸರ್ಕಲ್‌ನಲ್ಲಿ ಬಹಿರಂಗ ಸಭೆ ...ಸಲಾಯಿತು. ಸಭೆಯನ್ನು ಉದ್ದೇಶಿಸಿ ...ಟಿಯುವಿನ ವಿ.ಜೆ.ಕೆ.ನಾಯರ್, ...ಟಿಯುಸಿನ ನರಸಿಂಹನ್, ಬ್ಯಾಂಕ್ ...ನಿಯನ್‌ನ ವಸಂತ ರೈ, ಯುಟಿಯುಸಿಯ ...ಶ್, ಟಿಯುಸಿಸಿಯ ಶಿವಶಂಕರ್, ...್ಎಂಎಸ್‌ನ ಶ್ರೀನಿವಾಸಮೂರ್ತಿ, ...ಸ್ಎನ್ಎಲ್‌ನ ಗುಂಡಣ್ಣ, ...ಎಂಕೆಪಿಯ ಮೈಕೆಲ್ ಫೆರ್ನಾಂಡೀಸ್ ಮತ್ತು ...್ಯುರೆನ್ಸ್, ಕೇಂದ್ರ ಸರ್ಕಾರಿ/ ರಾಜ್ಯ ಸರ್ಕಾರಿ ...ಖಂಡರು ಮಾತನಾಡಿ ನಂತರ ...್ಯಪಾಲರಿಗೆ ಮನವಿಯನ್ನು ಸಲ್ಲಿಸಿದರು.

...ಬೆಂಗಳೂರಿನ ಸಾರ್ವಜನಿಕ ಕೈಗಾರಿಕೆಗಳಾದ ...ಐ, ಹೆಚ್ಎಎಲ್, ಬಿಇಎಂಎಲ್, ಮತ್ತು ...ಎಲ್ ಕಾರ್ಮಿಕರು ಸಂಪೂರ್ಣವಾಗಿ ...್‌ನಲ್ಲಿ ಪಾಲ್ಗೊಂಡಿದ್ದರು. ಬಿಇಎಂ ಎಲ್ ...ೂರು, ಕೆಜಿಎಫ್ ಸಂಪೂರ್ಣವಾಗಿ ಬಂದ್ ...ತ್ತು. ಬಿಹೆಚ್ಇಎಲ್‌ನಲ್ಲಿ ಕಾರ್ಮಿಕರು ...ಯನ್ನು ನಡೆಸಿದರು. ಬೆಂಗಳೂರಿನ ಎಲ್ಲಾ ...ಕೆಗಳ ಕಾರ್ಮಿಕರು ಬಂದ್‌ನಲ್ಲಿ ಸಂಪೂರ್ಣ ... ಭಾಗವಹಿಸಿದ್ದರು. ಪೀಣ್ಯ ಕೈಗಾರಿಕಾ ...ೇಶ ಸಂಪೂರ್ಣವಾಗಿ ಬಂದ್ ಆಗಿತ್ತು.

...ಹೊಸೂರು ರಸ್ತೆಯ ಅತ್ತಿಬೆಲೆ ಕೈಗಾರಿಕಾ ...ೇಶದಲ್ಲಿ ಸಂಪೂರ್ಣವಾಗಿ ಬಂದ್ ...ಸ್ವಿಯಿತು.

...ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ...್ ಜೊತೆಗೆ ರಸ್ತೆರೋಕೋ ಆಗಿ ಸುಮಾರು ...ಕು ಸಾವಿರ ಕಾರ್ಮಿಕರು ಮೆರವಣಿಗೆಯಲ್ಲಿ ...ಲ್ಗೊಂಡಿದ್ದಾರೆ. ಬಹಿರಂಗ ಸಭೆ ನಡೆಸಿದರು.



ಕೋರಮಂಗಲ ಕೈಗಾರಿಕಾ ಪ್ರದೇಶದಲ್ಲಿ ಬಂದ್ ಆಗಿ ಕಾರ್ಮಿಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕಾಮಾಕ್ಷಿ ಪಾಳ್ಯ ಕೈಗಾರಿಕಾ ಪ್ರದೇಶದಲ್ಲಿ ಯಶಸ್ವಿಯಾಗಿ ಬಂದ್ ಆಯಿತು.

ಕೂಡ್ಲುಗೇಟ್‌ನಲ್ಲಿ ಸುಮಾರು 1500 ಕಾರ್ಮಿಕರು ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಿದರು ಹಾಗೂ ಈ ಕೈಗಾರಿಕಾ ಪ್ರದೇಶ ಸಂಪೂರ್ಣ ಬಂದ್ ಆಗಿತ್ತು.

ಮೈಸೂರು ರಸ್ತೆಯ ಬಿಹೆಚ್ಇಎಲ್ ಕಛೇರಿಯ ಮುಂದೆ ಕಾರ್ಮಿಕರು ಧರಣಿ ನಡೆಸಿದರು. ಸಿಐಟಿಯುವಿನ ಸುಮಾರು 500 ಕಾರ್ಯಕರ್ತರು ಆರ್.ಶ್ರೀನಿವಾಸ್ ಮತ್ತು ಕೆ.ಎಸ್.ಸುಬ್ರಮಣ್ಯ ನೇತೃತ್ವದಲ್ಲಿ ಪ್ರತಿಭಟನೆಯನ್ನು ರಾಜೇಶ್ವರಿ ಗೇಟ್ ಮುಂದೆ ನಡೆಸಿದರು.

ಮೈಸೂರು ರಸ್ತೆಯ ಕುಂಬಳ ಗೋಡು ಪ್ರದೇಶದಲ್ಲಿ ಸಿಐಟಿಯುವಿನ ಎಸ್. ವರಲಕ್ಷ್ಮಿ ಮತ್ತು ವೆಂಕಟಾಚಲಯ್ಯನವರ ನೇತೃತ್ವದಲ್ಲಿ ಸಿಐಟಿಯು ಮತ್ತು ಪ್ರಾಂತ ರೈತ ಸಂಘದ ಕಾರ್ಯಕರ್ತರು ಸುಮಾರು 300 ಜನರು ಒಂದು ಗಂಟೆಗಳ ಕಾಲ ರಸ್ತೆ ತಡೆ ನಡೆಸಿದರು.

ಕೆ.ಆರ್.ಪುರ ರಸ್ತೆಯಲ್ಲಿ ಹೆಚ್.ಎನ್. ಗೋಪಾಲಗೊಡರವರ ನೇತೃತ್ವದಲ್ಲಿ ರಸ್ತೆತಡೆ ನಡೆಸಿ ಪ್ರತಿಭಟನಾ ಮೆರವಣಿಗೆಯಲ್ಲಿ 2000 ಕಾರ್ಮಿಕರು ಪಾಲ್ಗೊಂಡು ಮುಷ್ಕರ ಯಶಸ್ವಿಗೊಳಿಸಿದ್ದಾರೆ. ಹೂಡಿ ಕೈಗಾರಿಕಾ ಪ್ರದೇಶ, ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶಗಳು ಮತ್ತು ಕೆ.ಆರ್.ಪುರ ಕೈಗಾರಿಕಾ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಬಂದ್ ಯಶಸ್ವಿ ಯಾಗಿದೆ. ರಸ್ತೆತಡೆ ಕಾರ್ಯಕ್ರಮವನ್ನು ನಡೆಸಿದರು.

ತುಮಕೂರು ರಸ್ತೆಯ ಜಾಲಹಳ್ಳಿ ಕ್ರಾಸ್‌ನ ಸಮೀಪ 250 ಕಾರ್ಮಿಕರು ರಸ್ತೆ ತಡೆ ನಡೆಸಿ ಬಂಧನಕ್ಕೆ ಒಳಗಾಗಿದ್ದಾರೆ. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮತ್ತು ಕಾರ್ಯದರ್ಶಿ ಗಂಗಣ್ಣ, ಲೀಲಾವತಿ ಮತ್ತು ಇನ್ನಿತರ ಮುಖಂಡರು ಬಂಧನಕ್ಕೆ ಒಳಗಾದರು.

ಯಲಹಂಕದಲ್ಲಿ ಬೆಳಿಗ್ಗೆ ಸಾವಿರಾರು ಜನ ರೈತರು ಮತ್ತು ಕಾರ್ಯಕರ್ತರು ರಸ್ತೆತಡೆ ಹಾಗೂ ಮೆರವಣಿಗೆಯನ್ನು ನಡೆಸಿದರು.

ಹೊಸಕೋಟೆಯಲ್ಲಿ ಸಂಪೂರ್ಣ ಬಂದ್ ಯಶಸ್ವಿಯಾಗಿದೆ ಹಾಗೂ ರಸ್ತೆ ತಡೆಯನ್ನು ನಡೆಸಲಾಗಿದೆ. ರೈತ ನಾಯಕರಾದ ಸೂರಂ ರಾಮಯ್ಯ, ಹರೀಂದ್ರ, ಎಸ್.ವೈ.ಗುರುಶಾಂತ್, ಶ್ರೀನಿವಾಸ್ ನೇತೃತ್ವವಹಿಸಿದ್ದರು. ದೇವನಹಳ್ಳಿ ಯಲ್ಲಿ ನಾಲ್ಕು ಗಂಟೆಗೆ ರಾಸ್ತಾ ರೋಖೋದಲ್ಲಿ ಮನೋಹರ್ ನೇತೃತ್ವದಲ್ಲಿ 1500 ರೈತರು ಭಾಗವಹಿಸಿದ್ದರು. ಕೈಗಾರಿಕೆಗಳು ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡಿವೆ.

ಇತರ ಜಿಲ್ಲೆಗಳು

ಕೊಪ್ಪಳ ಜಿಲ್ಲೆ ; ಜಿಲ್ಲೆಯ ಗಂಗಾವತಿ, ಆನಂದಸಾಗರ, ತಾವರೆಗೆರೆಗಳಲ್ಲಿ ಸಂಪೂರ್ಣ ಬಂದ್ ಯಶಸ್ವಿಯಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು, ಲಾರಿಗಳು ಸಂಪೂರ್ಣವಾಗಿ ಮುಷ್ಕರದಲ್ಲಿ ಭಾಗವಹಿಸಿವೆ. ಕನಕಗಿರಿ, ಸಿಂಧನೂರು ಮತ್ತು ಕುಷ್ಟಗಿಯಲ್ಲಿ ಸಂಪೂರ್ಣ ಬಂದ್ ಯಶಸ್ವಿಯಾಗಿದೆ.

ಮೈಸೂರು : ಮೈಸೂರಿನಲ್ಲಿ ಸಿಐಟಿಯು, ಎಐಟಿಯುಸಿ, ಎಲ್.ಐ.ಸಿ, ಬ್ಯಾಂಕ್ ನೌಕರರು ಸಂಪೂರ್ಣವಾಗಿ ಬಂದ್‌ನಲ್ಲಿ ಪಾಲ್ಗೊಂಡಿದ್ದಾರೆ. ಜನತಾದಳದ ಮಾಜಿ ಮೇಯರ್ ನಾರಾಯಣ, ನಗರ ಜನತಾದಳದ ಅಧ್ಯಕ್ಷ ಅನಂತು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಸುಮಾರು 1,500 ಜನರು ಮೆರವಣಿಗೆಯಲ್ಲಿ ಪಾಲ್ಗೊಂಡು ಅರಮನೆ ಆವರಣದಲ್ಲಿ ಬಹಿರಂಗ ಸಭೆಯನ್ನು ನಡೆಸಿದರು. ಸಿಐಟಿಯುನ ಪ್ರಭಾಕರ್, ಜಗದೀಶ್, ಜಯರಾಂ, ಇನ್ಶೂರೆನ್ಸ್‌ನ ಜಗನ್ನಾಥ್ ಮುಂತಾದ ಮುಖಂಡರು ಮಾತನಾಡಿದರು.



ಹೊಸಕೋಟೆಯಲ್ಲಿ

ಉತ್ತರಕನ್ನಡ ಜಿಲ್ಲೆ : ಹೊನ್ನಾವರದಲ್ಲಿ ಸಾವಿರಾರು ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಬ್ಯಾಂಕ್, ಎಲ್.ಐ.ಟಿ. ಸಂಪೂರ್ಣವಾಗಿ ಮುಷ್ಕರದಲ್ಲಿ ಭಾಗವಹಿಸಿವೆ. ಸಿಐಟಿಯು ಮುಖಂಡರಾದ ತಿಲಕ ಜಟ್ಟಿಗೌಡರು ನೇತೃತ್ವ ವಹಿಸಿದ್ದರು. ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. **ಉಡುಪಿ :** ವಿಶ್ವನಾಥರೈ ನೇತೃತ್ವದಲ್ಲಿ ಸುಮಾರು 200 ಜನರು ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಸಿಐಟಿಯು, ಎಲ್ಐಸಿ, ಬ್ಯಾಂಕ್ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು. **ಕುಂದಾಪುರದಲ್ಲಿ** ಎಲ್ಲಾ ಕೈಗಾರಿಕೆಗಳ ಕಾರ್ಮಿಕರು ಸಂಪೂರ್ಣವಾಗಿ ಬಂದ್‌ನಲ್ಲಿ ಭಾಗವಹಿಸಿದ್ದರು.

ಗುಲ್ಬರ್ಗಾ : ಗುಲ್ಬರ್ಗಾದಲ್ಲಿ ಮುಷ್ಕರ ಬೆಂಬಲಿಸಿ ಸಂಪೂರ್ಣ ಬಂದ್ ಆಗಿದೆ. ಮಾರುತಿ ಮಾನ್ಪಡೆ ನೇತೃತ್ವದಲ್ಲಿ ಧರಣಿ ನಡೆಸಲಾಯಿತು. ಸಿಐಟಿಯು, ಬ್ಯಾಂಕ್, ಇನ್ಶೂರೆನ್ಸ್, ಆಟೋ ಕಾರ್ಮಿಕರು ರೈತರು, ಮಹಿಳೆಯರು, ಧರಣಿಯಲ್ಲಿ ಹಾಗೂ ಮುಷ್ಕರದಲ್ಲಿ ಭಾಗವಹಿಸಿದ್ದರು. ಕೈಗಾರಿಕೆಗಳು ಸಂಪೂರ್ಣವಾಗಿ ಬಂದ್ ಆಗಿವೆ.

ಬೀದರ್ : ಜಿಲ್ಲಾ ಕೇಂದ್ರವು ಸಂಪೂರ್ಣ ಬಂದ್ ಆಗಿ ಪರಿವರ್ತನೆಯಾಗಿತ್ತು. ಕಛೇರಿ, ಬ್ಯಾಂಕ್, ಕೈಗಾರಿಕೆಗಳು ಮುಷ್ಕರದಲ್ಲಿ ಪೂರ್ಣಭಾಗಿಯಾಗಿದ್ದು ಸಂಗ್ರಾಮ್, ಬಸವರಾಜ್ ಮನೋಹರ್, ವಿಜಯಕುಮಾರ್ ಸೋನಾರೆ ನೇತೃತ್ವವಹಿಸಿದ್ದರು.

ರಾಯಚೂರು : ಬ್ಯಾಂಕ್, ಎಲ್ಐಸಿ, ಸಿಐಟಿಯು ಕಾರ್ಯಕರ್ತರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಬಂದ್ ಆಚರಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ : ಎರಡು ಕಡ ಪ್ರತಿಭಟನೆ ನಡೆಸಲಾಯಿತು. ಬ್ಯಾಂಕ್ ಮತ್ತು ಎಲ್.ಐ.ಸಿ., ಸಿಐಟಿಯು, ಹೆಚ್ಎಂಎಸ್, ಎಐಟಿಯುಸಿ ಕಾರ್ಯಕರ್ತರು ಮುಷ್ಕರದಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಧಾನ ಕಛೇರಿಯ ಮುಂದೆ ಸುಮಾರು 2,000 ಜನರು ಪ್ರತಿಭಟನೆ ನಡೆಸಿದರು. ಅಂಚೆ ಪ್ರಧಾನ ಕಚೇರಿಯ ಮುಂದೆ ಸುಮಾರು 1000 ಜನರು ಪ್ರತಿಭಟನೆಯನ್ನು ನಡೆಸಿದರು. ಪ್ರತಿಭಟನೆಯಲ್ಲಿ ಸಿಐಟಿಯುವಿನ ರಾಜ್ಯ ಅಧ್ಯಕ್ಷರಾದ ಬಿ. ಮಾಧವ, ಹೆಚ್ಎಂಎಸ್‌ನ ಸುರೇಶ್ ಚಂದ್ರ ಶೆಟ್ಟಿ ಮತ್ತು ಸಂಜೀವ ಶೆಟ್ಟಿಯವರು, ಎಐಟಿಯುಸಿಯ ಚಂದಪ್ಪ ಅಂಚನ್ ರವರು ಇದರ ನೇತೃತ್ವ ವಹಿಸಿದ್ದರು. ಬ್ಯಾಂಕ್, ಇನ್ಶೂರೆನ್ಸ್ ಮತ್ತು ಕೈಗಾರಿಕೆಗಳು ಸಂಪೂರ್ಣ ಮುಷ್ಕರದಲ್ಲಿ ಪಾಲ್ಗೊಂಡಿದ್ದವು.

ಬಳ್ಳಾರಿ : ಬಳ್ಳಾರಿ ಮತ್ತು ಹೊಸಪೇಟೆಗಳಲ್ಲಿ ಸಂಪೂರ್ಣವಾಗಿ ಬಂದ್ ಯಶಸ್ವಿಯಾಗಿದೆ. ಕೆಲವು ಕಡೆಗಳಲ್ಲಿ ಕಾರ್ಮಿಕರು ಮೆರವಣಿಗೆ ನಡೆಸಲು ಪೋಲೀಸರು ಅನುಮತಿ ನೀಡದೆ ಬಂಧಿಸಿದ್ದಾರೆ. ಸಿರಗುಪ್ಪಾ ಮತ್ತು ಹಗರಿ ಬೊಮ್ಮನಹಳ್ಳಿ ಸಂಪೂರ್ಣವಾಗಿ ಬಂದ್ ಆಗಿದೆ.

ಚಿತ್ರದುರ್ಗ : ಮೊಳಕಾಲ್ಮೂರು, ಚೆಳ್ಳಕೆರೆ ಸಂಪೂರ್ಣವಾಗಿ ಬಂದ್ ಯಶಸ್ವಿಯಾಗಿದೆ.

ತುಮಕೂರು : ತುಮಕೂರಿನಲ್ಲಿ ಬಂದ್ ಯಶಸ್ವಿಯಾಗಿದೆ. ಸಿಐಟಿಯು, ಎಐಟಿಯುಸಿ, ಮತ್ತು ಬ್ಯಾಂಕ್, ವಿಮಾ ನೌಕರರು ಬಂದ್‌ನಲ್ಲಿ ಪಾಲ್ಗೊಂಡಿದ್ದರು. ಸಾವಿರಾರು ಜನರು ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಹಾಸನ, ಬೀದರ್, ಶಿವಮೊಗ್ಗ, ಮಂಡ್ಯ, ಮತ್ತು ಬಿಜಾಪುರಗಳಲ್ಲಿ ಕೈಗಾರಿಕೆಗಳು ಸಂಪೂರ್ಣ ಬಂದ್‌ನ್ನು ನಡೆಸಿವೆ. ಪೋಲೀಸರು ಕೆಲವು ಕಡೆ ಪ್ರತಿಭಟನಾ ಮೆರವಣಿಗೆ ನಡೆಸಲು ಬಿಡದೆ ಕಾರ್ಯಕರ್ತರನ್ನು ಬಂಧಿಸಿದ್ದಾರೆ. ಮುಷ್ಕರದಲ್ಲಿ ಭಾಗವಹಿಸಿದ ಮತ್ತು ಬಂದ್‌ಗೆ ಸಹಕಾರ ನೀಡಿದ ಎಲ್ಲರನ್ನು ಕಾರ್ಮಿಕ ಸಂಘಗಳ ಜಂಟಿ ಸಮಿತಿಯು ಅಭಿನಂದಿಸಿದೆ.

ಬ್ಯಾಂಕ್, ವಿಮಾ, ಮತ್ತು ಆಟೋ ರಿಕ್ಷಾ ಚಾಲಕರು ರಾಜ್ಯದ ಎಲ್ಲಾ ಕಡೆಗಳಲ್ಲೂ ಬಂದ್‌ನಲ್ಲಿ ಪೂರ್ಣಪ್ರಮಾಣವಾಗಿ ಪಾಲ್ಗೊಂಡಿದ್ದರು..

ರೇಷನ್ ಕಾರ್ಡುಗಳನ್ನು ಕಿತ್ತುಕೊಳ್ಳುತ್ತಾರಪ್ಪೊ....

ಬಡವರ ಕಾರ್ಡ್ ಕಿತ್ತುಕೊಳ್ಳುತ್ತಾ, ಉಳ್ಳವರಲ್ಲಿ ಉಳಿಸುತ್ತಾ ಹೋಗುತ್ತಿರುವ ಸರ್ಕಾರದ ಉದ್ದೇಶವೇನು?

ಹೊಸದಾಗಿ ರೇಷನ್ ಕಾರ್ಡುಗಳನ್ನು ವಿತರಿಸಲು ಗುರುತಿಸಲಾದ ಫಲಾನುಭವಿಗಳ ಪಟ್ಟಿಯಲ್ಲಿ ಸೇರಿಸಲ್ಪಡದೆ ಹೊರಗೆ ಉಳಿದವರು ಹೊಸದಾಗಿ ಅರ್ಜಿಸಲ್ಲಿಸಲು ಮೇ 17ರ ವರೆಗೆ ಸರ್ಕಾರ ಅವಧಿ ನೀಡಿದ್ದನ್ನು ಕಂಡು ಗ್ರಾಮೀಣ ಬಡವರು ಖುಷಿ ಪಟ್ಟಿದ್ದರು. ಬಡತನ ರೇಖೆ (ಬಿ.ಪಿ.ಎಲ್)ಗಿಂತ ಕೆಳಗಿರುವ ಕುಟುಂಬಗಳ ಸಮೀಕ್ಷೆ ನಡೆದಾಗ ತಮ್ಮ ಹೆಸರನ್ನು ಯಾದಿಯಲ್ಲಿ ಸೇರಿಸಿಲ್ಲ ಎಂದು ನೊಂದವರಿಗೆ ಮತ್ತೆ ಜೀವ ಬಂದಂತಾಗಿತ್ತು. ಆದರೆ ನಮ್ಮ ಮುಗ್ಧ ಬಡಜನಗಳಿಗೆ ಕೃಷ್ಣ ಸರ್ಕಾರದ ಮೋಸ ಹೇಗೆ ತಾನೇ ಅರ್ಥವಾಗಬೇಕು? ಪ್ರತಿಯೊಂದು ತಾಲ್ಲೂಕ್ ಕಛೇರಿಯಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿರುವ ಬಡವರು ತಮಗೆ ರೇಷನ್ ಕಾರ್ಡ್ ಸಿಕ್ಕೇ ಬಿಟ್ಟಿತು ಎಂಬ ಸಂತಸ ದಲ್ಲಿದ್ದಾರೆ. ಆದರೆ ಸರ್ಕಾರ ರೇಷನ್ ಕಾರ್ಡುಗಳನ್ನೇ ಕಿತ್ತುಕೊಳ್ಳಲು ಹೊರಟಿದೆ ಎಂಬ ವಿಷಯ ಇನ್ನೂ ಅವರಿಗೆ ಅರ್ಥವಾಗಿಲ್ಲ.

ಎಂಥಾ ಸುಧಾರಣೆ?!

ರಾಜ್ಯದಲ್ಲಿ ಇಲ್ಲಿಯವರೆಗೆ ಚಾಲನೆಯಲ್ಲಿದ್ದ 63 ಲಕ್ಷ ಹಸಿರು ರೇಷನ್ ಕಾರ್ಡುಗಳ ಸಂಖ್ಯೆಯನ್ನು ಕಡಿತಮಾಡಿ 42 ಲಕ್ಷಕ್ಕೆ ಇಳಿಸಲು ಸರ್ಕಾರ ನಿರ್ಧಾರ ಮಾಡಿದೆ. ಇದು ಸರ್ಕಾರದ ಆರ್ಥಿಕ ಸುಧಾರಣೆಗಳಲ್ಲೊಂದು! ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆಯನ್ನು ದಿಡೀರನೆ 20 ಲಕ್ಷ ಕಡಿಮೆ ಮಾಡುವುದು ಸುಧಾರಣೆಯಲ್ಲವೇ? ಸರ್ಕಾರದ ಉದಾರೀಕರಣ ನೀತಿಗಳ ಪರಿಣಾಮವಾಗಿ ಸಣ್ಣ ಹಿಡುವಳಿದಾರ ರೈತರು ದಿವಾಳಿಯಾಗಿ ಇದ್ದ ಅಲ್ಪ ಸ್ವಲ್ಪ ಭೂಮಿಯನ್ನು ಮಾರಿಕೊಂಡು ಕೂಲಿಕಾರರಾಗುತ್ತಿ ರುವಾಗ, ಉದ್ಯೋಗವನ್ನರಸಿಕೊಂಡು ನಗರಗಳಿಗೆ ವಲಸೆ ಬರುವವರ ಸಂಖ್ಯೆ ಹೆಚ್ಚಾಗುತ್ತಾ ಕೊಳಗೇರಿಗಳು ಬೆಳೆಯುತ್ತಿರುವಾಗ ಬಡವರ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ಕಂಡು ಹುಡುಕಿರುವ ಕ್ರಮವೇ ರೇಷನ್ ಕಾರ್ಡುಗಳ ಕಡಿತ! ಈ ನಡುವೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಯಾದಿ ತಯಾರಿಕೆಯಲ್ಲಿ ಭಾರೀ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಕ್ರಮ, ಅನ್ಯಾಯ ನಡೆದಿದೆ ಎಂದು ಎಲ್ಲೆಡೆ ಹಾಹಾಕಾರ ಎದ್ದಿರುವುದನ್ನು ಗಮನಿಸಿ ರೇಷನ್ ಕಾರ್ಡುಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಯಿತು. ಆದರೆ ಕಾರ್ಡುಗಳ ಸಂಖ್ಯೆಯನ್ನು ಕಡಿತಮಾಡಲು ನಿರ್ಧರಿಸಿರುವ ಸರ್ಕಾರ, ಅರ್ಜಿ ಹಾಕಿರುವ ಎಲ್ಲ ಬಡವರಿಗೆ ರೇಷನ್ ಕಾರ್ಡುಗಳನ್ನು ಕೊಡುವುದೇ? ವಿಶ್ವ ಬ್ಯಾಂಕಿನ ನಿರ್ದೇಶನವನ್ನು ಕಡೆಗಣಿಸಿ ಕೃಷ್ಣ ಸರ್ಕಾರ ಎಲ್ಲ ಬಡವರಿಗೆ ರೇಷನ್ ಕಾರ್ಡುಗಳನ್ನು ವಿತರಣೆ ಮಾಡುವುದೆ?

ರೇಷನ್ ಕಾರ್ಡುಗಳು ಅರ್ಹರಲ್ಲದವರ ಪಾಲಾಗಿವೆ ಎಂಬ ನೆಪಮಾಡಿಕೊಂಡು ರೇಷನ್ ಕಾರ್ಡುಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ಮುಂದಾಗಿದೆಯಂತೆ! **ರೇಷನ್ ಕಾರ್ಡುಗಳು ಹೇಗೆ ಅರ್ಹರಲ್ಲದವರ ಪಾಲಾದವು ಎಂಬುಕ್ಕೆ ಸರ್ಕಾರದ ವಿವರಣೆ ಏನು? ಸರ್ಕಾರಿ ಯಂತ್ರ ಶಾಮೀಲಾಗದೆ ಇಂತಹ ಅವ್ಯವಹಾರ ನಡೆಯಲು ಸಾಧ್ಯವೇ?** ಅರ್ಹತೆ ಇಲ್ಲದೆ ಕಾರ್ಡುಗಳನ್ನು ಪಡೆದು ಕೊಂಡಿರುವ ಆಳುವ ಪಕ್ಷದ ಬೆಂಬಲಿಗರಿಂದ ರೇಷನ್ ಕಾರ್ಡುಗಳನ್ನು ಕಿತ್ತುಕೊಳ್ಳುವ ಬದಲು ಹೊಸ ಬಣ್ಣದ ಕಾರ್ಡುಗಳನ್ನು ಹಂಚುವ ನೆಪ ಮಾಡಿ ಮತ್ತೆ ಅರ್ಹತೆ ಇಲ್ಲದವರಿಗೇ ಕಾರ್ಡು ಗಳನ್ನು ನೀಡಲು ಹೊರಟಿರುವ ಕ್ರಮ ಸರಿಯೆ? ಇದ್ದ ಬಡವರ ಕಾರ್ಡ್ ಕಸಿಯುವುದೇ?

ಆಹಾರ ಭದ್ರತೆ ನಾಶ

ಬಡವರಿಗೆ ಆಹಾರದ ಭದ್ರತೆಯನ್ನು ಒದಗಿಸುವ ಅಂಗವಾಗಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ರೇಷನ್ ಪದ್ಧತಿಯನ್ನು ನಡೆಸಿಕೊಂಡು ಬರಲಾಗಿತ್ತು. ಸುಮಾರು 5 ಲಕ್ಷ ನ್ಯಾಯಬೆಲೆ ಅಂಗಡಿಗಳ ಮೂಲಕ ದೇಶದ ಸುಮಾರು 4 ಕೋಟಿ ಕುಟುಂಬಗಳಿಗೆ ರಿಯಾಯ್ತಿ ದರಗಳಲ್ಲಿ ಆಹಾರಧಾನ್ಯಗಳನ್ನು ಒದಗಿಸಲಾಗುತ್ತಿತ್ತು. ರೈತರಿಂದ ಆಹಾರ ದಾನ್ಯಗಳನ್ನು ಖರೀದಿಮಾಡಿ, ಭಾರತ ಆಹಾರ ನಿಗಮದ ಉಗ್ರಾಣಗಳಲ್ಲಿ ಅವುಗಳನ್ನು ಸಂಗ್ರಹಿಸಿಟ್ಟು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಬಡವರಿಗೆ ಅವುಗಳನ್ನು ಒದಗಿಸಲಾಗುತ್ತಿತ್ತು.



ಆದರೆ ಆರ್ಥಿಕ ಉದಾರೀಕರಣದ ನೀತಿಗಳ ಅನುಷ್ಠಾನ ಆರಂಭವಾಗುತ್ತಿದ್ದಂತೆ ಕೇಂದ್ರ ಸರ್ಕಾರವು ಆಹಾರ ಸಬ್ಸಿಡಿಯನ್ನು ವ್ಯವಸ್ಥಿತವಾಗಿ ಕಡಿಮೆ ಮಾಡುತ್ತಾ ಬರುತ್ತಿದೆ. ವಾಜಪೇಯಿ ಸರ್ಕಾರ ಬಂದಾಗಿನಿಂದ ಸಾರ್ವಜನಿಕ ವಿತರಣಾ ದರಗಳನ್ನು ಹೆಚ್ಚಿಸುತ್ತಾ ಬಡಜನತೆ ರೇಷನ್ ವ್ಯವಸ್ಥೆಯನ್ನೆ ಮರೆತು ಬಿಡುವಂತೆ ಮಾಡಲು ಪ್ರಯತ್ನಪಟ್ಟಿತು. ನ್ಯಾಯ ಬೆಲೆ ಅಂಗಡಿಗಳಲ್ಲಿ ಆಹಾರ ದಾನ್ಯಗಳ ಬೆಲೆಗಳು ಹೆಚ್ಚಾಗುತ್ತಾ ಹೋದಂತೆ ಆಹಾರ ನಿಗಮಗಳ ಗೋದಾಮುಗಳಲ್ಲಿ ಲಕ್ಷಗಟ್ಟಲೆ ಟನ್ ಆಹಾರ ದಾನ್ಯಗಳು ಕೊಳತು ಹಾಳಾದವು. ಇತ್ತ ಬಡಜನ ಹೊಟ್ಟೆಗಿಲ್ಲದೆ ಉಪವಾಸ ಸಾಯುವಂತಾಯಿತು.

ಬಡತನ ನಿರ್ಮೂಲನವಲ್ಲ, ಬಡವರ ನಿರ್ಮೂಲನ

ಉದಾರೀಕರಣದ ನೀತಿಗಳನ್ನು ಜಾರಿಗೆ ತರುವ ವಿಷಯದಲ್ಲಿ ಇನ್ನುಳಿದ ರಾಜ್ಯ ಗಳೊಂದಿಗೆ ಸ್ಪರ್ಧೆಗಿಳಿದಿರುವ ರಾಜ್ಯದ ಕೃಷ್ಣ ಸರ್ಕಾರವು, ಆಹಾರ ಸಬ್ಸಿಡಿಯನ್ನು ಕಡಿತ ಮಾಡುವ ವಾಜಪೇಯಿ ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿ ಯುತ್ತಿದೆ. ಇದರ ಪರಿಣಾಮವಾಗಿ ರೇಷನ್ ಕಾರ್ಡುಗಳ ಕಡಿತಕ್ಕೆ ಕರ್ನಾಟಕ ಸರ್ಕಾರ ತೀರ್ಮಾನ ಮಾಡಿದೆ.

ಸತತ ಬರಗಾಲ, ಕೃಷಿ ಉತ್ಪಾದನೆಯಲ್ಲಿ ಗಣನೀಯ ಕುಸಿತ, ಉದ್ಯೋಗವಿಲ್ಲದೆ, ಆದಾಯ ವಿಲ್ಲದೆ ಬಡಜನತೆ ನರಳುತ್ತಿರುವಾಗ ಕನಿಷ್ಠ ರೇಷನ್ ಕಾರ್ಡುಗಳ ಮೂಲಕ ಆಹಾರ ದಾನ್ಯಗಳನ್ನು ಒದಗಿಸಲು ಒಪ್ಪದ ಇಂತಹ ಸರ್ಕಾರ ಇದ್ದರೇನು ಬಿಟ್ಟರೇನು ಎಂಬ ಪ್ರಶ್ನೆ ಇಂದು ಮುಖ್ಯವಾಗುತ್ತದೆ. ಹಿಂದೊಮ್ಮೆ 'ಗರೀಬಿ ಹಟಾವೋ' ಹೆಸರಿನಲ್ಲಿ 'ಗರೀಬೊಂಕೋ ಹಟಾವೋ' ಮಾಡಿದಂತೆ ಈಗ ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ ಸರ್ಕಾರ ದೇಶದಲ್ಲಿ ಬಡವರೇ ಇಲ್ಲ ಎಂದು ಸಾಬೀತು ಮಾಡಲು ಹೊರಟಂತೆ ಕಾಣುತ್ತಿದೆ.

ವಾಜಪೇಯಿ ನಾಟಕ

ವಾಜಪೇಯಿ ಅವರ ಅಂತ್ಯೋದಯ ಯೋಜನೆ ಒಂದು ದೊಡ್ಡ ನಾಟಕ. ವಾಜಪೇಯಿ ಸರ್ಕಾರಕ್ಕೆ ನಿಜವಾಗಿ ದೇಶದ ಬಡವರ ಬಗ್ಗೆ ಕಾಳಜಿ ಇದ್ದರೆ ದೇಶದಲ್ಲಿರುವ ಎಲ್ಲ ಬಡವರಿಗೂ ಕಿಲೋ 2ರೂ ದರದಲ್ಲಿ ಆಹಾರ ದಾನ್ಯಗಳನ್ನು ಒದಗಿಸಲು ಅದು ಕಾರ್ಯಕ್ರಮ ಹಾಕಬೇ[...]
ಆಹಾರ ನಿಗಮದ ಉಗ್ರಾಣಗಳಲ್ಲಿ ಆರೇಳು ಕೋ[...]
ಟನ್‌ಗಳಷ್ಟು ಆಹಾರ ಧಾನ್ಯಗಳನ್ನು [...]
ಹೆಗ್ಗಣಗಳು ತಿಂದು ಹಾಳುಮಾಡುತ್ತಿರುವ[...]
ಸರ್ಕಾರಕ್ಕೆ ಇದೇನು ಅಸಾಧ್ಯ ಕೆಲಸವ[...]
ಮಾತೆತ್ತಿದರೆ ದೇಶಭಕ್ತಿಯನ್ನು ಪ್ರಸ್ತಾಪಿಸುವ ಸಂ[...]
ಪರಿವಾರದ ಈ ಸರ್ಕಾರಕ್ಕೆ ಹಸಿದ ಬ[...]
ಭಾರತೀಯರು ಕಾಣುವುದಿಲ್ಲವೆ? ನೊಬೆ[...]
ಪುರಸ್ಕೃತ ಅಮರ್ತ್ಯಸೇನ್ ಹೇಳುವಂತೆ, ಆಹಾ[...]
ಕೊರತೆಯಿಂದ ಕ್ಷಾಮ ಸಂಭವಿಸುವುದಿಲ್ಲ. ಆ[...]
ಕಾಳಜಿಯ ಕೊರತೆ, ಸರ್ಕಾರದ ಉದಾಸೀ[...]
ಮತ್ತು ನಿರ್ಲಕ್ಷವೇ ಇದಕ್ಕೆ ಕಾರಣ.

ಇದೆಂತಹ ಮಾನದಂಡ?

ಆಹಾರ ನಮ್ಮ ಮೂಲಭೂತ ಹಕ್ಕು. ಆ[...]
ವ್ಯವಸ್ಥೆ ಒಂದು ನಾಗರಿಕ ಸರ್ಕಾರದ ಮೊ[...]
ಹೊಣೆ. ಬಡವರನ್ನು ಗುರುತಿಸುವಾಗ ಅ[...]
ಮನೆಯಲ್ಲಿ ಟಿ.ವಿ., ಸೈಕಲ್ ಇದೆಯಾ ಎ[...]
ಹುಡುಕುವುದು ಸಲ್ಲದು. ಈ ತರಹದ ಹಿಂಸೆಯ[...]
ಪ್ರತಿಭಟಿಸಿ ಹಿಮ್ಮೆಟ್ಟಿಸಬೇಕು. ಒಂದು ಬ[...]
ಕುಟುಂಬ ಅರೆ ಹೊಟ್ಟೆ ಉಂಡು, ಸಾ[...]
ಮಾಡಿಯಾದರೂ ಒಂದು ಟಿ.ವಿ.ಯನ್ನೋ ಒಂ[...]
ಸೈಕಲನ್ನೊ ತಂದು ಇಟ್ಟುಕೊಂಡರೆ ಅ[...]
ಶ್ರೀಮಂತರಾಗುವುದಿಲ್ಲ. ಮನೆಯಲ್ಲಿ ಎಷ್ಟು [...]
ದುಡಿಯುತ್ತಾರೆ, ಅವರಿಗೆ ವರ್ಷದಲ್ಲಿ ಎಷ್ಟು [...]
ಕೆಲಸ ಸಿಗುತ್ತದೆ, ಅವರ ಆದಾಯ ಎಷ್ಟು ಆ[...]
ಅವಲಂಬಿಸಿರುವ ಜನಗಳೆಷ್ಟು ಇವು[...]
ಆಧಾರದಲ್ಲಿ ಅವರ ಅರ್ಹತೆಯನ್ನು ಅಳೆಯಬೇ[...]
ಸರ್ಕಾರಕ್ಕೆ ತನ್ನ ತಪ್ಪು ನೀತಿಯ ಅರಿವು [...]
ಬೇಕಾದರೆ ನಾವು ಬಡವರು ಧ್ವನಿ ಎತ್ತಬೇ[...]
ಎಲ್ಲಾ ಬಡವರಿಗೆ ಹಳದಿ ರೇಷನ್ ಕಾ[...]
ನೀಡಬೇಕು. ರೇಷನ್ ದರಗಳನ್ನು ಇಳಿಸಬೇ[...]
ಬರಗಾಲದ ಹಿನ್ನೆಲೆಯಲ್ಲಿ ವಲಸೆ ಹೋಗಿ[...]
ಬಡವರಿಗೂ ಅರ್ಜಿಸಲ್ಲಿಸಲು ಸಾಧ್ಯವಾಗು[...]
ಅರ್ಜಿ ಹಾಕುವ ಅವಧಿಯನ್ನು ಜೂನ್ ಕೊ[...]
ವರೆಗಾದರೂ ವಿಸ್ತರಿಸಬೇಕು ಎಂಬ ಬೇಡಿಕೆಗ[...]
ಮುಂದಿಟ್ಟು ತಾಲ್ಲೂಕ್ ಕಛೇರಿಗಳ ಎಂದುರು [...]
ತೊಟ್ಟು, ಪಟ್ಟು ಬಿಡದೆ ಹೋರಾಟ ನಡೆಸಬೇ[...]

ಮಾಧ್ಯಮ ಮಂಥನ

ಸಂಯುಕ್ತ ಕರ್ನಾಟಕದ ಸೀತಾರಾಮರಿಗೆ 'ಪ್ರಿಯವಾದ ಅಸತ್ಯಗಳು'

ಇತ್ತೀಚೆಗೆ 'ಸಂಯುಕ್ತ ಕರ್ನಾಟಕ' ದಿಕ್ಕೆಟ್ಟಂತೆ ಕಾಣುತ್ತದೆ. ವಿಜಯ ಕರ್ನಾಟಕ ಅದರ ಬುಟ್ಟಿಗೆ ಕೈಹಾಕಿದೆ. ಉತ್ತರ ಕರ್ನಾಟಕ ದಲ್ಲಿ ಸಂಯುಕ್ತ ಕರ್ನಾಟಕದ ಗುತ್ತಿಗೆ ಮುಳುಗುತ್ತಿದ್ದಂತೆ ಅದರ ಅಳಿವು ಉಳಿವಿನ ಪ್ರಶ್ನೆ ಅದನ್ನು ಕಾಡತೊಡಗಿದೆ. ಉತ್ತರ ಕರ್ನಾಟಕದ ಓದುಗರ ನಡುವೆ, ಮುಖ್ಯವಾಗಿ ವೀರಶೈವ ಸಮುದಾಯದ ನಡುವೆ ತುಂಬಾ ವ್ಯವಸ್ಥಿತವಾಗಿ ಹಿಂದುತ್ವದ ಅಲೆಯನ್ನು ಹರಡುವುದರೊಂದಿಗೆ ಓಡುತ್ತಿರುವ 'ವಿಜಯ ಕರ್ನಾಟಕ'ದೊಂದಿಗೆ ಸ್ಪರ್ಧಿಸಬೇಕಾದ ಪರಿಸ್ಥಿತಿಯಿಂದ ಸಂಯುಕ್ತ ಕರ್ನಾಟಕ ಸುಸ್ತಾಗಿದೆ. ವಿಜಯ ಕರ್ನಾಟಕ ಕೇಸರಿಮಯವಾಗಿದ್ದರೆ ತಾನು 'ಕಡು ಕೇಸರಿ' ಎಂದು ತೋರಿಸಿಕೊಳ್ಳಲು ರಾತ್ರೋರಾತ್ರಿ ಹಿಂದುತ್ವದ ಭೂತ ಬಡಕೊಂಡಂತೆ ಕಿರುಚ ತೊಡಗಿದೆ. ತಾನು 'ವಿಜಯ ಕರ್ನಾಟಕ' ಕ್ಕಿಂತಲೂ ಹೆಚ್ಚು ಹಿಂದುತ್ವವಾದಿ ಇದ್ದೇನೆ ಎಂಬುದನ್ನು ಸಾಬಿತು ಪಡಿಸುವ ಅಬ್ಬರದಲ್ಲಿ ಆಕ್ರಮಣಕಾರಿ ಹಿಂದುತ್ವದ ಕಟು ಟೀಕಾಕಾರರಾಗಿರುವ ಎಡಪಂಥಿಯರ ಮೇಲೆ, ಮುಖ್ಯವಾಗಿ ಭಾರತದ ಕಮ್ಯುನಿಸ್ಟರ ಮೇಲೆ ದಾಳಿ ಮಾಡಲು ಆರಂಭಿಸಿದೆ. ಈ ದುರುದ್ದೇಶಕ್ಕಾಗಿ ಸಿ. ಸೀತಾರಾಂ ಎಂಬವರ ಲೇಖನಿಯನ್ನು ಕೊಂಡುಕೊಂಡಿದೆ.

ಅವರ ಹೆಸರು ಸಿ. ಸೀತಾರಾಂ ಎಂದಿದ್ದರೂ, This Mr. Sitaram refuses to see. ಅವರ ಅಗ್ರ ಲೇಖನಗಳು ಅರ್ಥವಿಲ್ಲದ ಆಲಾಪಗಳು. ಅವರ ಹುರುಳಿಲ್ಲದ ಆರೋಪಗಳಿಗೆ, ತಿರುಳಿಲ್ಲದ ಟೀಕೆಗಳಿಗೆ ಕರ್ನಾಟಕದ ಪ್ರಬುದ್ಧ ಓದುಗರು ಮರುಳಾಗುತ್ತಾರೆ. ಎಂದು ಸಂಯುಕ್ತ ಕರ್ನಾಟಕದ ಈಗಿನ ಸಂಪಾದಕರಾದ ವಿ.ಎನ್. ಸುಬ್ಬರಾವ್, ಅವರಾಗಲಿ ಲೋಕ ಶಿಕ್ಷಣ ಟ್ರಸ್ಟಿನ ಆಡಳಿತ ವರ್ಗದವರಾಗಲಿ ತಿಳಿದುಕೊಂಡಿದ್ದರೆ ಅದು ಅವರ ಭ್ರಮೆಯಷ್ಟೇ.

ಏಪ್ರಿಲ್ 24ರ ಸಂಚಿಕೆಯಲ್ಲಿ 'ಭಾರತ ಕಮ್ಯುನಿಸ್ಟರು; ಕೆಲವು ಅಪ್ರಿಯ ಸತ್ಯಗಳು' ಎಂಬ ತಲೆಬರಹದ ಅಡಿಯಲ್ಲಿ ಸೀತಾರಾಂ ಅವರು ಅವರಿಗೆ ಪ್ರಿಯವಾದ ಕೆಲವು ಅಸತ್ಯಗಳನ್ನು ಓದುಗರ ಮುಂದಿಟ್ಟಿದ್ದಾರೆ. ಅವರು ತಮ್ಮ ಲೇಖನ ದಲ್ಲಿ ಮೂಡಿರುವ ಅರ್ಥವಿಲ್ಲದ ಆರೋಪ ಗಳಿಗೆಲ್ಲಾ ಉತ್ತರ ಕೊಡುವುದು ನನ್ನ ಉದ್ದೇಶವಲ್ಲ. ಅದಕ್ಕಾಗಿ ಐಕ್ಯರಂಗ ಪತ್ರಿಕೆಯ ಪುಟಗಳನ್ನು ವ್ಯರ್ಥವಾಗಿಸಬೇಕಾಗಿಲ್ಲ.

ನಡೆಗೂ ನುಡಿಗೂ ಎಳ್ಳಷ್ಟೂ ಸಂಬಂಧವಿರದ ಇವರನ್ನು (ಕಮ್ಯುನಿಸ್ಟರನ್ನು) ಕಂಡರೆ ನಗೆಯು ಬರುತ್ತದೆ" ಎಂದಿದ್ದಾರೆ ಸೀತಾರಾಂರವರು ದೇಶಕ್ಕಾಗಿ, ದೇಶದ ಜನತೆಗಾಗಿ ಎಂದಿಗೂ ಎಳ್ಳಷ್ಟೂ ತ್ಯಾಗ ಮಾಡದ ಈ ಗೊಳ್ವಾಲ್ಕರ್ ಸಂತತಿಯವರಿಗೆ ಕಮ್ಯುನಿಸ್ಟರು ದೇಶಕ್ಕಾಗಿ, ದೇಶದ ದುಡಿಯುವ ಜನತೆಗಾಗಿ, ತಾವು ನಂಬಿದ ಆದರ್ಶಗಳಿಗಾಗಿ ಮಾಡಿದ ತ್ಯಾಗ ಬಲಿದಾನ ಹೇಗೆ ಅರ್ಥವಾಗಬೇಕು? ಇವರಂತೆ ಎರಡು ನಾಲಗೆಯುಳ್ಳವರಲ್ಲ ಕಮ್ಯುನಿಸ್ಟರು.

'ಕಮ್ಯುನಿಸ್ಟರಿಗೆ ಮಾರ್ಕ್ಸ್‌ವಾದವೆನ್ನುವು[...]
ಅಂತಿಮ ಸತ್ಯ'ವಂತೆ. ಒಬ್ಬ ಮಾರ್ಕ್ಸ್‌ವಾದ[...]
'ಅಂತಿಮ ಸತ್ಯ' ಎಂಬುದೇ ಇಲ್ಲ ಎನ್ನು[...]
ವಿಚಾರ ಸೀತಾರಾಂ ಅಂತಹ ಕಣ್ಣಿದ್ದು ಕುರು[...]
ರಾಗಿರುವವರಿಗೆ ಗೋಚರವಾಗಲು ಸಾಧ್ಯವೇ[...]
ಮಾರ್ಕ್ಸ್‌ವಾದ ಅಂತಿಮ ಸತ್ಯವಲ್ಲ. ಅದೊಂ[...]
ವಿಶ್ವ ಕಣ್ಣೋಟ. ಅದು ವಿಶ್ವವನ್ನು, ಚರಿತ್ರೆಯ[...]
ವೈಜ್ಞಾನಿಕವಾಗಿ ನೋಡುವ ವಿಧಾನವಷ್ಟೆ. ಅ[...]
ಬುದ್ಧ, ಬಸವ, ಗಾಂಧಿ ಯವರನ್ನು ಮಾತ್ರವ[...]
ಕಾರ್ಲ್‌ಮಾರ್ಕ್ಸ್‌ರನ್ನು ಸಹ ವಸ್ತುನಿಷ್ಠವಾ[...]
ನೋಡಲು ಕಲಿಸುವ ವಿಜ್ಞಾನ.

ಕಮ್ಯುನಿಸ್ಟರಿಗೆ ಅಮೇರಿಕದ ಅಧ್ಯಕ್ಷ ಬು[...]
ಬಗ್ಗೆಯಾಗಲಿ ಭಾರತದ ಪ್ರಧಾನಿ ವಾಜಪೇ[...]
ಬಗ್ಗೆಯಾಗಲಿ ವ್ಯಕ್ತಿಗತ ದ್ವೇಷವಿಲ್ಲ. ಕಮ್ಯುನಿಸ್ಟ[...]
ವಿರೋಧಿಸುತ್ತಿರುವುದು ಇವರಿಬ್ಬರು ಹಾ[...]
ಇವರಿಬ್ಬರಂತವರು ಪ್ರತಿಪಾದಿಸುತ್ತಿರು[...]
ನೀತಿಗಳನ್ನು. ಕಮ್ಯುನಿಸ್ಟರ ಈ ದೋರಣ[...]
ಅವರು ಮಾನವರನ್ನು ಮಾನವೀಯತೆಯ[...]
ಗಾಢವಾಗಿ ಪ್ರೀತಿಸುವುದೇ ಕಾರಣವಾಗಿ[...]
ಸೀತಾರಾಂ ರಂತವರು ಕಮ್ಯುನಿಸ್ಟರ ಮೆ[...]
ಎಷ್ಟು ಕೇಸರೆಚಲು ಪ್ರಯತ್ನ ಪಟ್ಟರೂ ವ[...]
ಹೋರಾಟದ ಅಗ್ನಿಕುಂಡದಿಂದ ಅವರು ಶು[...]
ಚಿನ್ನದಂತೆ ಹೊರಹೊಮ್ಮುತ್ತಾ ಇರುತ್ತಾ[...]
ಇಂತಹ ಬೊಗಳಿಕೆ ತೆಗಳಿಕೆಗಳಿಗೆ ಅವರು ಸೊ[...]
ಹಾಕದೆ ತಮ್ಮ ಗುರಿಯತ್ತ ಮುನ್ನಡೆಯುತ್ತಾ[...]

- ನ[...]

ಇತಿಹಾಸದ ಪುಟಗಳಿಂದ

‘ರೇಷನ್ ಅಭಾವ - ಸಂದಿಗ್ಧ ಸ್ಥಿತಿ ಎದುರಿಸಿದ್ದು ಹೀಗೆ ....!’

ಬಿ.ವಿ.ಕಕ್ಕಿಲಾಯರ ನೆನಪುಗಳು

ಅಂದು ಆಹಾರದ ಅಭಾವ, ಮಿತಿ ಮೀರಿದ ಬೆಲೆ ಏರಿಕೆ, ಜನತೆಯಲ್ಲಿ ಹಾಹಾಕಾರ! ಕಾಳಸಂತೆಕೋರರಿಗೆ ಸುಗ್ಗಿಯೋ ಸುಗ್ಗಿ. ಇಂತಹ ಸಂದರ್ಭದಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷ - ಸಾಮೂಹಿಕ ಸಂಘಟನೆಗಳು ಹೇಗೆ ಸಮಸ್ಯೆಯನ್ನು ಕೈಗೆತ್ತಿಕೊಂಡವು? ಜೂನ್ 2 ರಿಂದ 9 ರವರೆಗಿನ ರೇಷನ್ ಕಾರ್ಡ್ ಚಳುವಳಿಯ ಸಂದರ್ಭದಲ್ಲಿ ಕಲಿಯಬೇಕಾದ ಹಲವು ಸಂಗತಿಗಳು ಇಲ್ಲಿ.

ಅದೇ ದಿನಗಳಲ್ಲಿ (ಎರಡನೇ ಮಹಾಯುದ್ಧದ ಹಿನ್ನೆಲೆಯ 1942 ರ ಸುಮಾರಿಗೆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೆ ಎಂದೂ ಜನ ಅನುಭವಿಸದಿದ್ದಂತಹ ಅಹಾರದ ಅಭಾವ ಮತ್ತು ಬೆಲೆ ಏರಿಕೆ ದಿನದಿಂದ ದಿನಕ್ಕೆ ತೀವ್ರವಾಗುತ್ತಿತ್ತು. ಆ ಕಾಲದಲ್ಲಿ ಸಾಗುವಳಿದಾರರು ತಮ್ಮ ಉತ್ಪನ್ನದ ಮೂರನೆ ಒಂದು ಅಥವಾ ಕೆಲವು ಸಂದರ್ಭಗಳಲ್ಲಿ ಅರ್ಧ ಭಾಗದಷ್ಟು ಭೂ ಮಾಲಕರಿಗೆ ಗೇಣಿಯಾಗಿ ಸಲ್ಲಿಸಬೇಕಾಗುತ್ತಿದ್ದುದರಿಂದ ಸ್ವಂತ ಕುಟುಂಬದ ಪೋಷಣೆಗೆ ಇಡೀ ವರ್ಷಕ್ಕೆ ಸಾಕಾಗುವಷ್ಟು ಅಕ್ಕಿಯನ್ನು ಉಳಿಸಿಕೊಳ್ಳಲು ಸಹ ಒಕ್ಕಲುಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಅವರು ತಮ್ಮ ಖರ್ಚಿಗೆ ತಮ್ಮ ಭೂಮಾಲಿಕರಿಂದಲೇ ಅಕ್ಕಿಯನ್ನು ದುಬಾರಿ ಬಡ್ಡಿ ಕೊಡಿಸಿ ಹಿಂದಿರುಗಿಸುವ ಶರ್ತದ ಮೇಲೆ ಕಡ ತರಬೇಕಾಗುತ್ತಿತ್ತು. ಒಂದು ಮುಡಿ (42 ಸೇರು) ಅಕ್ಕಿಯನ್ನು ಮಳೆಗಾಲ ಆರಂಭದಲ್ಲಿ (ಜೂನ್) ಕಡ ತಂದರೆ, ಮುಂಗಾರು (ಏಣೆಲು) ಬೆಳೆ ಕೋಯ್ದು ಕೂಡಲೇ (ಸೆಪ್ಟೆಂಬರ್) ಒಂದೂವರೆ ಮುಡಿ ಹಿಂದಿರುಗಿಸಬೇಕಾಗುವ ಈ ಕಾಳು ಸಾಲಕ್ಕೆ “ಪೊಲಿ” (ವೃದ್ಧಿ) ಎಂದು ಹೆಸರು. ಸಾಗುವಳಿಯ ಸಲುವಾಗಿ ಯಾವ ಖರ್ಚನ್ನಾಗಲೀ ಕೆಲಸವನ್ನಾಗಲೀ ನಿರ್ವಹಿಸುವ ಜವಾಬ್ದಾರಿ ಇಲ್ಲದಿದ್ದ ಭೂಮಾಲಿಕರು ಗೇಣುದಾರರ ಉತ್ಪತ್ತಿಯ ಬಹುಭಾಗವನ್ನು ಗೇಣಿಯಾಗಿ ಸಂಗ್ರಹಿಸುತ್ತಿದ್ದರು. ಅದರಿಂದ ಒಂದಂಶವನ್ನು ಸರಕಾರ ಯುದ್ಧಕ್ಕೋಸ್ಕರ ನಿಗದಿತ ಬೆಲೆ ತೆತ್ತು ಕೊಂಡೊಯ್ಯುತ್ತಿತ್ತು. ಉಳಿದ ಭಾಗವನ್ನವರು ರಖಂ ವ್ಯಾಪಾರಸ್ಥರಿಗೆ ಮಾರುತ್ತಿದ್ದರು. ಭೂ ಮಾಲಕರೂ ರಖಂ ವ್ಯಾಪಾರಸ್ಥರೂ ಅಕ್ಕಿಯ ಗುಪ್ತ ದಾಸ್ತಾನು ಕೂಡಿಡುತ್ತಿದ್ದರು. ಕೃತಕ ಅಭಾವ ಸೃಷ್ಟಿಸುತ್ತಿದ್ದರು. ಇವರ ಲಾಭದ ಬಾಯಾರಿಕೆಗೆ ಇತಿ ಮಿತಿ ಎನ್ನುವುದೇ ಇರುತ್ತಿರಲಿಲ್ಲ. ಆಹಾರದ ಕೊರತೆ ಹಾಗೂ ತನ್ನ ಕೈಗೆಟುಕದ ಮಟ್ಟಕ್ಕೆ ಅಕ್ಕಿಯ ಬೆಲೆ ಏರಿಕೆಯನ್ನು ದಕ್ಷಿಣ ಕನ್ನಡದ ಜನ ಹಿಂದೆಂದೂ ಅನುಭವಿಸಿರದಿದ್ದ ರೀತಿಯಲ್ಲಿ ಆ ಕಾಲದಲ್ಲಿ ಅನುಭವಿಸಬೇಕಾಗಿ ಬಂದಿತ್ತು.


ಬಿ.ವಿ.ಕಕ್ಕಿಲಾಯ

ಸಾಮ್ರಾಜ್ಯಶಾಹಿಯ ನೌಕರಶಾಹಿ ಆಡಳಿತ ಜನರನ್ನು ಹಿಂಡಿ ಹಿಪ್ಪೆ ಮಾಡುವ ಯಂತ್ರದಂತೆ ವರ್ತಿಸುತ್ತಿತ್ತು. ಈ ಸಂದರ್ಭದಲ್ಲಿ ಕಮ್ಯೂನಿಸ್ಟ್ ಪಕ್ಷವು ಚಿಕ್ಕದಾಗಿದ್ದರೂ ಸ್ವಾತಂತ್ರ್ಯ, ಜನತಂತ್ರದ ಪರವಾಗಿ ಸ್ವರವೆತ್ತುವ ಏಕೈಕ ಶಕ್ತಿಯಾಗಿತ್ತು. ಜನರಲ್ಲಿ ಅತೃಪ್ತಿ ತೀವ್ರವಾಗಿದ್ದರೂ ಹೋರಾಟಕ್ಕಿಳಿಯುವುದಕ್ಕೆ ಅಗತ್ಯವಿದ್ದ ಸಂಘಟನೆಯಾಗಲೀ ನೇತೃತ್ವವಾಗಲೀ ಬೇರೆ ಇಲ್ಲವಾಗಿತ್ತು. “ನೀವೆ ನಮಗೆ ನಾಯಕರು, ಮಾಡಿರಿ ಇಲ್ಲ ಮಡಿಯಿರಿ” ಎಂದು ಹೇಳಿ ಗಾಂಧೀಜಿ ಜೈಲು ಸೇರಿದ್ದರು. ಬ್ರಿಟಿಷರು ಭಾರತ ಬಿಟ್ಟು ತೊಲಗುವ ಔದಾರ್ಯ ತೋರಿರಲಿಲ್ಲ. ಅಂತಹ ಸಂದರ್ಭದಲ್ಲಿ ಜನರಿಗೆ ಧೈರ್ಯ ಮತ್ತು ಸಂಘಟನಾ ಶಕ್ತಿ ನೀಡಿ ಹೋರಾಟಕ್ಕೆ ಅಣಿ ನೆರೆಸುವ ಕಾರ್ಯವನ್ನು ಕಮ್ಯುನಿಸ್ಟರು ನಡೆಸಿದ್ದರು. ಈ ಸಂದರ್ಭದಲ್ಲಿ ದಾಸ್ತಾನುಗಾರಿಕೆಯನ್ನೂ ಕಳ್ಳಸಂತೆಯನ್ನೂ ಬಯಲಿಗೆಳೆಯಲು ನಮ್ಮ ಪಕ್ಷ ನಿರ್ಧರಿಸಿತು. ಆಹಾರದ ಕೊರತೆಯನ್ನು ಭೂಮಾಲಕರೂ, ವ್ಯಾಪಾರಿಗಳೂ, ಅಧಿಕಾರಿಗಳೂ ಶಾಮೀಲಾಗಿ ಸೃಷ್ಟಿಸಿದ್ದಾರೆಂದೂ, ಇದನ್ನು ಪರಿಹರಿಸಬೇಕಾದರೆ ಅಕ್ಕಿ ಹಾಗೂ ಇತರ ಅಗತ್ಯ ವಸ್ತುಗಳ ಬೆಲೆಗಳ ನಿಗದಿ ಮತ್ತು ಪಡಿತರ ವ್ಯವಸ್ಥೆ ಜಾರಿಗೊಳಿಸಬೇಕೆಂದು ನಮ್ಮ ಪಕ್ಷ ಪ್ರಚಾರ ನಡೆಸಿತು. ಅಷ್ಟೇ ಅಲ್ಲ, ಕಳ್ಳ ದಾಸ್ತಾನು ಹೊರಗೆಳೆಯುವ ನೇರ ಕಾರ್ಯಕ್ರಮವನ್ನು ನಮ್ಮ ಪಕ್ಷ ಸಂಘಟಿಸಿತು. ಈ ಸ್ವಯಂಸೇವಕ ತಂಡಗಳಲ್ಲಿ ಬೀಡಿ, ನೇಯ್ಗೆ ಮತ್ತು ಆಗ ತಾನೆ ಕೆಂಬಾವುಟ ನೇತೃತ್ವಕ್ಕೆ ಬಂದಿದ್ದ ಮುದ್ರಣಕೆಲಸಗಾರರೇ ಮುಖ್ಯವಾಗಿ ಇದ್ದರು. ಹಂಚಿನ ಮತ್ತು ಗೇರುಬೀಜ ಕೆಲಸಗಾರರೂ ಕ್ರಮೇಣ ಬಂದು ಸೇರತೊಡಗಿದ್ದರು.

ಬಂಟ್ವಾಳ ಆ ಕಾಲದಲ್ಲಿ ಅಕ್ಕಿಯ ರಖಂ ವ್ಯಾಪಾರದ ಮುಖ್ಯ ಕೇಂದ್ರವಾಗಿತ್ತು. ಅಲ್ಲಿನ ಭೂಮಾಲಕರು ಅಕ್ಕಿಯನ್ನು ದಾಸ್ತಾನಿಡುತ್ತಿದ್ದರು. ಪೇಟೆಯ ರಖಂ ವ್ಯಾಪಾರಿಗಳು ಅವುಗಳನ್ನು ಕೊಂಡುಕೊಂಡು ಎತ್ತಿನ ಗಾಡಿಗಳಲ್ಲಿ ಕಡವು (ಹೊಳೆ ದಾಟುವ ಜಾಗ)ಗಳಿಗೆ ತಂದು, ದೋಣಿಗಳಿಗೆ ಹೇರಿ ಮಂಗಳೂರು ಬಂದರಕ್ಕೆ ಸಾಗಿಸುತ್ತಿದ್ದರು. ಮಂಗಳೂರು ಬಂದರಲ್ಲಿ ಅಕ್ಕಿಯ ಗುಪ್ತ ದಾಸ್ತಾನು ಶೇಖರವಾಗುತ್ತಿತ್ತು. ದಕ್ಷಿಣ ಕನ್ನಡದ ಕಣಜವೆಂದು ಹೆಸರುವಾಸಿಯಾಗಿದ್ದ ಉಡುಪಿ ಕುಂದಾಪುರಗಳಿಂದಲೂ ಮಂಗಳೂರಿಗೆ ಕಡಲು ದಾರಿಯಲ್ಲಿ ಮಂಜಿ ಮತ್ತು ಮುಚ್ಚಿ ನಾಡದೋಣಿಗಳ ಮೂಲಕ ಅಕ್ಕಿ ಸಾಗಾಣಿಕೆಯಾಗುತ್ತಿತ್ತು.

ನಮ್ಮ ಸ್ವಯಂಸೇವಕರು ನೇತ್ರಾವತಿ ನದಿಯ ಬ್ರಹ್ಮರಕೂಟ್ಲು, ಸಜಿಪ, ಅಳಪೆ, ಜಪ್ಪು ಮೊದಲಾದ ಕಡವುಗಳಲ್ಲೂ ಮಂಗಳೂರು ಬಂದರದ ಬೈಯ್ತದಕ್ಕಿ ರೇವಿನಲ್ಲೂ, ಬಿ.ಸಿ. ರೋಡು, ಪಡೀಲು, ಕೂಳೂರುಗಳಂಥ ಮುಖ್ಯ ರಸ್ತೆಗಳ ಬದಿಗಳಲ್ಲೂ ಕಾದು ಕುಳಿತು ಕಳ್ಳಸಾಗಾಣೆಯ ಅಕ್ಕಿಯನ್ನು ಸ್ವಾದೀನಪಡಿಸುವುದಕ್ಕೆಂದು ಕಾರ್ಯಕ್ರಮವನ್ನು ಪಕ್ಷ ರೂಪಿಸಿತು. ಅದರಂತೆ ಸ್ವಯಂಸೇವಕರು ಗಾಡಿಗಳನ್ನೂ ದೋಣಿಗಳನ್ನೂ ತಡೆದು, ಕಳ್ಳ ಸಾಗಾಣಿಕೆಯ ಅಕ್ಕಿ ಮೂಟೆಗಳನ್ನು ಸ್ವಾಧೀನಪಡಿಸಿ ನಿಗದಿತ ಬೆಲೆಗೆ ಸಾರ್ವಜನಿಕರಿಗೆ ವಿತರಣೆ ಮಾಡುವ ಕ್ರಮವನ್ನು ಕೈಗೊಂಡರು. ಮೊದಲು ಸ್ವಯಂಸೇವಕರ ಮೇಲೆ ಖಟ್ಲೆ ಹೂಡಲು ಪ್ರಯತ್ನ ನಡೆದಿತ್ತು. ಆದರೆ ಪೊಲೀಸರಿಗೆ ವಿವರ ದೊರೆತು ಅವರ ತಂಡ ಸ್ಥಳಕ್ಕೆ ತಲುಪುವುದಕ್ಕಿಂತ ಮುಂಚಿತವಾಗಿಯೇ ಈ ಶೀಘ್ರ ಕಾರ್ಯಕ್ರಮವೆಲ್ಲ ಮುಗಿದು ಹೋಗುತ್ತಿತ್ತು. ಗಾಡಿ ಅಥವಾ ದೋಣಿಗಳಲ್ಲಿರುತ್ತಿದ್ದ ಅಕ್ಕಿ ಮೂಟೆಗಳ ಮಾಲಕರಿಗೆ ಮಾರಾಟದ ಹಣವನ್ನು ತೆತ್ತು ಸ್ವಯಂಸೇವಕರು ಹೋಗಿ ಬಿಡುತ್ತಿದ್ದರು. ಕೆಲವೊಮ್ಮೆ ಯಾರ್ಯಾರದೋ ಹೆಸರುಗಳನ್ನು ಅಕ್ಕಿಯ ಸಾಗಣೆದಾರರು ಪೊಲೀಸರಿಗೆ ಕೊಡುತ್ತಿದ್ದು. ಅಂಥವರ ಮೇಲೆ ಪೊಲೀಸರು ಖಟ್ಲೆ ಹಾಕುತ್ತಿದ್ದರು. ಹೀಗೆ ಮಂಗಳೂರಿನಲ್ಲೂ ಬಂಟ್ವಾಳದಲ್ಲೂ ಪ್ರಸಿದ್ಧರಾಗಿದ್ದ ಬೀಡಿ ಮತ್ತು ನೇಯ್ಗೆ ಕಾರ್ಮಿಕ ಸಂಘಟನೆಗಳ ಮುಖ್ಯ ಕಾರ್ಯಕರ್ತರ ಮೇಲೆ ಹತ್ತಾರು ಖಟ್ಲೆಗಳು ದಾಖಲಾಗುತ್ತಿದ್ದವು. ಆದರೆ ಈ ಕಾರ್ಯಕ್ರಮಕ್ಕೆ ಎಲ್ಲಾ ಕಡೆಗಳಲ್ಲೂ ಸಾರ್ವಜನಿಕರ ಅನುಕೂಲಕರ ಪ್ರತಿಕ್ರಿಯೆ ಮತ್ತು ಸಹಾಯ ಇದ್ದುದರಿಂದ ದಾಸ್ತಾನುಗಾರರು, ಸಾಗಣೆದಾರರು ಮತ್ತು ವ್ಯಾಪಾರಿಗಳು ಬಲ ಪ್ರಯೋಗದ ದಾರಿ ಬಿಡಬೇಕಾಯಿತು. ಜಿಲ್ಲಾಧಿಕಾರಿಯ ಮಧ್ಯಪ್ರವೇಶದಿಂದ, ಪ್ರತಿಯೊಂದು ಅಂಗಡಿಯಲ್ಲೂ ನಿಗದಿತ ಬೆಲೆಗೆ ಎರಡೆರಡು ಸೇರು ಅಕ್ಕಿ ಮಾರಾಟ ಮಾಡುವ ಒಪ್ಪಂದಕ್ಕೆ ವ್ಯಾಪಾರಿಗಳು ಬಂದರು. ಹೀಗೆ ಅಗ್ಗ ದರದಲ್ಲಿ ಅಕ್ಕಿ ಮಾರಾಟವಾದಾಗ ನೂಕು ನುಗ್ಗಲಾದಂತೆ ಜನರನ್ನು ಕ್ಯೂ ನಿಲ್ಲಿಸುವುದು, ಕ್ಯೂನಲ್ಲಿದ್ದವರಿಗೆ ಕುಡಿಯುವ ನೀರು ಒದಗಿಸುವುದು, ಅಕ್ಕಿಯನ್ನು ಅಳತೆ ಮಾಡಿ ಸುರಿಯುವುದೇ ಮೊದಲಾದ ಕೆಲಸಗಳನ್ನು ಕೆಂಪು ಸ್ವಯಂಸೇವಕರು ಶಿಸ್ತಿನಿಂದ ಮಾಡಲಾರಂಭಿಸಿದರು. ನಮ್ಮ ಸ್ವಯಂಸೇವಕರ ದಂಡು 500 ಸಂಖ್ಯೆ ಮೀರಿತು. ಲಿಂಗಪ್ಪ ಸುವರ್ಣ, ಮೊನಪ್ಪ ಶೆಟ್ಟಿ, ಪಡೀಲು ಮೊನಪ್ಪ, ಮೈಂದಪ್ಪ ಅಡ್ಯಂತಾಯ ಮೊದಲಾದವರು ಈ ಸ್ವಯಂಸೇವಕ ದಂಡಿನ ಮುಖ್ಯ ತಂಡಗಳ ನಾಯಕರಾಗಿದ್ದರು.

ಅದೇ ಸಮಯದಲ್ಲಿ ಮಂಗಳೂರು ನಗರಸಭಾ ಪ್ರದೇಶದೊಳಗೆ ಅನೌಪಚಾರಿಕ ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ನಾವು ಸರಕಾರವನ್ನು ಒತ್ತಾಯಿಸಿದೆವು. ಅದಕ್ಕೋಸ್ಕರ ಕರಪತ್ರ ಪ್ರಕಟಿಸಿದೆವು. ಸಾರ್ವಜನಿಕ ಸಭೆಗಳನ್ನು ನಡೆಸಿದೆವು. ನಮ್ಮ ವಿದ್ಯಾರ್ಥಿ ಫೆಡರೇಶನ್ನಿನ ಬಂಧುಗಳು ವಾರ್ಡ್‌ಗಳನ್ನು ತಮ್ಮೊಳಗೆ ವಿಂಗಡಿಸಿಕೊಂಡು, ಮನೆ ಮನೆಗಳಿಗೆ ಭೇಟಿ ನೀಡಿ, ಕುಟುಂಬದ ಸದಸ್ಯರ ಲೆಕ್ಕ ತೆಗೆದರು. ಮಂಗಳೂರಿನ ಪ್ರಸಿದ್ಧ ವಕೀಲರಾಗಿದ್ದ ನರಸಪ್ಪಯ್ಯನವರ ಕಚೇರಿಯಲ್ಲಿ ಒಂದೊಂದು ವಾರ್ಡಿಗೂ ಸಂಬಂಧಿಸಿದ ಪಟ್ಟಿಗಳನ್ನು ತಯಾರಿಸಿ ಜಿಲ್ಲಾಧಿಕಾರಿಯವರಿಗೆ ಒಪ್ಪಿಸಲಾಯಿತು. ಅದರಂತೆ ಕಾರ್ಡುಗಳನ್ನು ಬರೆದು ಜನರಿಗೆ ವಿತರಣೆ ಮಾಡುವ ಕೆಲಸವನ್ನೂ ನಮ್ಮ ಸ್ವಯಂಸೇವಕರು ಮಾಡಿದರು. ‘ರೇಷನ್ ಆಫೀಸು’ ಹಾಗೂ ಅದಕ್ಕೆ ಬೇಕಾದ ಸಿಬ್ಬಂದಿ ವರ್ಗ ನೇಮಕವಾಗುವುದಕ್ಕಿಂತ ಮೊದಲು ಈ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ ಕೀರ್ತಿ ನಮ್ಮ ಪಕ್ಷದ್ದಾಗಿದೆ, ಕಾರ್ಮಿಕ ಸಂಘಗಳದ್ದಾಗಿದೆ, ವಿದ್ಯಾರ್ಥಿ ಫೆಡರೇಷನಿನದ್ದಾಗಿದೆ.

ಅಕ್ಕಿಯ ಬೆಲೆ ಏರಿಕೆಯನ್ನು ತಡೆಯುವ, ದಾಸ್ತಾನುಗಾರಿಕೆ ಕಳ್ಳಸಂತೆಗಳನ್ನು ವಿರೋಧಿಸುವ ಅಕ್ಕಿಯ ಬೆಲೆ ನಿಗದಿ ಮತ್ತು ಪಡಿತರ ವ್ಯವಸ್ಥೆ ಜಾರಿಗೊಳಿಸುವ ಸಲುವಾಗಿ ನಮ್ಮ ಹೋರಾಟ ನಡೆಯುತ್ತಿದ್ದಾಗ, ಪಕ್ಷದ ಸಂಘಟನಾ ಬಲವೂ ಬೆಳೆಯಿತು. ರಾಜಕೀಯವಾಗಿ ಪಕ್ಷದ ಪ್ರಭಾವ ಹೆಚ್ಚಾಯಿತು. ಸಾಮೂಹಿಕ ತಳಹದಿ, ಸಂಘಟಿತ ಶಕ್ತಿ ಮತ್ತು ರಾಜಕೀಯ ಅನುಭವಗಳುಳ್ಳ ನಾಯಕತ್ವವೊಂದು ರೂಪ ತಳೆಯಿತು. ಈ ಸಂಧಿಕಾಲದಲ್ಲಿ ಹಂಚು, ಗೋಡಂಬಿ, ಮೋಟಾರು ಸಾರಿಗೆ, ಮುದ್ರಣ ಮೊದಲಾದ ಬೇರೆ ಬೇರೆ ಕೈಗಾರಿಕೆಗಳಲ್ಲಿ ಕಾರ್ಮಿಕರನ್ನು ಸಂಘಟನೆ ಮಾಡುವ ಕಾರ್ಯವನ್ನು ನಮ್ಮ ಪಕ್ಷ ಮತ್ತು ದ.ಕ. ಟ್ರೇಡ್ ಯೂನಿಯನ್ ಕೌನ್ಸಿಲ್ ಕೈಗೆತ್ತಿಕೊಂಡವು.

(‘ಬರೆಯದ ದಿನಚರಿಯ ಮರೆಯದ ಪುಟಗಳು’ ಗ್ರಂಥದಿಂದ - ನವ ಕರ್ನಾಟಕ ಪ್ರಕಾಶನ.)

ಮನಮಿಡಿದ ಘಟನೆ

‘ದೇವ್ರೆ ನೀನೂ ಕೆಲ್ಸ ಮಾಡು’

ಎಂದಿನಂತೆ ಕೆಲಸಕ್ಕೆ ಹೊರಟಿದ್ದೆ. ಟ್ರಾಫಿಕ್‌ನಲ್ಲಿ ನನ್ನ ಸ್ಕೂಟರ್ ನಿಲ್ಲಿಸಿದಾಗ ನನ್ನ ಎದುರಿಗಿದ್ದದ್ದು ಒಂದು ಎತ್ತಿನ ಗಾಡಿ. ಬಡಕಲು ಎತ್ತು (ಹಸು) ಗಾಡಿ ಎಳೆಯಲು ಪ್ರಾಯಾಸ ಪಡುತ್ತಿದ್ದರೆ, ಬಡಕಲು ದೇಹದ ಅದರ ಒಡೆಯ ಎತ್ತಿನ ಬಾಲವನ್ನು ತಿರುವುತ್ತಾ ಅದು ಮುಂದೆ ಹೋಗಲೆಂದು ಪ್ರೋತ್ಸಾಹಿಸುತ್ತಿದ್ದ. ಆದರೆ ನನ್ನ ಗಮನ ಸೆಳೆದದ್ದು ಇದಲ್ಲ. ಗಮನ ಸೆಳೆದದ್ದೇ ಬೇರೆ. ಆ ಗಾಡಿಯ ಹಿಂಭಾಗದಲ್ಲಿ ಒಂದು ವಾಕ್ಯ ಬರೆದಿತ್ತು ಅದು ‘ದೇವ್ರೆ ನೀನೂ ಕೆಲ್ಸ ಮಾಡು’ ಎಂದು.

ದಷ್ಟಪುಷ್ಟವಾದ ದೇವರುಗಳನ್ನು ಕಂಡು ಆತನಿಗೆ ಅಸೂಯೆಯಾಗಿರಬೇಕು. ಇಲ್ಲವೇ ಬರೀ ಆಶೀರ್ವಾದ ಕೊಡುವ ಪೋಸು ನೀಡಿದರೆ ಸಾಕೆ? ದೇವರಿಗೆ ಕಷ್ಟಸುಖ ಗೊತ್ತಾಗಬೇಡವೆ ಎಂದೆನಿಸಿರಬೇಕು.

ಅಂದಿನ ದುಡಿಮೆಯಿಂದಲೇ ಅಂದಿನ ಊಟ ಎಂಬ ಪರಿಸ್ಥಿತಿ ಈ ಶ್ರಮ ಜೀವಿಯದು. ಆ ಹಸುವು ಕೂಡ ಪ್ರತಿದಿನದ ಮೇವಿಗಾಗಿ ದುಡಿಯಲೇ ಬೇಕಾದ ಅನಿವಾರ್ಯತೆ. ಈ ಬವಣೆ ದೇವರಿಗೆ ಗೊತ್ತಾಗೋದು ಹೇಗೆ? ‘ಕಾಯಕವೇ ಕೈಲಾಸ’ ಎನ್ನುತ್ತಾರೆ, ಕೈಲಾಸದಲ್ಲಿರುವವರೂ ಕಾಯಕಕ್ಕೆ ಇಳಿಯಬೇಕು ಎನ್ನುವ ಹಂಬಲ ಆತನಿಗಿರಬಹುದು.

ಹಲವು ದಿಕ್ಕುಗಳಿಂದ ಧಾಳಿಗೊಳಗಾಗಿರುವ ಈ ಶ್ರಮಜೀವಿ, ಎರಡು ಹೊತ್ತಿನ ತುತ್ತಿಗೆ ದುಡಿದುಡಿದು ಕರಗುತ್ತಿರುವಾಗ, ದೇವರೆನ್ನುವವನೊಬ್ಬ ಇರುವುದಾದರೆ ಆತನೂ ದುಡಿಯಲಿ ಎನ್ನುವ ಆತನ ಮನಸ್ಥಿತಿಯನ್ನು ಕಂಡು ನನ್ನ ಮನ ಮಿಡಿಯಿತು.

- ರಾಮು

ಕಾಂಗ್ರೆಸ್ - ಬಿ.ಜೆಪಿ.-ತೃಣಮೂಲ ಮಹಾಮೈತ್ರಿಕೂಟ, ಅವರ ಚುನಾವಣಾ ಹಿಂಸಾಚಾರ, ಬೂರ್ಜ್ವಾ ಮಾಧ್ಯಮಗಳ ಎಡರಂಗದ ವಿರುದ್ಧ ಅಬ್ಬರದ ಅಪಪ್ರಚಾರ ಲೆಕ್ಕಿಸದೆ ಪಶ್ಚಿಮ ಬಂಗಾಳದ ಮತದಾರರು ತೀರ್ಪಿತ್ತಿದ್ದಾರೆ. ಎಡರಂಗ ಪ್ರಚಂಡ ಜಯಭೇರಿಗಳಿಸಿದೆ. ಸತತ ಆರನೇ ಬಾರಿ ಗೆದ್ದಿದೆ. ಕಳೆದ ಬಾರಿಗಿಂತಲೂ ಹೆಚ್ಚಿನ ಜಯಗಳಿಸಿದೆ. ಜನತೆ ಕೇಂದ್ರ ಸರ್ಕಾರದ ಎನ್.ಡಿ.ಎ. (ಬಿಜೆಪಿ ಮತ್ತು ತೃಣಮೂಲ) ಮತ್ತು ಕಾಂಗ್ರೆಸ್‌ನ ದಿವಾಳಿಕೋರ ನೀತಿಗಳನ್ನು ತಿರಸ್ಕರಿಸಿದ್ದಾರೆ. ಎಡರಂಗದ ಜನಪರ ಕೆಲಸಗಳನ್ನು ಪುರಸ್ಕರಿಸಿದ್ದಾರೆ. ಚುನಾವಣಾ ಫಲಿತಾಂಶಗಳ ವಿವರಗಳಿಗೆ ಓದಿ.

ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಗಳು

ಎಡರಂಗದ ಡಬಲ್ ಹ್ಯಾಟ್ರಿಕ್ ತೃಣಮೂಲಗೆ ಮುಖಭಂಗ

ಚುನಾವಣಾ ಫಲಿತಾಂಶದ ಮುಖ್ಯ ಅಂಶಗಳು.

- ಪಂಚಾಯತ್ ಸಮಿತಿ, ಗ್ರಾಮ ಸಮಿತಿ ಎರಡೂ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಡರಂಗ ಎರಡೂ ತಮ್ಮ ಒಟ್ಟು ಸ್ಥಾನಗಳನ್ನು 1998ರ ಚುನಾವಣೆಗೆ ಹೋಲಿಸಿದರೆ ಈ ಬಾರಿ ಹೆಚ್ಚಿಸಿಕೊಂಡಿವೆ.
- ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಡರಂಗ ಎರಡರ ಒಟ್ಟು ಸ್ಥಾನಗಳು ಸ್ವಲ್ಪ ಕಡಿಮೆ ಆಗಿದೆ.
- 18 ಜಿಲ್ಲೆಗಳಲ್ಲಿ 16 ಜಿಲ್ಲೆಗಳಲ್ಲಿ ಗ್ರಾಮ ಸಮಿತಿ, ಪಂಚಾಯತ್, ಜಿಲ್ಲಾ ಪರಿಷತ್‌ಗಳೆಲ್ಲದರಲ್ಲೂ ಎಡರಂಗ ಬಹುಮತಗಳಿಸಿದೆ. ಸಿಪಿಐ(ಎಂ) ಒಂದೇ ಪಕ್ಷವಾಗಿ ಸರಳ ಬಹುಮತಗಳಿಸಿದೆ.
- ಈ 16 ಜಿಲ್ಲೆಗಳಲ್ಲಿ ಎಡರಂಗ ಅತ್ಯಂತ ಹೆಚ್ಚಿನ ಮತಗಳಿಸಿದೆ. ಎರಡು-ಮೂರು ಜಿಲ್ಲೆ ಬಿಟ್ಟರೆ ಎಲ್ಲಾ 16 ಜಿಲ್ಲೆಗಳಲ್ಲಿ ಶೇಕಡಾ 50ಕ್ಕಿಂತ ಹೆಚ್ಚಿನ ಮತಗಳಿಸಿದೆ.
- ಮುರ್ಶಿದಾಬಾದ್ ಜಿಲ್ಲೆಯಲ್ಲಿ ಮಾತ್ರ ಮೂರು ವಿರೋಧ ಪಕ್ಷಗಳು ಸೇರಿ ಗ್ರಾಮ, ಪಂಚಾಯತ್, ಜಿಲ್ಲಾ ಸಮಿತಿಗಳಲ್ಲಿ ಬಹುಮತಗಳಿಸಿವೆ. ಎಡರಂಗಕ್ಕಿಂತ ಕೆಲವೇ ಸೀಟು ಹೆಚ್ಚು ಗಳಿಸಿವೆ.
- ಮಾಲ್ಡಾ ಜಿಲ್ಲೆಯಲ್ಲಿ ಎಡರಂಗಕ್ಕೂ ವಿರೋಧಿ ರಂಗಕ್ಕೂ (ಕಾಂಗ್ರೆಸ್ - ಬಿಜೆಪಿ - ತೃಣಮೂಲ ಮಹಾಮೈತ್ರಿ ಕೂಟ)ದ ಎರಡಕ್ಕೂ ಗ್ರಾಮ ಜಿಲ್ಲಾ ಸಮಿತಿಗಳಲ್ಲಿ ಬಹುಮತ ಬರದೆ ಹೋಗಿದೆ. ಎಸ್.ಯು.ಸಿ.ಐ ಮುಂತಾದ ಇತರ ಪಕ್ಷಗಳೂ ಸೇರಿದಂತೆ ಮಾತ್ರ ವಿರೋಧಿ ರಂಗಕ್ಕೆ ಬಹುಮತ ಬರಬಹುದು. ಆದರೆ ಮಾಲ್ಡಾ ಜಿಲ್ಲೆಯ ಪಂಚಾಯತ್ ಸಮಿತಿಗಳಲ್ಲಿ ಎಡರಂಗ ಬಹುಮತ ಪಡೆದಿದೆ.
- ಒಟ್ಟಾರೆಯಾಗಿ ವಿರೋಧಿ ರಂಗ ಸೀಟುಗಳಲ್ಲಿ ಹಿಂದಿನ ಚುನಾವಣೆಗಳಿಗಿಂತಲೂ ಕೆಳಗೆ ಕುಸಿದಿವೆ. ಆದರೆ ವಿರೋಧಿ ರಂಗಕ್ಕೆ ಬಂದ ಸೀಟುಗಳಲ್ಲಿ ಸಿಂಹಪಾಲು ಪಡೆಯುವ ಮೂಲಕ ಕಾಂಗ್ರೆಸ್ ತನ್ನ ಸೀಟುಗಳನ್ನು ಹೆಚ್ಚಿಸಿಕೊಂಡಿವೆ. ಮೂರು ಗ್ರಾಮ ಪಂಚಾಯತ್ ಜಿಲ್ಲಾ - ಸಮಿತಿಗಳಲ್ಲಿ ಕಾಂಗ್ರೆಸ್ 3ನೇ ಸ್ಥಾನದಲ್ಲಿದ್ದದ್ದು ಈ ಬಾರಿ ಎಡರಂಗದ ನಂತರದ ಎರಡನೇ ಸ್ಥಾನಕ್ಕೆ ಬಂದಿದೆ.
- ತೃಣಮೂಲ ಕಾಂಗ್ರೆಸ್ ಕಳೆದ ಚುನಾವಣೆಯಲ್ಲಿ ಎರಡನೇ ಸ್ಥಾನದಲ್ಲಿದ್ದದ್ದು ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಮಾತ್ರವಲ್ಲ ಮೂರೂ ಹಂತದ ಚುನಾವಣೆಗಳಲ್ಲಿ ಸೀಟು ಗಳಿಕೆಯಲ್ಲಿ ಹೆಚ್ಚು ಕಡಿಮೆ ಹಿಂದಿನದ್ದರ ಅರ್ಧಕ್ಕೆ ಕುಸಿದಿದೆ.
- ಬಿಜೆಪಿ ಸಹ ಸೀಟುಗಳಿಕೆಯಲ್ಲಿ ಕುಸಿದಿದೆ. ಜಿಲ್ಲಾ ಸಮಿತಿ ಚುನಾವಣೆಗಳಲ್ಲಿ ಮಾತ್ರ ಒಂದು ಸೀಟು ಇದ್ದದ್ದು ಈ ಬಾರಿ ಎರಡು ಸೀಟು ಗಳಿಸಿದೆ.

ಚುನಾವಣಾ ಹಿಂಸಾಚಾರ - ಯಾರು ಯಾರ ಮೇಲೆ ನಡೆಸಿದ್ದು?


ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಗಳ ಮೊದಲು, ಆಮೇಲೆ ಹಿಂಸಾಚಾರ ನಡೆಯಲಿಲ್ಲವೇ? ಖಂಡಿತ ನಡೆಯಿತು. ಆದರೆ ಯಾರು ನಡೆಸಿದ್ದು, ಯಾರ ಮೇಲೆ? ಎಲ್ಲಾ ಬುರ್ಜ್ವಾ ಮಾಧ್ಯಮಗಳು ಅದನ್ನು ನಂಬಿ ತಲೆ ದೂಗಿದವರು ಸರ್ಕಾರ ಯಾರದ್ದೋ ಅವರೇ ಮಾಡಿರಬೇಕು ಎಂಬ ತೀರ್ಮಾನಕ್ಕೆ ಬಂದಿದ್ದರು. ಆದರೆ ನಿಜ ಸತ್ಯ ಏನು?

ಏಪ್ರಿಲ್ 8 ರ ಮತ್ತು ಮೇ 12 ರ ನಡುವೆ ಒಟ್ಟು ಸತ್ತವರಲ್ಲಿ ಎಷ್ಟು ಯಾವ ಪಾರ್ಟಿಗೆ ಸೇರಿದವರು ಎಂದು ನೋಡಿದರೆ ತಿಳಿಯುತ್ತದೆ.

ಸಿಪಿಐ(ಎಂ)	26
ಸಿಪಿಐ	1
ಆರ್‌ಎಸ್‌ಪಿ	1
ಕಾಂಗ್ರೆಸ್ (ಇದರಲ್ಲಿ 6 ಜನ ಬಾಂಬ್ ತಯಾರು ಮಾಡುವಾಗ ಸತ್ತವರು)	8
ಎಸ್‌ಯುಸಿಐ	2
ತೃಣಮೂಲ	2
ಜಾರ್ಖಂಡ್ ಪಾರ್ಟಿ	2
ಒಟ್ಟು	42

ಸಿಪಿಐ(ಎಂ) ಮತ್ತು ಎಡರಂಗ ಹಿಂಸಾಚಾರವನ್ನು 'ಸರ್ಕಾರ'ದ ಬಲದಿಂದ ಹರಿಯಬಿಟ್ಟಿದ್ದರೆ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಹೇಗೆ ಸಾಯುತ್ತಾರೆ? ಹೆಚ್ಚು ಕಡಿಮೆ ಎಲ್ಲಾ ಹಿಂಸಾಚಾರ ನಡೆಸಿದ್ದು ಕಾಂಗ್ರೆಸ್ - ಬಿಜೆಪಿ - ತೃಣಮೂಲ ಗೂಂಡಾಗಳು. ಅದಕ್ಕೆ ಪ್ರತಿಕ್ರಿಯಿಸಿದ್ದಷ್ಟೇ ಸಿಪಿಐ(ಎಂ) ಮತ್ತು ಎಡರಂಗ. ಅತ್ಯಂತ ಸಂಯಮದಿಂದ ಇದ್ದರೂ, ವಿರೋಧ ಪಕ್ಷಗಳ ಹಿಂಸಾಚಾರ ತಾಳಲಾಗದೆ ಕೆಲವು ಕಡೆ ಮಾತ್ರ ಪ್ರತಿಕ್ರಿಯಿಸಿದರು.

ವಿರೋಧ ಪಕ್ಷಗಳು ಯಾಕೆ ಹಿಂಸಾಚಾರ ನಡೆಸಿದ್ದು? ಖಂಡಿತ ಸೋಲುತ್ತೇವೆ, ಮುಖಭಂಗವಾಗುತ್ತದೆ. ಎಂದು ಅವರಿಗೆ ಚುನಾವಣೆ ಪ್ರಚಾರದಲ್ಲಿ ತಿಳಿದಿತ್ತು. ಅದನ್ನು ಮುಚ್ಚಿಕೊಳ್ಳಲು ಮತ್ತು ಹತಾಶೆಯಿಂದ ಹಿಂಸೆಯ ನೆಪ ಮಾಡಿ ರಾಜ್ಯ ಸರ್ಕಾರ ಉರುಳಿಸಬಹುದು ಎಂಬ ದೂರದ ಆಸೆ.



'ಮಹಾನ್ ಜೂಟ್!'

ಚುನಾವಣಾ ಫಲಿತಾಂಶಗಳು

ಗ್ರಾಮಪಂಚಾಯತ್ ಸೀಟು ಗಳಿಕೆ

	ಒಟ್ಟು	ಸಿಪಿಐ(ಎಂ)	ಎಡರಂಗ	ಕಾಂಗ್ರೆಸ್	ತೃಣಮೂಲ	ಬಿಜೆಪಿ
2003	49,108	28,770	32,258	6702	6528	1490
1998	49,191	24,453	27,587	5962	9773	3830
ಶೇಕಡಾ ಸೀಟುಗಳು						
2003	100	58.59	65.69	13.65	13.29	3.03
1998	100	49.71	56.08	12.12	19.87	7.79

ಜಿಲ್ಲಾವಾರು ಗ್ರಾಮ ಪಂಚಾಯತ್ ಫಲಿತಾಂಶಗಳು

ಸೀಟುಗಳಿಕೆಯಲ್ಲಿ ಪ್ರತಿ ಪಕ್ಷದ ಅತ್ಯಂತ ಹೆಚ್ಚಿನ ಮತ್ತು ಕಡಿಮೆ ಸೀಟುಗಳಿಕೆಯ ಶೇಕಡಾ ಮತ್ತು ಆ ಜಿಲ್ಲೆಗಳ ಹೆಸರುಗಳನ್ನು ಈ ಕೆಳಗಿವೆ.

ಪಕ್ಷ	ಅತ್ಯಂತ ಹೆಚ್ಚು ಸೀಟು ಗಳಿಕೆ ಶೇಕಡಾ	ಜಿಲ್ಲೆ	ಅತ್ಯಂತಕಡಿಮೆ ಸೀಟುಗಳಿಕೆ ಶೇಕಡಾ	ಜಿಲ್ಲೆ
ಸಿಪಿಐ(ಎಂ)	78.00	ಹೂಗ್ಲಿ	39	ಮುರ್ಶಿದಾಬಾದ್
ಎಡರಂಗ	83.42	ಹೂಗ್ಲಿ	47.35	ಮುರ್ಶಿದಾಬಾದ್
ಕಾಂಗ್ರೆಸ್	46.62	ಮುರ್ಶಿದಾಬಾದ್	0.87	ಬಂಕುರಾ
ತೃಣಮೂಲ	29.93	ಪಶ್ಚಿಮ ಮೆದಿನಿಪುರ	1.17	ಮುರ್ಶಿದಾಬಾದ್
ಬಿಜೆಪಿ	9.16	ನಾಡಿಯ	1.10	ಪಶ್ಚಿಮ ಮೆದಿನಿಪುರ

ಪಂಚಾಯತ್ ಸಮಿತಿ ಸೀಟು ಗಳಿಕೆ

	ಒಟ್ಟು	ಸಿಪಿಐ(ಎಂ)	ಎಡರಂಗ	ಕಾಂಗ್ರೆಸ್	ತೃಣಮೂಲ	ಬಿಜೆಪಿ
2003	8497	5726	6308	1044	817	156
1998	8515	5160	5712	831	1439	328
ಶೇಕಡಾ ಸೀಟುಗಳು						
2003	100	67.39	74.24	12.29	9.62	1.84
1998	100	60.60	67.08	9.76	16.90	3.85

ಜಿಲ್ಲಾವಾರು ಪಂಚಾಯತ್ ಸಮಿತಿ ಫಲಿತಾಂಶಗಳು.

ಸೀಟುಗಳಿಕೆಯಲ್ಲಿ ಪ್ರತಿ ಪಕ್ಷದ ಅತ್ಯಂತ ಹೆಚ್ಚಿನ ಮತ್ತು ಕಡಿಮೆ ಸೀಟುಗಳಿಕೆಯ ಶೇಕಡಾ ಮತ್ತು ಆ ಜಿಲ್ಲೆಗಳ ಹೆಸರುಗಳಿವೆ.

ಪಕ್ಷ	ಅತ್ಯಂತ ಹೆಚ್ಚು ಸೀಟು ಗಳಿಕೆ ಶೇಕಡಾ	ಜಿಲ್ಲೆ	ಅತ್ಯಂತ ಕಡಿಮೆ ಸೀಟು ಗಳಿಕೆ. ಶೇಕಡಾ	ಜಿಲ್ಲೆ
ಸಿಪಿಐ(ಎಂ)	87.35	ಹೂಗ್ಲಿ	44.19	ಮುರ್ಶಿದಾಬಾದ್
ಎಡರಂಗ	91.19	ಬಂಕುರಾ	45.78	ಮುರ್ಶಿದಾಬಾದ್
ಕಾಂಗ್ರೆಸ್	49.07	ಮುರ್ಶಿದಾಬಾದ್	0.17	ಹೂಗ್ಲಿ
ತೃಣಮೂಲ	21.52	ಪ. ಮೆದಿಪುರ	0.57	ಮುರ್ಶಿದಾಬಾದ್
ಬಿಜೆಪಿ	7.03	ನಾಟಿಯಾ	0.17	ಹೂಗ್ಲಿ

ಜಿಲ್ಲಾ ಪಂಚಾಯತ್ ಸಮಿತಿ ಫಲಿತಾಂಶಗಳು

ಸೀಟು ಗಳಿಕೆ

	ಒಟ್ಟು	ಸಿಪಿಐ(ಎಂ)	ಎಡರಂಗ	ಕಾಂಗ್ರೆಸ್	ತೃಣಮೂಲ	ಬಿಜೆಪಿ
2003	712	546	617	68	16	2
1998	716	560	632	32	38	1
ಶೇಕಡಾ ಸೀಟು ಗಳಿಕೆ						
2003	100	76.69	86.66	9.55	2.25	0.28
1998	100	78.21	88.27	4.47	5.31	0.14

ಸೀಟು ಗಳಿಕೆಯಲ್ಲಿ ಪ್ರತೀ ಪಕ್ಷದ ಅತ್ಯಂತ ಹೆಚ್ಚಿನ ಮತ ಮತ್ತು ಅತ್ಯಂತ ಕಡಿಮೆ ಸೀಟು ಗಳಿಕೆಯ ಶೇಕಡಾವಾರು ಮತ್ತು ಆಯಾ ಜಿಲ್ಲೆಯ ಹೆಸರು ಈ ಕೆಳಗಿನಂತಿವೆ.

ಪಕ್ಷ	ಅತ್ಯಂತ ಹೆಚ್ಚು ಸೀಟು ಗಳಿಕೆ ಶೇಕಡಾ	ಜಿಲ್ಲೆ	ಅತ್ಯಂತ ಕಡಿಮೆ ಸೀಟು ಗಳಿಕೆ. ಶೇಕಡಾ	ಜಿಲ್ಲೆ
ಸಿಪಿಐ(ಎಂ)	95.74	ಹೂಗ್ಲಿ	38.33	ಮುರ್ಶಿದಾಬಾದ್
ಎಡರಂಗ	100.00	ಹೂಗ್ಲಿ	45.00	ಮುರ್ಶಿದಾಬಾದ್
ಕಾಂಗ್ರೆಸ್	55.00	ಮುರ್ಶಿದಾಬಾದ್	0	ಹಲವು ಜಿಲ್ಲೆಗಳು
ತೃಣಮೂಲ	6.67	ದ. ದಿನಾಜಪುರ	0	ಹಲವುಜಿಲ್ಲೆಗಳು
ಬಿಜೆಪಿ	3.03	ಮಾಲ್ಡಾ	0	ಹಲವು ಜಿಲ್ಲೆಗಳ

ವೆನೆಜುವೆಲಾ ಕ್ರಾಂತಿಗೆ ವರ್ಷ ತುಂಬಿದೆ

ಹಲವು ಸಂಚುಗಳ ನಡುವೆಯೂ ನೆಲೆನಿಂತ ವೆನಿಜುಲಾ ಕ್ರಾಂತಿಗೆ ಈಗ ಒಂದು ವರುಷ.ಆದರೆ ಅಪಾಯಗಳು ತಪ್ಪಿಲ್ಲ... ಹೆಜ್ಜೆ ಹೆಜ್ಜೆಗೂ

ದಕ್ಷಿಣ ಅಮೆರಿಕಾದ ವೆನೆಜುವೆಲಾ ಈಗ ...ಮೆರಿಕದ ಸಾಮ್ರಾಜ್ಯಶಾಹಿಗೆ ಪ್ರತಿರೋಧದ ...ೀಕವಾಗಿದೆ. ಒಂದು ವರ್ಷದ ಹಿಂದೆ ಅಲ್ಲಿನ ...ಲಿಟರಿ(ಅಮೆರಿಕನ್ ಸರ್ಕಾರದ ಪೂರ್ಣ ...ಬಲದೊಂದಿಗೆ) ಯ ಕೆಲವು ವಲಯಗಳು ...ಯತ್ನಿಸಿದ ಕ್ಷಿಪ್ರ ಕ್ರಾಂತಿಯನ್ನು ...ಲಗೊಳಿಸಲಾಯಿತು. ಆ ನಂತರ ಆ ದೇಶದ ...ಜನ ದೊಡ್ಡ ರೀತಿಯಲ್ಲಿ ಭಾಗವಹಿಸಿದ ಒಂದು ...ಯ ಕ್ರಾಂತಿಯಾಗಿದೆ ಎನ್ನಬಹುದು. ಇದಕ್ಕೆ ...ನ ಜನಪ್ರಿಯ ಅಧ್ಯಕ್ಷ ಚವೇಝ್ ...ಲಿವಾರಿಯನ್ ಕ್ರಾಂತಿ' ಎನ್ನುತ್ತಾರೆ. ಸೈಮನ್ ...ಲಿವರ್ 19ನೇ ಶತಮಾನದ ದಕ್ಷಿಣ ಅಮೆರಿಕದ ...ದ್ಧ ಸ್ವಾತಂತ್ರ್ಯ ಹೋರಾಟಗಾರ.

...ಲವಾದ ಮಿಲಿಟರಿ ಕ್ಷಿಪ್ರಕ್ರಾಂತಿ

ಅಧ್ಯಕ್ಷ ಚವೇಝ್ 2000 ರಲ್ಲಿ ಅಧ್ಯಕ್ಷರಾಗಿ ...ಯ್ಕೆಯಾದ ಮೇಲೆ ಹೊಸ ...-ಪರ ಸಂವಿಧಾನವನ್ನು ರಚಿಸಿ ...ಕ್ಕೆ ಜನಬೆಂಬಲ ಗಳಿಸಿದರು. ...ವರೆಗೆ ಇದ್ದ ಎರಡು - ಪಕ್ಷಗಳ ...ಸ್ಥೆ ಮುರಿದರು. ವೆನೆಜುವೆಲಾ ...ತ್ತಿನಲ್ಲಿ 5ನೇ ಅತಿದೊಡ್ಡ ತೈಲ ...ಪಾದಕ ದೇಶವಾಗಿದ್ದು ಉತ್ತಮ ...ಸಮೂಲಗಳನ್ನು ಹೊಂದಿದೆ. ...ತೈಲ ಕೈಗಾರಿಕೆ ಒಂದು ಸಣ್ಣ ...ನ ಕಪಿಮುಷ್ಟಿಯಲ್ಲಿದ್ದು ಅವರು ...ಗೆ ಮತ್ತು ಅಮೆರಿಕದ ಹಿತಾಸಕ್ತಿಗಳಿಗೆ ಮಾತ್ರ ...ನ್ನು ವಿನಿಯೋಗಿಸುತ್ತಾರೆ. ಈ ದುಷ್ಟಕೂಟದ ...ನು ಮುರಿದಿದ್ದು ಚವೇಝ್ ಅವರ ಒಂದು ...ಧನೆ. ಇದಲ್ಲದೆ ಆ ದೇಶದ ಶೇಕಡಾ 1 ...ಮಾಲಕರು ಉಳಲು ಯೋಗ್ಯ ಜಮೀನಿನ ...ಕಡಾ 60 ನ್ನು ಹೊಂದಿದ್ದಾರೆ. ಈ ಭೂಮಿಯನ್ನು ...ತ ರೈತರಿಗೆ ಹಂಚಲು ಚವೇಝ್ ...ಂದಾಗಿದ್ದಾರೆ.

ಇದನ್ನು ಸ್ವಾಭಾವಿಕವಾಗಿಯೇ ವೆನೆಜುವೆಲಾದ ...ುವ ವರ್ಗಗಳು ಸಹಿಸಲಿಲ್ಲ. ಕಳೆದ ಏಪ್ರಿಲ್ ...14 ರಂದು ಕೆಲವು ಮಿಲಿಟರಿ ಅಧಿಕಾರಿಗಳು ...ವೇಝ್‌ರನ್ನು ಬಂಧಿಸಿ ಕ್ಷಿಪ್ರಕ್ರಾಂತಿಗೆ ಪ್ರಯತ್ನ ...ಸಿದರು. ವೆನೆಜುವೆಲಾದ ಕೈಗಾರಿಕೋದ್ಯಮಿ ...ಘಟನೆಯ ಅಧ್ಯಕ್ಷ ಕಾರ್ಮೊನಾ ತಾನೇ ಅಧ್ಯಕ್ಷ ...ದು ಘೋಷಿಸಿಕೊಂಡ. ಅಧ್ಯಕ್ಷ ಚವೇಝ್ ...-ವಿರೋಧ (ಏಪ್ರಿಲ್ 11 ರಂದು) ...ದರ್ಶನಕಾರರು ಘರ್ಷಣೆಯಲ್ಲಿ ತೊಡಗಿ ...ಸಾಚಾರವಾದದ್ದನ್ನು ಅವರು ...ವಾಗಿಸಿಕೊಂಡಿದ್ದರು.

ಆದರೆ ವೆನಿಜುವೆಲಾದ ಲಕ್ಷಾಂತರ ಬಡಜನ, ...ಲಿಟರಿಯ ಹಲವು ಅಧಿಕಾರಿಗಳು, ಸಾಮಾನ್ಯ ...ಕರು ಚವೇಝ್ ಬೆಂಬಲಕ್ಕೆ ನಿಂತರು. ಎರಡೇ ...ದಲ್ಲಿ ಕ್ಷಿಪ್ರಕ್ರಾಂತಿ ವಿಫಲವಾಯಿತು. ಅಧ್ಯಕ್ಷ ...ವೇಝ್‌ರನ್ನು ಮಿಲಿಟರಿ ಅಧಿಕಾರಿಗಳು ಬಿಡುಗಡೆ ...ಡಬೇಕಾಯಿತು. ಇದು 'ಬೊಲಿವಾರಿಯನ್ ...ತಿ'ಗೆ ಮೊದಲನೆಯ ಪರೀಕ್ಷೆಯಾಗಿತ್ತು.

...ಲಿವಾರಿಯನ್ ಸರ್ಕಲ್'ಗಳು

ಇದು ಸಾಧ್ಯವಾಗಿದ್ದು ವೆನಿಜುವೆಲಾದ ವಿಶಿಷ್ಟ ...ಸಂಘಟನೆಗಳ ಬಲದಿಂದ. ಸುಮಾರು 10 ...ದುಡಿಯುವ ಜನ ದೇಶಾದ್ಯಂತ ಸುಮಾರು ...ಸಾವಿರಕ್ಕೂ ಹೆಚ್ಚು 'ಬೊಲಿವಾರಿಯನ್ ...ರ್ಕಲ್'ಗಳು ಎಂಬ ರೂಪದಲ್ಲಿ ...ಘಟಿತರಾಗಿದ್ದಾರೆ. ರೈತ-ಕಾರ್ಮಿಕರ ಮತ್ತು ...ಹೊರೆಯ ದುಡಿಯುವ ಜನತೆಯ ...ಘಟನೆಗಳಿವು. ಬೊಲ್ಶೆವಿಕ್ ಕ್ರಾಂತಿಯ ...ಯದಲ್ಲಿ ಇದ್ದ ರೈತ-ಕಾರ್ಮಿಕರ-ಸೈನಿಕರ ...ಯತ್' ಗಳನ್ನು ನೆನಪಿಸುವಂತಹ ...ಟನೆ ಇದು. ಬೊಲ್ಶೆವಿಕ್ ಕ್ರಾಂತಿ ನಡೆಸಿ, ಅದನ್ನು ಕಾಪಾಡಿಕೊಳ್ಳುವುದರಲ್ಲಿ ಈ 'ಸೋವಿಯತ್' ಗಳು ಪ್ರಮುಖ ಪಾತ್ರ ವಹಿಸಿದ್ದನ್ನು ನೆನಪಿಸಿಕೊಳ್ಳಬಹುದು. ಬೋಲಿವಾರಿಯನ್ ಸರ್ಕಲ್‌ಗಳು ಸ್ವಯಂಸ್ಫೂರ್ತಿಯಾಗಿ ಸಂಘಟಿತರಾಗಿದ್ದರೂ, ಅಧ್ಯಕ್ಷ ಚವೇಝ್ ಅವುಗಳಿಗೆ ಪ್ರೋತ್ಸಾಹ ನೀಡಿದ್ದಲ್ಲದೆ ಅವುಗಳ ಮೇಲೆ ಅವಲಂಬಿತರಾಗಿದ್ದಾರೆ. ದಕ್ಷಿಣ ಅಮೆರಿಕಾದ ಇತರ ಹಲವು ರಾಷ್ಟ್ರೀಯವಾದಿ (ಸಾಮ್ರಾಜ್ಯಶಾಹಿ-ವಿರೋಧಿ) ಸರ್ಕಾರಗಳು, ಅಧ್ಯಕ್ಷರುಗಳಿಗೂ ವೆನೆಜುವೆಲಾಕ್ಕೂ ಇರುವ ವ್ಯತ್ಯಾಸಗಳು ಇದು. ಇಂತಹ ಹಲವು ರಾಷ್ಟ್ರೀಯವಾದಿಗಳು ರೈತ-ಕಾರ್ಮಿಕರ ಪರವಾಗಿರುವುದಿಲ್ಲ. ಅವರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಪ್ರಯತ್ನಿಸುವುದಿಲ್ಲ.

ಲಾಕ್‌ಔಟ್ - ಎರಡನೇ ಪರೀಕ್ಷೆ



ಶರತ್‌ಚಂದ್ರ

ಈ ರೀತಿಯ ಸರ್ಕಾರವನ್ನು ಆ ದೇಶದ ಆಳುವ ವರ್ಗಗಳಾಗಲೀ ಅಮೆರಿಕನ್ ಸಾಮ್ರಾಜ್ಯಶಾಹಿಯಾಗಲಿ ಸಹಿಸಿತೆ? ಚಿಲಿಯಲ್ಲಿ ಸಫಲವಾಗಿ ಬಳಸಲಾದ ವ್ಯೂಹ, ತಂತ್ರಗಳನ್ನು ಸಿಐಎ ವೆನೆಜುವೆಲಾದಲ್ಲೂ ಬಳಸಲು ಪ್ರಯತ್ನಿಸಿತು. ತೈಲ ದೇಶದ ಆರ್ಥಿಕದ ಬೆನ್ನೆಲುಬು. ಅದನ್ನು ಮುರಿದು ಸರ್ಕಾರವನ್ನು ಮಣಿಸಲು ಪ್ರಯತ್ನ ನಡೆಯಿತು. ತೈಲ ಕಾರ್ಪೊರೇಷನ್ ಅಧಿಕಾರ ಮಂಡಳಿ ಮತ್ತು ಸಿಟಿಯು ಎಂಬ ಭ್ರಷ್ಟ ಯೂನಿಯನ್ ನಾಯಕತ್ವ ಪಿತೂರಿ ಹೂಡಿ 'ತೈಲ ಬಂದ್' ಮುಷ್ಕರಕ್ಕೆ ಕರೆ ನೀಡಿತು. ನಿಜವಾಗಿಯೂ ಇದು ಮುಷ್ಕರವಾಗಿರಲಿಲ್ಲ. ಲಾಕೌಟ್ ಆಗಿತ್ತು. ಯಾಕೆಂದರೆ ಅಧಿಕಾರ ಮಂಡಳಿ ಮತ್ತು ಯೂನಿಯನ್ ನಾಯಕರು ತೈಲ ಘಟಕಗಳಿಗೆ ಬೀಗ ಜಡಿದು ಕಾರ್ಮಿಕರು ಕೆಲಸಕ್ಕೆ ಹಾಜರಾಗದಂತೆ ಮಾಡಿದ್ದರು. ವೆನಿಜುವೆಲಾದ ಶೇಕಡಾ 60 ಬಜೆಟ್ ತೈಲದ ಮೇಲೆ ಆಧಾರಿತವಾಗಿದೆ. ಕೆಲವೇ ವಾರಗಳಲ್ಲಿ ತೈಲ ಉತ್ಪಾದನೆ ಅದರ ಮೊದಲಿನ ಪ್ರಮಾಣದ ಹತ್ತನೇ ಒಂದು ಭಾಗಕ್ಕೆ ಇಳಿಯಿತು. ಇದರ ಜತೆಗೆ ದೇಶವ್ಯಾಪಿ 'ಬಂದ್' ಗೆ ಕರೆ ಕೊಡಲಾಯಿತು. ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು, ವ್ಯಾಪಾರಿಗಳು ಇದರಲ್ಲಿ ಭಾಗವಹಿಸಿದರು. ಪ್ರತಿದಿನ ಪುನಃ ವೆನೆಜುವೆಲಾದ ರಾಜಧಾನಿಯಲ್ಲಿ ಚವೇಝ್ ಪರ- ವಿರೋಧ ರ್‍ಯಾಲಿಗಳು ಆರಂಭ ವಾದವು. ದೇಶದ ಮತ್ತು ಅಮೆರಿಕನ್ ಸುದ್ದಿ ಮಾಧ್ಯಮಗಳು ದೇಶದ ಅರಾಜಕತೆಯತ್ತ ಹೋಗುತ್ತಿದೆ. ಅಂತರ್‌ರಾಷ್ಟ್ರೀಯ ಮಧ್ಯ ಪ್ರವೇಶ ಅಗತ್ಯ. ಮರು ಚುನಾವಣೆ ಅಗತ್ಯ ಎಂಬ ಒತ್ತಾಯ ತರಹತ್ತಿದರು. ಸುಮಾರು ಮೂರು ತಿಂಗಳ ನಂತರ ತೈಲ 'ಲಾಕೌಟ್' ಪೂರ್ಣವಾಗಿ ಬಿದ್ದು ಹೋಯಿತು. 'ಬಂದ್' ಅದಕ್ಕಿಂತ ಮೊದಲೇ ಬಿದ್ದು ಹೋಗಿತ್ತು. ಮಾರ್ಚ್ ಮಧ್ಯದ ಹೊತ್ತಿಗೆ ಚವೇಝ್ ರಾಷ್ಟ್ರೀಯ ಗಾರ್ಡ್ ನೆರವಿನಿಂದ ಬಹುಸಂಖ್ಯಾತ ತೈಲ ಕಾರ್ಮಿಕರ ಬೆಂಬಲದಿಂದ ತೈಲ ಉತ್ಪಾದನೆ 'ಲಾಕೌಟ್' ಮೊದಲಿನ ಪ್ರಮಾಣಕ್ಕೆ ಬರುವಂತೆ ಮಾಡಿದ್ದ. ಅಗತ್ಯ ವಸ್ತುಗಳ ಪೂರೈಕೆ ಮಾರಾಟಕ್ಕೂ ಕೆಲವು ಕ್ರಮಗಳನ್ನು ಕೈಗೊಂಡಾಗ, ಸಣ್ಣ-ಮಧ್ಯಮ ಕೈಗಾರಿಕೋದ್ಯಮಿ ವ್ಯಾಪಾರಿಗಳು ತಮ್ಮ 'ಬಂದ್' ಕೈಬಿಟ್ಟರು. ಅವರೂ ಆಗಲೇ ಸುಸ್ತಾಗಿದ್ದರು. ವೆನೆಜುವೆಲಾದ ಕ್ರಾಂತಿ ಎರಡನೇ ಪರೀಕ್ಷೆಯಲ್ಲೂ ಪಾಸಾಗಿತ್ತು ಪೂರ್ಣ ಅಂಕಗಳೊಂದಿಗೆ. ಇರಾಕ್ ಯುದ್ಧದ ಸಮಯದಲ್ಲಿ ಅಮೆರಿಕಕ್ಕೆ ವೆನೆಜುವೆಲಾ ತೈಲದ ಅಗತ್ಯವೂ ಇತ್ತು. ಇದೂ ತೈಲ ಲಾಕೌಟ್ ಬಿದ್ದು ಹೋಗಲು ಒಂದು ಕಾರಣವಾಯಿತು.

ಆದರೆ 'ಬೊಲಿವಾರಿಯನ್ ಕ್ರಾಂತಿ'ಗೆ



ಚವೇಝ್

ಅಪಾಯವೆಲ್ಲಾ ಮಾಯವಾಗಿದೆ ಎಂಬ ಭ್ರಮೆ ಯಾರಿಗೂ ಇಲ್ಲ. 'ಬೊಲಿವಾಲಿಯನ್ ಸರ್ಕಲ್' ಗಳು ಪ್ರಬಲವಾಗುವುದು, ಪ್ರಬುದ್ಧವಾಗುವುದು ಇರುವ ಆಶಾಕಿರಣ. ವೆನೆಜುವೆಲಾಕ್ಕೆ ದಕ್ಷಿಣ ಅಮೆರಿಕಾದ ಇತರ ದೇಶಗಳ, ಜನಗಳ ರಾಜಕೀಯ ಬೆಂಬಲ ಅಗತ್ಯ. ವೆನೆಜುವೆಲಾ ಕ್ರಾಂತಿಯ ಸೌಹಾರ್ದ ಬೆಂಬಲಕ್ಕೆ ಇಡೀ ಜಗತ್ತಿನ ಪ್ರಗತಿಪರ ಜನತೆ, ಸಂಘಟನೆಗಳು, ರಾಜಕೀಯ ಶಕ್ತಿಗಳು ನಿಲ್ಲಬೇಕು.

ಪ್ಯಾಲೆಸ್ಟೇನ್‌ಗೆ ಅಮೆರಿಕದ 'ರೋಡ್‌ಮ್ಯಾಪ್'

ಈ 'ರೋಡ್ ಮ್ಯಾಪ್' ಪ್ಯಾಲೆಸ್ಟೇನ್ ಉದಯದತ್ತವೋ ಅಥವಾ ಮಹಾನ್ ಇಸ್ರೇಲ್‌ನತ್ತವೋ?

ಇರಾಕ್ ಮೇಲೆ ಯುದ್ಧಕ್ಕೆ ಅರಬ್ ಬೆಂಬಲ ಗಳಿಸಲು ಅಮೆರಿಕ, ಬ್ರಿಟನ್‌ಗಳು ಯುರೋಪಿಯನ್ ಒಕ್ಕೂಟ, ರಶ್ಯಾ ಮತ್ತು ವಿಶ್ವಸಂಸ್ಥೆ ಬೆಂಬಲದಿಂದ ಪ್ಯಾಲೆಸ್ಟೇನ್ ಸಮಸ್ಯೆ ಪರಿಹರಿಸಲು ಒಂದು 'ರೋಡ್ ಮ್ಯಾಪ್' ತಯಾರಿಸಿದ್ದಾರೆ. ಆದರೆ ಈ 'ರೋಡ್ ಮ್ಯಾಪ್' ಹಿಂದಿನ ಹಲವಾರು ಒಪ್ಪಂದಗಳಂತೆ ಕಾಗದದ ಮೇಲೆ ಉಳಿದೀತೆ? ಇಸ್ರೇಲಿ ಝಿಯೋನಿಸ್ಟ್ ಕ್ರಮಗಳನ್ನು ಮುಂದುವರಿಸಲಿಕ್ಕೆ ಒಂದು ನೆಪವಾಗಿ ಉಳಿದೀತೆ! ಇದು ಪ್ಯಾಲೆಸ್ಟೇನ್ ಜನತೆಯ ಸಂಶಯ.

ಈ ರೋಡ್ ಮ್ಯಾಪ್ ಪ್ರಕಾರ ಎರಡೂ ಕಡೆ ಹಿಂಸಾಚಾರ ಕಡಿಮೆ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು. ಮೂರು ವರ್ಷಗಳಲ್ಲಿ ಪ್ಯಾಲೆಸ್ಟೇನ್ ದೇಶ ಉದಯವಾಗಬೇಕು. ಇಸ್ರೇಲ್ ಇದಕ್ಕೆ ಖಂಡಿತ ಒಪ್ಪುವುದಿಲ್ಲ. ಅಮೆರಿಕ, ಬ್ರಿಟನ್, ಯುರೋಪಿನ್ ಒಕ್ಕೂಟ, ರಶ್ಯಾಗಳು ಇಸ್ರೇಲ್ ಮೇಲೆ ಸಾಕಷ್ಟು ಅಂತರ್‌ರಾಷ್ಟ್ರೀಯ ಒತ್ತಡ ತರದಿದ್ದರೆ ಅದು ಸಾಧ್ಯವಿಲ್ಲ. ಅವು ಅಂತಹ ಒತ್ತಡ ತಂದಾವೆ?

ಈ ನಡುವೆ ಅಮೆರಿಕ ಸರ್ಕಾರ ತನ್ನ ಇಬ್ಬಂದಿತನ ಮುಂದುವರಿಸಿದೆ. ಇಸ್ರೇನ್‌ನ ವಲಸೆಗಾರರು ಪ್ಯಾಲೆಸ್ಟನ್ ಪ್ರದೇಶಗಳಲ್ಲಿ ಬಂದು ಬಲವೂರ್ವಕವಾಗಿ ವಾಸಿಸುವುದನ್ನು (ಇಸ್ರೇಲಿ ಸರ್ಕಾರದ ಕುಮ್ಮಕ್ಕಿನಿಂದ) ಮುಂದುವರಿಸಿವೆ. ಇಸ್ರೇಲ್ ಪ್ಯಾಲೆಸ್ಟೇನ್ ಪ್ರದೇಶಗಳ ಮೇಲೆ ದಾಳಿ - ಹಿಂಸಾಚಾರ ಮುಂದುವರಿಸಿದೆ. ಇದಕ್ಕೆ ಹಿಂದಿನಿಂದ ಅಮೆರಿಕ ಎಲ್ಲಾ ತಾಂತ್ರಿಕ-ಮಿಲಿಟರಿ ಬೆಂಬಲ ಕೊಡುತ್ತಿದೆ. ಅಧ್ಯಕ್ಷ ಅರಾಫತ್‌ಗೆ ಆತನ ಅಧ್ಯಕ್ಷೀಯ ನಿವಾಸ ಬಿಟ್ಟು ಯಾವುದೇ ಅಂತರ್‌ರಾಷ್ಟ್ರೀಯ ಪ್ರವಾಸಕ್ಕೆ ಹೋಗದಂತೆ ದಿಗ್ಬಂಧನ ಹೇರಿಸಿದೆ. ಆದರೆ



ಅಮೆರಿಕ-ಇಸ್ರೇಲ್‌ಗಳು ಈ ಹಿಂಸಾಚಾರಕ್ಕೆ ಪ್ರತಿಕ್ರಿಯೆಯಾಗಿ ಪ್ಯಾಲೆಸ್ಟೇನ್ ತೀವ್ರಗಾಮಿಗಳು ಇಸ್ರೇಲಿನಲ್ಲಿ ನಡೆಸುವ ಭಯೋತ್ಪಾದಕ ಕೃತ್ಯಗಳ ಬಗ್ಗೆ ದೊಡ್ಡ ಗದ್ದಲ ಮಾಡುತ್ತದೆ. ಅದು ಮೊದಲು ನಿಲ್ಲಬೇಕು ಎನ್ನುತ್ತದೆ ಅಮೆರಿಕ.

ಅದಕ್ಕಾಗಿ ಅರಾಫತ್ ಸರ್ಕಾರದ ಬರಲು ಅಗತ್ಯವಾದ ಎಂದು ಕೆಲವು ಬುಶ್ ಸರ್ಕಾರದ ಪ್ರತಿನಿಧಿಗಳು ಹೇಳುತ್ತಿದ್ದಾರೆ. ಅರಾಫತ್ ಪ್ರಧಾನಿ ಒಬ್ಬನನ್ನು ನೇಮಿಸಲು ಒತ್ತಡ ಹಾಕಿ, ಆತನ ಜತೆ ಮಾತುಕತೆ ಮುಂದುವರೆಸುವೆವು ಎನ್ನುತ್ತಾರೆ. ಆ ಪ್ರಧಾನಿ ಮಂತ್ರಿಮಂಡಲ ನೇಮಿಸುವಾಗಲೂ ಹಸ್ತಕ್ಷೇಪ ಮಾಡಿದ್ದಾರೆ. ಪ್ಯಾಲೆಸ್ಟೇನ್ ತೀವ್ರಗಾಮಿ ಗುಂಪುಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ನಿರ್ದಿಷ್ಟ ವ್ಯಕ್ತಿಯೊಬ್ಬನನ್ನು ಭದ್ರತಾ ಮಂತ್ರಿ ಮಾಡಬೇಕು ಎನ್ನುತ್ತಾರೆ. ಇಂತಹ ಮಧ್ಯ ಪ್ರವೇಶದಿಂದ ಹೊಸಮಂತ್ರಿ ಮಂಡಲ ರಚನೆ ಒಂದು ತಿಂಗಳಷ್ಟು ತಡವಾಯಿತು.

ಆದರೆ ಈ ನಡುವೆ ಇಸ್ರೇಲ್ ತನ್ನ ಎಲ್ಲಾ ಹಿಂಸಾಚಾರಗಳನ್ನು ಅವಿರತವಾಗಿ ಮುಂದುವರಿಸಿದೆ. ಇಸ್ರೇಲ್ ಈ 'ರೋಡ್ ಮ್ಯಾಪ್'ನ ಅಂಶಗಳನ್ನು ಒಪ್ಪುವ, ಜಾರಿ ಮಾಡುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ಮಾತ್ರವಲ್ಲ ಅದನ್ನು ಜಾರಿ ಮಾಡಲು ಅಮೆರಿಕ ಒತ್ತಡ ಹಾಕುವ ಲಕ್ಷಣಗಳು ಇಲ್ಲ. ತೀವ್ರಗಾಮಿ ಪ್ರತಿರೋಧ ಹತ್ತಿಕ್ಕಿ (ಅಮೆರಿಕದ ಮೂಲಕ ಪ್ಯಾಲೆಸ್ಟೇನ್ ಸರ್ಕಾರದ ಮೇಲೆ ಒತ್ತಡ ಬಳಸಿ) ಅಷ್ಟರೊಳಗೆ ಪ್ಯಾಲೆಸ್ಟೇನ್ ಪ್ರದೇಶಗಳನ್ನೆಲ್ಲಾ ವಲಸೆಗಾರರ ಮೂಲಕ ಕಬಳಿಸಿ 'ಮಹಾನ್ ಇಸ್ರೇಲ್' ರಚಿಸುವ ಕನಸು ಇಸ್ರೇಲಿ ಆಳುವವರ್ಗಗಳದ್ದು. ಇದೇ ಅಮೆರಿಕಕ್ಕೆ ಬೇಕಾಗಿರುವುದು. ಸಿರಿಯಾ ಮತ್ತು ಇರಾನ್‌ಗಳಲ್ಲೂ ಇರಾಕಿನಂತೆ ಸರ್ಕಾರ ಬದಲಾವಣೆ ಅಗತ್ಯ ಇದೆ ಎಂದು ಇಸ್ರೇಲ್ ಪ್ರತಿದಿನ ಹೇಳುತ್ತಿದೆ. ಅಮೆರಿಕದ ಬುಶ್ ಸರ್ಕಾರದ ಹಲವು ಪ್ರತಿನಿಧಿಗಳೂ ಇದನ್ನೇ ಹೇಳುತ್ತಿದ್ದಾರೆ. ಇವೆಲ್ಲಾ 'ಪ್ಯಾಲೆಸ್ಟೇನ್ ರೋಡ್ ಮ್ಯಾಪ್' ಇನ್ನೊಂದು ನಾಟಕ ಎನ್ನುವ ಸಾಧ್ಯತೆಯನ್ನು ಹೆಚ್ಚಿಸಿದೆ.

ಆದರೆ ಇದನ್ನು ಪ್ಯಾಲೆಸ್ಟೇನ್ ಜನತೆ ಕಣ್ಣುಮುಚ್ಚಿ ಸ್ವೀಕರಿಸುತ್ತಿಲ್ಲ. ಇಸ್ರೇಲಿ ಹಿಂಸಾಚಾರಕ್ಕೆ ಪ್ರತಿರೋಧ 'ಇಂತಿಫದಾ' ಮುಂದುವರೆದಿದೆ. ●

ನಮ್ಮ ನಿಮ್ಮ ಸಂವಾದ

ಕಿರು - ತೆರೆ

ಮಹಿಳೆಯರು ಪುರುಷರನ್ನು ಕಾಡಲೆಂದೇ ಹುಟ್ಟಿದ ಕೀಟಗಳೇ?

ಇತ್ತೀಚೆಗೆ ಟಿ.ವಿ.ಯಲ್ಲಿ ಬರುವ ಬಹುತೇಕ ಕನ್ನಡ ಧಾರಾವಾಹಿಗಳ ಕಥಾವಸ್ತುಗಳು ಮಹಿಳೆಯರನ್ನು ಸುತ್ತುವರೆದಿರುವ ವಿಷಯ ತಮಗೆಲ್ಲಾ ಗೊತ್ತೇ ಇದೆ. ಅದರಲ್ಲೂ ಈ ಕಥಾವಸ್ತುಗಳ ಪ್ರಮುಖ ಸೂತ್ರ ಇಬ್ಬರು ಹೆಂಡಿರು, ಇಬ್ಬರು ಪ್ರೇಯಸಿಯರು, ಎರಡು ಸಂಸಾರಗಳ ಒಡೆಯನದು ಎಂಬುದನ್ನು ತಾವು ಖುದ್ದಾಗಿ ನೋಡುತ್ತಿದ್ದೀರಿ.

ಇದೇ ಜಾಡಿನ ಕವಲುದಾರಿ, ಉಯ್ಯಾಲೆ, ಕಥೆ, ಚಂದ್ರಿಕ, ಪರ್ವ, ಕನ್ನಡಿ ಮುಂತಾದಂತಹ ಮೆಗಾ ಧಾರವಾಹಿಗಳು ಜನಪ್ರಿಯ ಧಾರಾವಾಹಿಗಳೆಂಬ ಸ್ವಯಂ ಘೋಷಿತ ಹಣೆಪಟ್ಟಿಯೊಂದಿಗೆ ಏನನ್ನು ಸಾಧಿಸಲು ಹೊರಟಿವೆ ಎಂಬುದು ಎಲ್ಲರ ಪ್ರಶ್ನೆ? ಏಕೆಂದರೆ ಮನ್ವಂತರ ಹಾಗೂ ಗೃಹಭಂಗ ಧಾರಾವಾಹಿಗಳಿಗೆ ಸಿಕ್ಕಿರುವ ಪ್ರಶಂಸೆ, ಮಾನ್ಯತೆಯನ್ನು ಉಳಿದ ಯಾವ ಧಾರಿವಾಹಿಗಳು ಪಡೆದಿಲ್ಲವೆಂದ ಮೇಲೆ ತಾತನ ಕಾಲದ ಸೂತ್ರವನ್ನನುಸರಿಸಿ ಹೆಂಗಸರ ಮೇಲೆ ಸವಾರಿ ಮಾಡುವ ಕಸರತ್ತು ಯಾಕಾಗಿ. ಜನರ ಆಸೆ, ಅಭಿರುಚಿ, ಮನ್ನಣೆಯನ್ನನುಸರಿಸಿ ಧಾರಾವಾಹಿಗಳನ್ನು ನಿರ್ಮಿಸುತ್ತೇವೆಂದು ಹೇಳಿಕೊಳ್ಳುವ ನಿರ್ಮಾಪಕರು, ಪ್ರಸಾರಕರು ಜನ ಒಪ್ಪದ ಹಳಸಲನ್ನು ಉಣಬಡಿಸುವುದೇಕೆ?

ಅಪರಾಧದ ಪಟ್ಟಿಯ ಧಾರವಾಹಿಗಳು

ಪ್ರಜ್ಞಾವಂತ ಸಮುದಾಯ ತಿರಸ್ಕರಿಸಿರುವ ಹಾಗೂ ಕಾನೂನು ಅಪರಾಧವೆಂದು ಪರಿಗಣಿಸಿರುವ ದ್ವಿಪತ್ನಿತ್ವದಂತಹ ಅನಾರೋಗ್ಯಪೂರಿತ ಹೂರಣವನ್ನು ಆಧುನಿಕತೆಯ ಸೋಗನ್ನು ಹೊದಿಸಿ ಮಾರಾಟ ಮಾಡುತ್ತಿರುವ ಈ ಜನ ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸಬಹುದೇ ಹೊರತು ಮಹಿಳೆಯರನ್ನು ಪ್ರತಿನಿಧಿಸಲು ಸಾಧ್ಯವಿಲ್ಲ.

ಪುರುಷ ಸಮುದಾಯದ ಮುಂದಿರುವ ಬಹುದೊಡ್ಡ ಸವಾಲು 'ಸವತಿಯರ' ಜಗಳವನ್ನು ಬಗೆಹರಿಸುವುದೇ ಆಗಿದೆ ಎಂದು ಸಾರುವ ಈ ಧಾರಾವಾಹಿಗಳು, ಮಹಿಳೆಯರು ಪುರುಷರ ಕಾಡಲೆಂದೇ ಹುಟ್ಟಿರುವ ಕೀಟಗಳೆಂಬಂತೆ ಬಿಂಬಿಸುತ್ತಿವೆ.




ದುಷ್ಟ ಅತ್ತೆ-ವಿನೀತ ಸೋಸೆ, ಬಜಾರಿ ಸೊಸೆ ಅಸಹಾಯಕ ಅತ್ತೆ, ಪರಸ್ಪರ ವಿಷ ಉಗುಳುವ ಸವತಿಯರು ಇವರ ನಡುವೆ ಸಿಲುಕಿ ವಿಲಿವಿಲಿ ಒದ್ದಾಡುವ ಅಮಾಯಕ ಗಂಡಸರು. ಇದೇ ರಸರಹಿತ ಸಾರವನ್ನು ನಾಲ್ಕುನೂರು ಐದುನೂರು ಕಂತುಗಳಲ್ಲಿ ತುರುಕುತ್ತಾ ಹೋದರೆ ಇವುಗಳ ಪ್ರಭಾವಕ್ಕೊಳಗಾಗುವ ಮಹಿಳೆಯರು, ಕುಟುಂಬಗಳು, ಕೌಟುಂಬಿಕ ಸಂಬಂಧಗಳು ಏನಾಗಬಹುದು?

ಶ್ರೀಮಂತಿಕೆಯ ಮದದಲ್ಲಿ ತೇಲಾಡುವ, ಅಟ್ಟಹಾಸ ಮೆರೆಯುವ ಮಧ್ಯಮ ವಯಸ್ಸಿನ ಮಹಿಳೆಯರು ಕೆಲ ಧಾರಾವಾಹಿಗಳ ಹಿರೋಇನ್‌ಗಳು. ಇವರ ಸುತ್ತ ಗಿರಕಿ ಹೊಡೆಯುವ ಇತರೆ ಪಾತ್ರಗಳು ರಾಣಿ ಜೇನನ್ನು ಸುತ್ತುವರೆಯುವ ಕಾರ್ಮಿಕ ಹುಳುಗಳು.

ಗ್ರಾಹಕ ಸಂಸ್ಕೃತಿಯ ನೇರ ಪ್ರಸಾರದ ಈ ಧಾರಾವಾಹಿಗಳು ಸಮಾಜ ಕಟ್ಟುವಲ್ಲಿನ ಮಹಿಳೆಯರ ಪಾತ್ರವನ್ನು ಸಂಪೂರ್ಣವಾಗಿ ಅಲಕ್ಷ್ಯ ಮಾಡಿರುವುದರಿಂದ ಸಮಾಜಕ್ಕೆ, ಕಾನೂನಿಗೆ ವಿರುದ್ಧವಾಗಿರುವುದರಿಂದ ಅಪರಾಧದ ಪಟ್ಟಿಯಲ್ಲಿ ಇವುಗಳನ್ನು ಸೇರಿಸಿ ಬಹಿಷ್ಕಾರದ ಶಿಕ್ಷೆ ವಿಧಿಸೋಣವೆ ?

- ಪ್ರಭಾ ಎನ್

ಫ್ಯಾಸಿಸ್ಟ್ ಪಿಡುಗು



ಖುಷವಂತ್‌ಸಿಂಗ್ ಭಾರತದ ಅತ್ಯಂತ ಸೂಕ್ಷ್ಮ ಮತ್ತು ಸಾಮಾಜಿಕ ಕಳಕಳಿಯುಳ್ಳ ಲೇಖಕ. ಅವರು ಕೋಮುವಾದಿ ಸಂಘಗಳ ಬಗ್ಗೆ ಬರೆದ ಈ ತುಣುಕು ಸಂಘ ಪರಿವಾರ ಭಾರತದ ಆರೋಗ್ಯಕ್ಕೆ ಎಂತಹ ಗಂಡಾಂತರಕಾರಿಗಳು ಎಂಬುದನ್ನು ಸ್ಫಟಿಕದಷ್ಟು ಸ್ಪಷ್ಟವಾಗಿ ವಿವರಿಸುತ್ತದೆ ಈ ಲೇಖನ.

ಕೆಲವೇ ದಿನಗಳು ಹಿಂದಿನವರೆಗೆ ನಾನು ನಮ್ಮ ದೇಶದಲ್ಲಿ ಭುಗಿಲೆದ್ದಿರುವ ಫ್ಯಾಸಿಸ್ಟ್ ಗಂಡಾಂತರವನ್ನು ನನ್ನ ರೋಗಪೀಡಿತ ಮನಸ್ಸಿನ ವಿಚಾರವೆಂದು ಹಗುರವಾಗಿ ಪರಿಗಣಿಸುತ್ತಿದ್ದೆ. ಈಗ ಹಾಗೆ ಪರಿಗಣಿಸುವಂತಿಲ್ಲ. ಭಾರತೀಯ ಮೂಲದ ಫ್ಯಾಸಿಸಂ ನಮ್ಮ ಮನೆ ಹೊಸ್ತಿಲಿಗೂ ಕಾಲಿಟ್ಟಿದೆ. ಇದರ ಮುಖ್ಯ ಹರಿಕಾರ ದೇಶದ ಉಪ ಪ್ರಧಾನಿ ಎಲ್.ಕೆ.ಅಡ್ವಾನಿ ಅವರು ಎಮರ್ಜೆನ್ಸಿ ಕಾಲದಲ್ಲಿ ಜೈಲಿನಲ್ಲೇ ಕುಳಿತು ಹಿಟ್ಲರನ 'ಮೇನ್ ಕೆಂಪ್' ಪುಸ್ತಕ ಓದಿದವರು. ಭಾರತೀಯ ಫ್ಯಾಸಿಸಂನ ಪ್ರತಿಪಾದಕರು ಅತ್ಯಂತ ಒರಟು ರೀತಿಯ ಶಿವ ಸೇನೆ ಮುಖ್ಯಸ್ಥ ಬಾಳ ಠಾಕ್ರೆಯ ರೂಪದಲ್ಲಿದ್ದಾರೆ. ಈತ ಹಿಟ್ಲರನನ್ನು ಅತಿಮಾನವ ಎಂದು ಹೊಗಳುತ್ತಾನೆ. ಇದರ ಮುಖ್ಯ ಕಾರ್ಯ ನಿರ್ವಾಹಕ ನರೇಂದ್ರ ಮೋದಿ, ಗುಜರಾತಿನ ಮುಖ್ಯಮಂತ್ರಿ, ಅಲ್ಲದೆ ಸಿಂಘಾಲರು, ಗಿರಿರಾಜ ಕಿಶೋರರು, ತೊಗಾಡಿಯಾಗಳು ಮತ್ತು ಇತರ ಎರಡು ಕಾಸಿನ 'ಅರ್ಧಕಾಸಿನ' ಗಲಭೆ ಎಬ್ಬಿಸುವ ಸಾಹಸಿಗಳಿಸಿದ್ದಾರೆ.

ವಿಷಯುಗಳನ್ನು ತಿರುಚಿ, ನಮ್ಮ ಧರ್ಮ, ಜಾತಿ, ಇತ್ಯಾದಿಗಳ ಬಗ್ಗೆ ಅಂಧತೆಯ ಬಗ್ಗೆ ಉಬ್ಬಿಸಿ ಬೇರೆ ಧರ್ಮಗಳ ಬಗ್ಗೆ ದ್ವೇಷದ ಜ್ವಾಲೆ ಹೊತ್ತಿಸಿ ಕುದಿಸುವುದು ಅವರ ಕಾರ್ಯ.

ನಾವು ತಾಲಿಬಾನ್ ಅಫಘಾನಿಸ್ತಾನದ ಜನರ ಸಾಮಾಜಿಕ ಮತ್ತು ಸಾಂಸತಿಕ ಜೀವನವನ್ನು ಉಸಿರುಗಟ್ಟಿಸಲು ಧರ್ಮವನ್ನು ಉಪಯೋಗಿಸುವುದನ್ನು ನೋಡುತ್ತೇವೆ. ಇದೇ ನಮ್ಮ ದೇಶದಲ್ಲೂ, ಬದುಕಿನ ಪ್ರತಿ ಮಜಲಿನಲ್ಲೂ ಅಗುವುದನ್ನು ನೋಡುತ್ತಿದ್ದೇವೆ. ಪಾಶ್ಚಾತ್ಯ ಪ್ರಭಾವದ ಬಗ್ಗೆ ದ್ವೇಷದ ಉರಿ ಕಾರುವವರು ಶಿವಸೇನೆಯವರು ಮಾತ್ರವಲ್ಲ ಪ್ರವಾಸೋದ್ಯಮ ಮತ್ತು ಸಂಸತಿ ಇಲಾಖೆಯ ಕೇಂದ್ರದ ರಾಜ್ಯ ಮಂತ್ರಿ ಬಾವಾ ಗಾಟನ್ ಚೌಕಾಲಿಯಾ ಸರ್ಕಾರಿ ಹೊಟೇಲುಗಳಲ್ಲಿ ಡಿಸ್ಕೊತೆಕ್‌ಗಳನ್ನು ನಿಷೇಧಿಸುವ ಮಾತನಾಡುತ್ತಿದ್ದಾರೆ. ಅವರ ಪ್ರಕಾರ ಇದು ನಮ್ಮ ಸಂಸತಿಗೆ ವಿರುದ್ಧ ಮತ್ತು ಅದು ನಮ್ಮ ಭಾರತೀಯ ಸಂಸತಿಯ ಮೇಲೆ ಕೆಟ್ಟ ಪ್ರಭಾವ ಬೀರುತ್ತದೆ. ಕೆಲವು ವರ್ಷಗಳ ಹಿಂದೆ ಸುಷ್ಮಾಸ್ವರಾಜ್ ಅವರು ಫ್ಯಾಷನ್ ಟಿವಿಯ ಬಗ್ಗೆ ದೊಡ್ಡ ಗಲಾಟೆ ಮಾಡಿದ್ದರು. ಸಂಘ ಪರಿವಾರ ದೀಪಾ ಮೆಹ್ತಾ ಅವರ 'ಫೈರ್' ವಿರುದ್ಧ ದೇಶದಾದ್ಯಂತ ಪ್ರತಿಭಟನೆ ಮಾಡಿತು. ಅವರ ನಂತರದ ಸಿನೆಮಾ 'ವಾಟರ್' ಅನ್ನು ತಡೆಯುವಲ್ಲಿ ಯಶಸ್ವಿಯಾದರು.

ಈ ನೈತಿಕ ಪೋಲಿಸುಗಳಿಗೆ ಪುಸ್ತಕಗಳ ಜೊತೆ ಸಮಸ್ಯೆಯಿ... ನಾಟಕಗಳ ಜೊತೆ ಸಮಸ್ಯೆಯಿದೆ. ಸಂಗೀತ ಕಲೆಗಳ ಜೊ... ಸಮಸ್ಯೆಗಳಿವೆ. ಹಿಂದೂ ರಾಷ್ಟ್ರ ಸೃಷ್ಟಿಸುವ ಅವರ ಯತ್ನದ... ಅವರು ಶಾ ಭಾನೊ ಪ್ರಕರಣವನ್ನು ಅತಿಶಯಗೊಳಿ... ಕಾಂಗ್ರೆಸಿನ ಅಂಧ ಮುಸ್ಲೀಮರನ್ನು ತೃಪ್ತಿಗೊಳಿಸುವ ನೀತಿಯ... ತಮ್ಮ ಆಟದ ದಾಳವಾಗಿ ಬಳಸಿಕೊಳ್ಳುವವರು.

ಮುಸ್ಲೀಮ ಅರಸರು ಇತಿಹಾಸದಲ್ಲಿ ಮಾಡಿದ ತಪ್ಪುಗಳ... ಇತಿಹಾಸವನ್ನೇ ತಿದ್ದುವುದರಿಂದ ಸರಿಪಡಿಸಹೊರಟವ... ಇವರು. ಅವರು ಪಠ್ಯಪುಸ್ತಕಗಳನ್ನೇ ತಿರುಚಿ ಎಡ ಒಲ... ಬರಹಗಳನ್ನು ತಿದ್ದಿ ಇಪ್ಪತ್ತೊಂದನೆ ಶತಮಾನದ ಹಿಂದೂ ... ಯುಗದ ಪುನರ್‌ನಿರ್ಮಾಣದ ಕನಸಿನಲ್ಲಿ ಮುಳುಗಿದ್ದಾರೆ...

ಪ್ರತಿ ಫ್ಯಾಸಿಸ್ಟ್ ಪ್ರಭುತ್ವಕ್ಕೂ ತನ್ನ ಉಳಿವಿಗೆ ರಾಕ್ಷಸೀಕ... ಉಳಿದುಕೊಳ್ಳಲು ಸಮೂಹಗಳು/ ಗುಂಪುಗಳು ಬೇಕಾಗುತ್ತ... ಇದು ಒಂದೋ ಎರಡು ಗುಂಪುಗಳಿಂದ ಪ್ರಾರಂಭವಾಗುತ್ತ... ಆದರೆ ಅದು ಅಲ್ಲಿಗೆ ಮುಗಿಯುವುದಿಲ್ಲ ದ್ವೇಷದ ಮೇಲೆ ಕ... ಚಳುವಳಿ ತನ್ನನ್ನು ತಾನು ಉಳಿಸಿಕೊಳ್ಳಲು ನಿರಂತರವಾಗಿ ... ಮತ್ತು ದೊಂಬಿಯನ್ನು ಹುಟ್ಟಿಸುತ್ತಿರುತ್ತದೆ. ನಾವು ಮುಸ್ಲಿ... ಅಥವಾ ಕ್ರಿಶ್ಚಿಯನ್ನರಲ್ಲವಾದ್ದರಿಂದ ನಾವು ಸುರಕ್ಷಿತ ... ನಿಮ್ಮೊಳಗೆ ಅಂದುಕೊಳ್ಳು... ರುವವರಿದ್ದರೆ ಅವರು ಮೂರ್ಖ...

ಸಂಘ ಈಗಾಗಲೇ ಎಡ ಒಲ... ಇತಿಹಾಸಜ್ಞರು ಮತ್ತು ಪಾಶ್ಚಾತ್ಯಕರ... ಯುವ ಪೀಳಿಗೆಯನ್ನು ಗುರಿಯಾಗಿ... ಅದು ತನ್ನ ದ್ವೇಷವನ್ನು ಸ್ಕ... ಧರಿಸುವ ಮಹಿಳೆಯರ ಮೆ... ಹರಿಸುತ್ತಾರೆ. ನಂತರ ಮಾ... ತಿನ್ನುವವರ ವಿರುದ್ಧ ಕುಡಿಯುವ... ವಿರುದ್ಧ, ವಿದೇಶಿ ಸಿನೇಮಾ ನೋಡುವವರ ವಿರುದ್ಧ ತಿರುಗ... ಹಾಗೆ ಅದು ವರ್ಷಕ್ಕೊಮ್ಮೆ ಯಾತ್ರೆಗೆ ಹೋಗದವರ ವಿರು... ದೇವಸ್ಥಾನಗಳಿಗೆ ಹೋಗದವರ ವಿರುದ್ಧ, ದಂತ ಮಂಜ... ಬದಲು ಟೂತ್‌ಪೇಸ್ಟ್ ಉಪಯೋಗಿಸುವವರ ವಿರು... ಅಲೋಪತಿ ಡಾಕ್ಟರುಗಳಿಂದ ಚಿಕಿತ್ಸೆ ಪಡೆಯುವವರ ವಿ... ಮುತ್ತಿಟ್ಟು ಅಥವಾ ಕೈಕುಲುಕಿ ಸ್ವಾಗತಿಸುವವರ ವಿರುದ್ಧ... ಶ್ರೀರಾಮ್' ಎಂದು ಕೂಗದವರ ವಿರುದ್ಧ ತಿರುಗು... ಯಾರೂ ಸುರಕ್ಷಿತರಲ್ಲ.

ಭಾರತವನ್ನು ಜೀವಂತವಾಗಿರಿಸಲು ನಾ... ಬಯಸುವುದಾದರೆ ಇದನ್ನು ನಾವು ಅರ್ಥ ಮಾಡಿಕೊಳ್ಳ...

ಖುಷವಂತಸಿಂಗರ 'ಭಾರತದ ಕೊನೆ' ಪುಸ್ತಕದಿಂದ (ದಿ ವೀಕ್ ಪತ್ರಿಕೆಯ...

ಕೋಮು ಬೆಂಕಿ

ಕೆಳವರ್ಗ ತರುಣರನು ವಂಚಕರು ಇಂದೆ.
ಉಬ್ಬಿಸುತ ಬೆಂಕಿಯೊಳು ದೂಡೂವುದ ಕಂಡೆ
ಈ ರೀತಿ ಮುಗ್ಧರನು ಬಲಿಕೊಟ್ಟು ಮತ್ತೆ
ಸ್ವಾರ್ಥಿಗಳು ಮೀಸೆಯೊಳು ನಗುತಿಹರು ಗೊತ್ತೆ?

- ವಿಡಂಬಾರಿ

ಇನ್‌ಫೋಸಿಸ್ ಕಂಪೆನಿ ಸ್ಥಾಪಕರ ವೇತನವೆಷ್ಟು ಗೊತ್ತೇ?

	ವರ್ಷಕ್ಕೆ
ಎಸ್.ಡಿ. ಶಿಬುಲಾಲ್ (ಅಮೇರಿಕಾದಲ್ಲಿ ವಾಸ)	$ 229,182 (1.1 ಕೋಟಿರೂ)
ಎನ್. ಆರ್. ನಾರಾಯಣ ಮೂರ್ತಿ	$ 54,795 (26 2 ಲಕ್ಷ ರೂ)
ನಂದನ್ ನೀಲಕಾಣಿ	"
ಎಸ್. ಗೋಪಾಲಕೃಷ್ಣನ್	"
ಕೆ. ದಿನೇಶ್	"

ಇದಲ್ಲದೆ ಅವರು ಹೂಡಿದ ಬಂಡವಾಳಕ್ಕೆ ಡಿವಿಡೆಂಡ್ ರೂಪದಲ್ಲಿ (ಶೇ. 540) ಇನ್ನಷ್ಟು ಹಣ ದೊರೆಯುತ್ತದೆ. ಐ... ಸ್ಥಾಪಕರಿಗೆ ಈ ವರ್ಷ ಸಿಕ್ಕಿದ ಒಟ್ಟು ಡಿವಿಡೆಂಡ್ ಹಣ 42.5 ಕೋಟಿರೂ ಮಾತ್ರ (ಸರಾಸರಿ ಒಬ್ಬರಿಗೆ 8.5 ಕೋಟಿರೂ... ಬಿಜೆಪಿ ಸರಕಾರದ ಬಜೆಟ್ಟಿನ ಪ್ರಕಾರ ಈ ಡಿವಿಡೆಂಟ್‌ಗೆ ತೆರಿಗೆ ಕೂಡಾ ಇಲ್ಲ! ಆದರೆ ದುಡಿವ ಜನರಿಗೆ?

PRB DECR 319-79/79 AIKYARANGA WEEKLY Reg. No. 17015/64 CPM(G) / KA /BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH